ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 24

ಜೂನ್ 14, 2009

5/-


2004 2009





ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಮತ್ತು ಪ್ರಜಾಪ್ರಭುತ್ವ





ರಾಷ್ಟ್ರಪತಿಗಳ ಭಾಷಣ

ಮಾತು... ಮಾತು... ಕೃತಿಗಿಳಿಯುವುದೆಷ್ಟು ?

ಬಿಜೆಪಿಯಲ್ಲಿನ ಒಳಕ್ಷೋಭೆಗಳು ಸರ್ಕಾರಕ್ಕೆ ನಿರಂತರ ಗ್ರಹಚಾರ




ಕೇಂದ್ರ ಬಜೆಟ್ ಹೇಗಿರಬೇಕು ?



ಆಸ್ಟ್ರೇಲಿಯಾ : ಭಾರತೀಯ ವಿದ್ಯಾರ್ಥಿಗಳ ಮೇಲೆ ದಾಳಿ ಇದು ಜನಾಂಗ ದ್ವೇಷವೇ ?

ಪ್ರತಿಭಟನೆಗಳನ್ನು ಹತ್ತಿಕ್ಕಲು ನಿಂತಿರುವ ಬಿಜೆಪಿ ಸರ್ಕಾರ



ಭಯೋತ್ಪಾದನೆ ದೇಶವನ್ನು - ಜಗತ್ತನ್ನು ಕಾಡುತ್ತಿರುವ ಒಂದು ಗಂಭೀರ ಸಮಸ್ಯೆ. ಭಯೋತ್ಪಾದನೆಗೆ ಹಲವು ಮುಖ, ಹಲವು ಮೂಲ, ಹಲವು ಆಯಾಮಗಳಿವೆ. ಇದನ್ನು ಮರೆಮಾಚಿ, ನಿರ್ದಿಷ್ಟವಾಗಿ ಒಂದು ಧಾರ್ಮಿಕ ಸಮುದಾಯದ ಹಣೆಗೆ 'ಭಯೋತ್ಪಾದಕರು' ಎಂಬ ಹಣೆಪಟ್ಟಿ ಹಚ್ಚುವ ಕೆಲಸ ನಡೆದಿದೆ. 'ಚಿಂತನ' ಪುಸ್ತಕ ಹೊರತಂದಿರುವ ಕೆ.ಪ್ರಕಾಶ್‌ರವರ 'ಭಯೋತ್ಪಾದನೆ - ಸಿಐಎ, ಜಿಹಾದಿ, ಹಿಂದುತ್ವ, ಇತ್ಯಾದಿ...' ಪುಸ್ತಕ ಸಂಕೀರ್ಣ ಭಯೋತ್ಪಾದನಾ ಸಮಸ್ಯೆಯನ್ನು ಆಳವಾಗಿ, ಸಮಗ್ರವಾಗಿ, ವಸ್ತುನಿಷ್ಠವಾಗಿ ವಿಶ್ಲೇಷಿಸುವ ಒಂದು ಉತ್ತಮ ಕೃತಿ. ಅದರಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ನೀಡಲಾಗಿದೆ. ಇಡೀ ಜಗತ್ತಿನ ಮೇಲೆ ಹಿಡಿತ ಸಾಧಿಸಬೇಕೆಂಬ ಸಾಮ್ರಾಜ್ಯಶಾಹಿ ಶಕ್ತಿಗಳ ಭೀಕರ ದಾಳಿಕೋರ, ಸುಲಿಗೆಕೋರ ನೀತಿ ಹಾಗೂ ಭಾರತದ ಸಂದರ್ಭದಲ್ಲಿ ಸಂಘ ಪರಿವಾರದ ಜನಾಂಗ ದ್ವೇಷ ಹರಡುವ ನೀತಿಯನ್ನು ಹೊರತುಪಡಿಸಿ ಭಯೋತ್ಪಾದನೆಯ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಭಾಗಗಳನ್ನು ಆಯ್ಕೆ ಮಾಡುವಾಗ ಸಾಮಾನ್ಯವಾಗಿ ಆಳುವ ವರ್ಗಗಳು ಮರೆಮಾಚಬಯಸುವ ಈ ಅಂಶಗಳಿಗೆ ಒತ್ತು ನೀಡಲಾಗಿದೆ.

'ಭಯೋತ್ಪಾದನೆ'ಯ ಅರ್ಥ

ಯಾವುದೇ ಸಮಾಜದಲ್ಲಿ ಸಂಪತ್ತು ಮತ್ತು ಸಂಪನ್ಮೂಲ ಗಳನ್ನು, ಅದಕ್ಕಾಗಿ ಅಧಿಕಾರವನ್ನು ತಾನೇ ಹೊಂದಿರಬೇಕೆಂದು ಬಯಸುತ್ತದೋ ಆ ವರ್ಗ, ನಾಗರಿಕ ಸಮಾಜವನ್ನು ಸದಾ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕೆಂದು ಬಯಸುತ್ತದೆ. ಆದಕ್ಕಾಗಿ ನಾಗರಿಕ ಸಮೂಹಗಳ ಮೇಲೆ ಬಲಾತ್ಕಾರದ ಕ್ರಮಗಳನ್ನು, ಹಿಂಸೆ-ದೌರ್ಜನ್ಯಗಳನ್ನು ಹರಿಯಬಿಡುತ್ತದೆ. ಈ ಹಿನ್ನೆಲೆಯಲ್ಲಿ 'ರಾಜಕೀಯ, ಧಾರ್ಮಿಕ ಅಥವಾ ಇತರ ಉದ್ದೇಶಗಳನ್ನು ಸಾಧಿಸುವ ಪ್ರಯತ್ನದಲ್ಲಿ ನಾಗರಿಕ ಸಮೂಹಗಳ ಮೇಲೆ ಬಲಾತ್ಕಾರದ ಕ್ರಮಗಳನ್ನು ಪ್ರಯೋಗಿಸುವುದೇ ಭಯೋತ್ಪಾದನೆ' ಎಂದು ಅಮೆರಿಕದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾದ ಪ್ರೊ.ನೋಮ್ ಚಾಮ್ಸ್ಕಿ ವಿಶ್ಲೇಷಿಸಿದ್ದಾರೆ.

★ ★ ★

ಪ್ರಭುತ್ವ ಭಯೋತ್ಪಾದನೆ

ನಾಗರಿಕ ಸಮುದಾಯಗಳು ಮತ್ತು ಸೆಣಸಾಟ ನಡೆಸಲು ಸಾಧ್ಯವಿಲ್ಲದ ಸಮುದಾಯಗಳು ಯುದ್ಧ ಮತ್ತು ಹಿಂಸೆಗಳಿಂದ ನಿರಂತರವಾಗಿ ತೊಂದರೆಗೆ ಒಳಗಾಗುತ್ತವೆ. ವಸಾಹತುಶಾಹಿ ಸಂದರ್ಭದಲ್ಲಿ ಇಂತಹ ಸಮುದಾಯಗಳನ್ನು ಸಾಮೂಹಿಕವಾಗಿ ಕೊಲ್ಲುವುದನ್ನು ಗಮನಿಸಿದ್ದೇವೆ. 20ನೇ ಶತಮಾನದಲ್ಲಿ ಆಧುನಿಕ ಪ್ರಭುತ್ವಗಳು ತಮ್ಮ ಆಳ್ವಿಕೆಯ ಧೋರಣೆ ಮತ್ತು ಅದನ್ನು ಜಾರಿ ಮಾಡಲು ಭಯೋತ್ಪಾದನೆಯನ್ನು ಪ್ರಮುಖ ಸಾಧನವಾಗಿ ಬಳಸಲು ಪ್ರಾರಂಭಿಸಿದವು. ಒಂದು ರಾಷ್ಟ್ರೀಯ ಎಲ್ಲೆಯೊಳಗೇ ಯಹೂದಿಗಳನ್ನು ಮತ್ತು ಕಮ್ಯೂನಿಸ್ಟರನ್ನು ದೊಡ್ಡ ಪ್ರಮಾಣದಲ್ಲಿ ಕೊಂದ ನಾಜಿ ಹತ್ಯಾಕಾಂಡ ಇದಕ್ಕೊಂದು ಅತ್ಯುತ್ತಮ ಉದಾಹರಣೆ. ಒಂದು ಪ್ರಭುತ್ವವು ಮತ್ತೊಂದು ಪ್ರಭುತ್ವದ ವ್ಯಾಪ್ತಿಯೊಳಗಿನ ಜನಸಮುದಾಯವನ್ನು ಕೊಲ್ಲುವುದಕ್ಕೆ ಜಪಾನ್‌ನ ಹಿರೋಷಿಮಾ-ನಾಗಸಾಕಿ ಮೇಲೆ ಅಮೆರಿಕ ಹಾಕಿದ ಪರಮಾಣು ಬಾಂಬ್‌ಗಳು ಮತ್ತೊಂದು ಉತ್ತಮ ಉದಾಹರಣೆ.

ಸಮಕಾಲೀನ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ಪ್ರಭುತ್ವಗಳು ಮತ್ತು ಅವರ ಬಾಲಬಡುಕ ಸರ್ಕಾರಗಳು ಭಯೋತ್ಪಾದಕ ಹಿಂಸಾಚಾರದ ಮೂಲಗಳಾಗಿವೆ. ಇಂತಹ ಪ್ರಕ್ರಿಯೆ ಬಗ್ಗೆ ನೋಮ್ ಚಾಮ್‌ಸ್ಕಿಯವರ ಮಾತುಗಳು ಗಮನಾರ್ಹವಾಗಿವೆ. ಪ್ರಭುತ್ವ ಭಯೋತ್ಪಾದನೆಯ ಮುಂಚೂಣಿ ನಾಯಕತ್ವದ ಕುರಿತು ಅವರು ಹೀಗೆ ಹೇಳುತ್ತಾರೆ. 'ಜಗತ್ತಿನಲ್ಲಿ ಸಾಕಷ್ಟು ಭಯೋತ್ಪಾದಕ ರಾಷ್ಟ್ರಗಳಿದ್ದರೂ ಸಂಯುಕ್ತ ರಾಷ್ಟ್ರ ಅಮೆರಿಕ ಇದರಲ್ಲಿ ಅಸಾಧಾರಣವಾದುದಾಗಿದೆ. ಏಕೆಂದರೆ ಅಮೆರಿಕ ತನ್ನ ಎದುರಾಳಿಗಳು ನಾಚಿಕೆ ಪಡುವಷ್ಟು ಪ್ರಮಾಣದಲ್ಲಿ ಅಂತರರಾಷ್ಟ್ರೀಯ ಭಯೋತ್ಪಾದನೆಗೆ 'ಅಧಿಕೃತವಾಗಿ' ಬದ್ಧವಾಗಿದೆ. ಕೆಲವು ದೇಶಗಳು ಹೊರದೇಶಗಳಲ್ಲಿ ಹಿಂಸಾತ್ಮಕ ಕೃತ್ಯಗಳನ್ನು ಮಾಡಿಸಲು ವೈಯಕ್ತಿಕ ಭಯೋತ್ಪಾದಕರು ಮತ್ತು ಕ್ರಿಮಿನಲ್‌ಗಳನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತವೆ. ಆದರೆ ರೇಗನ್ ಅವಧಿಯಲ್ಲಿ ಅಮೆರಿಕ ಇನ್ನೊಂದು ಹೆಜ್ಜೆ ಮುಂದಿಟ್ಟಿತು. ಅರೆ-ಖಾಸಗಿ ಅಂತರರಾಷ್ಟ್ರೀಯ ಭಯೋತ್ಪಾದನೆ ಜಾಲವನ್ನು ಮಾತ್ರವಲ್ಲ ತನ್ನ ಭಯೋತ್ಪಾದಕ ಕಾರ್ಯಾಚರಣೆಗಳ ಜಾರಿಗೆ ಮತ್ತು ಹಣಕಾಸು ನೆರವು ಒದಗಿಸಲು - ಅರ್ಜೆಂಟೈನಾ (ಜನರಲ್‌ಗಳ ಕಾಲ) ತೈವಾನ್, ದಕ್ಷಿಣ ಕೊರಿಯಾ, ಇಸ್ರೇಲ್, ಸೌದಿ ಅರೇಬಿಯಾ ಮುಂತಾದ - ಗಿರಾಕಿ ಹಾಗೂ ಹಣಕ್ಕಾಗಿ ಕೂಲಿ (Client and Mercenary States) ಮಾಡುವ ರಾಷ್ಟ್ರಗಳ ಗುಂಪನ್ನು ಸೃಷ್ಟಿಸಿತು.(Pirates and Emperors, Old and New)

★ ★ ★

ಚಿಲ್ಲರೆ ಮತ್ತು ಸಗಟು ಭಯೋತ್ಪಾದನೆ

ಇಸ್ರೇಲ್ ಕಳೆದ 30 ವರ್ಷಗಳಿಂದ ಪ್ಯಾಲೆಸ್ತೀನ್ ಮೇಲೆ ನಡೆಸುತ್ತಿರುವ ಮಾರಣಹೋಮವನ್ನು ಯಾವುದೇ ಚಿಲ್ಲರೆ ಭಯೋತ್ಪಾದನೆ ಸರಿಗಟ್ಟಲು ಸಾಧ್ಯವಿಲ್ಲ. ಅಣ್ವಸ್ತ್ರಗಳನ್ನು ಬಳಸಿರುವ, ಮುಂದೆಯೂ ಬಳಸಲು ಸಜ್ಜಾಗಿರುವ ಏಕೈಕ ದೇಶ ಅಮೆರಿಕವೇ ಆಗಿದೆ. ಅದೇ ರೀತಿ ರಾಸಾಯನಿಕ ಅಸ್ತ್ರಗಳನ್ನು ಬಳಸಿ 5 ಲಕ್ಷ ವಿಯೆಟ್ನಾಮಿ ಮಕ್ಕಳನ್ನು ಅಂಗವಿಕಲರನ್ನಾಗಿ ಮಾಡಿದ್ದು, ಗ್ವಾಟೆಮಾಲಾದಲ್ಲಿ ಚುನಾಯಿತ ಸರ್ಕಾರವನ್ನು ಉರುಳಿಸಿ ಸುಮಾರು 50 ವರ್ಷ ಕಾಲ ಪ್ರತಿಕ್ರಾಂತಿ ಚಟುವಟಿಕೆಗಳಿಗೆ ಬೆಂಬಲ ನೀಡಿದ್ದು, ನಿಕರಾಗುವಾದಲ್ಲಿ ಸ್ಯಾಂಡಿನಿಸ್ಟಾ ಸರ್ಕಾರದ ವಿರುದ್ಧ ಸುಮಾರು 4-5 ವರ್ಷಗಳ ಕಾಲ ನಿರಂತರವಾಗಿ ಪಿತೂರಿಗಳನ್ನು ನಡೆಸಿ 1980ರಲ್ಲಿ ಸರ್ವಾಧಿಕಾರಿ ಸರ್ಕಾರವನ್ನು ಸ್ಥಾಪಿಸಿದ್ದು ಇವೆಲ್ಲವನ್ನು ಚಿಲ್ಲರೆ ಭಯೋತ್ಪಾದಕರು ಸರಿಗಟ್ಟಲು ಸಾಧ್ಯವಿಲ್ಲ.

★ ★ ★

ಇರಾಕ್ ಮೇಲೆ ಯುದ್ಧ -ಕ್ರೌರ್ಯದ ಪರಮಾವಧಿ

ಇರಾಕ್‌ನಲ್ಲಿ ಸಮೂಹ ನಾಶಕ ಶಸ್ತ್ರಾಸ್ತ್ರಗಳಿವೆ, ಇರಾಕ್‌ನೊಂದಿಗೆ ಅಲ್-ಖೈದಾ ಭಯೋತ್ಪಾದಕರ ಸಂಪರ್ಕವಿದೆ ಮತ್ತು ಕೇವಲ 45 ನಿಮಿಷಗಳಲ್ಲಿ ಅಣ್ವಸ್ತ್ರಗಳನ್ನು ಉಡಾಯಿಸುವ ಸಾಮರ್ಥ್ಯವಿದೆ ಎಂಬ ಪ್ರಮುಖ ಕಾರಣಗಳನ್ನು ನೀಡಿ ಅಮೇರಿಕ ನೇತೃತ್ವದ ಪಡೆ ಇರಾಕ್ ಮೇಲೆ ಯುದ್ಧ ಮಾಡಿತು. ಈಗಲೂ ಮುಂದುವರೆದಿದೆ. ಇದಾವುದೂ ಅಲ್ಲಿಲ್ಲ ಮತ್ತು ಈ ಎಲ್ಲ ಕಾರಣಗಳೂ ಸಂಪೂರ್ಣವಾಗಿ ಸುಳ್ಳೆಂದು ಸಾಬೀತಾಗಿದೆ.

ಇರಾಕ್ ಮೇಲೆ ಅಮೆರಿಕದ ಭಯೋತ್ಪಾದಕ ಯುದ್ಧವು ಎರಡು ಹಂತಗಳಲ್ಲಿ ನಡೆದಿದೆ. ಮೊದಲನೆಯದು, ದಶಕಕ್ಕೂ ಹೆಚ್ಚು ಕಾಲ ವಿಧಿಸಲಾಗಿದ್ದ ಆರ್ಥಿಕ ನಿರ್ಬಂಧಗಳ ಯುದ್ಧ. ಲಕ್ಷಾಂತರ ಇರಾಕಿಗಳನ್ನು ಅದರಲ್ಲೂ ಮುಖ್ಯವಾಗಿ ಅಮಾಯಕ ಮಕ್ಕಳು, ಮಹಿಳೆಯರು ಮತ್ತು ವೃದ್ಧರನ್ನು ಜೀವಂತವಾಗಿ ನರಳಿ ಸಾಯುವಂತೆ ಮಾಡಿದ ಯುದ್ಧತಂತ್ರ. ಔಷಧಿಗಳು, ಆಹಾರ ಧಾನ್ಯಗಳು, ಮಕ್ಕಳಿಗೆ ಬೇಕಾದ ಪೌಷ್ಟಿಕ ಪದಾರ್ಥಗಳನ್ನು ಸಿಗದಂತೆ ಮಾಡಿದ್ದು ಅಮೇರಿಕದ ಭಯೋತ್ಪಾದನಾ ತಂತ್ರಕ್ಕೆ ಒಂದು ನಿದರ್ಶನ. ಇವೆಲ್ಲವೂ ಅಂತರ್ರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾಗಿ ನಡೆದವು. ಎರಡನೆಯ ಹಂತ 2003 ಮಾರ್ಚ್‌ನಲ್ಲಿ ಆರಂಭವಾದ ನೇರ ಆಕ್ರಮಣದ ಯುದ್ಧ. ಅಮೇರಿಕ-ಬ್ರಿಟನ್ ಮತ್ತು ಅದರ 'ಮಿತ್ರಪಡೆಗಳು' ಎಡೆಬಿಡದೆ ಹಾಕಿದ ಬಾಂಬುಗಳ ಪ್ರಮಾಣ ಎಷ್ಟಿತ್ತೆಂದರೆ ಹಿರೋಷಿಮಾ-ನಾಗಸಾಕಿಗಳ ಮೇಲೆ ಹಾಕಲಾದ ಬಾಂಬುಗಳ ಹಲವಾರು ಪಟ್ಟು. ಈ ಬಾಂಬ್ ಧಾಳಿಗಳಿಗೆ ಅಮೇರಿಕವು ನೀಡಿದ ಹೆಸರು 'ಭಯ ಮತ್ತು ಭೀತಿ ಹುಟ್ಟಿಸುವ ಯುದ್ಧ' (Campaign to Shock and Awe). ಭಯೋತ್ಪಾದನೆಗೆ ಹತ್ತಿರವಾದ ಪರಿಭಾಷೆಯಿದು. ಯಾರನ್ನು ಭಯಬೀಳಿಸಿದ್ದು ಮತ್ತು ಯಾರಿಗೆ ಭೀತಿ ಹುಟ್ಟಿಸಿದ್ದು? ಅಸಹಾಯಕ ಮತ್ತು ಅಮಾಯಕ ಇರಾಕಿ ನಾಗರೀಕರಿಗೆ ಭಯ ಮತ್ತು ಭೀತಿಯನ್ನು ಉಂಟುಮಾಡಿದ್ದಂತೂ ಖಚಿತ. ಮಾರುಕಟ್ಟೆ ನಿಯಂತ್ರಿತ ಕಾರ್ಪೊರೇಟ್ ಮಾಧ್ಯಮಗಳು ಮಾಡಿದ ಯುದ್ಧದ ನೇರ ಪ್ರಸಾರ ಮತ್ತು ಅವರ ವಿಮರ್ಶೆಗಳು ಭಯಾನಕ ಯುದ್ಧ ಸಿನಿಮಾಗಳ ರೀತಿಯಲ್ಲಿ ಜಗತ್ತಿನ ನಾಗರಿಕರಲ್ಲಿ ಮಾನಸಿಕವಾಗಿ ಭಯ-ಭೀತಿಯನ್ನು ಸೃಷ್ಟಿಸಿತು. ಕೆಲವರಿಗೆ ಪೈಶಾಚಿಕ ಮನೋರಂಜನೆಯನ್ನೂ ಒದಗಿಸಿತು.

ದಿಗ್ಬಂದನಗಳು ಮತ್ತು ವಾಯು ದಾಳಿಯಿಂದ ಸತ್ತವರೆಷ್ಟು ? ಪ್ರಭುತ್ವ ಭಯೋತ್ಪಾದನೆಯ ಬಗೆಗಿನ ತಜ್ಞರಾದ ಎಡ್ವರ್ಡ್ ಎಸ್.ಹರ್ಮನ್, ನೇರ ಯುದ್ಧ ಪ್ರಾರಂಭವಾಗುವ 2 ತಿಂಗಳ ಮೊದಲು ಹೀಗೆ ಬರೆದಿದ್ದಾರೆ: 'ಇರಾಕ್‌ನಲ್ಲಿ ಕೊಲ್ಲಲ್ಪಟ್ಟವರ ಸಂಖ್ಯೆ ಈಗಾಗಲೇ ಗಮನಾರ್ಹವಾಗಿದೆ : ಅಂದಾಜು 10 ರಿಂದ 15 ಲಕ್ಷ, ಇದರಲ್ಲಿ ಅರ್ಧದಷ್ಟು ಸಣ್ಣ ಮಕ್ಕಳು. ಮೆಡಲಿನ್ ಆಲ್‌ಬ್ರೈಟ್(ಅಂದಿನ ಅಮೇರಿಕ ವಿದೇಶಾಂಗ ಕಾರ್ಯದರ್ಶಿ) ದಿಗ್ಬಂಧನಗಳಿಂದ ಸುಮಾರು 5,00,000 ಮಕ್ಕಳು ಸತ್ತಿರಬಹುದೆಂದು ಒಪ್ಪಿಕೊಳ್ಳುತ್ತಾ, ಇಂತಹ ನರಮೇಧವನ್ನು 'ಅದು ಸರಿಯಾದುದೇ ಆಗಿದೆ' ಎಂದಿದ್ದಾರೆ. ಇಂತಹ ಅಮಾನವೀಯ ಹೇಳಿಕೆಯನ್ನು ಬೇರಾರು ನೀಡಲು ಸಾಧ್ಯ? ಮಾನವ ಚರಿತ್ರೆಯಲ್ಲಿ ಎಲ್ಲಾ ಸಮೂಹ ನಾಶಕ ಅಸ್ತ್ರಗಳಿಂದ ಕೊಲ್ಲಲ್ಪಟ್ಟವರಿಗಿಂತ ಹೆಚ್ಚು ಇರಾಕಿಗಳು ದಿಗ್ಬಂದನಗಳಿಂದ ಕೊಲ್ಲಲ್ಪಟ್ಟಿದ್ದಾರೆ ಎಂಬ ಸತ್ಯ - ಭಯೋತ್ಪಾದನೆ ಕುರಿತು ನಮ್ಮ ಮನೋಭಾವವನ್ನು ಕಲಕಬೇಕಲ್ಲವೇ?

★ ★ ★

ಪ್ಯಾಲೆಸ್ತೀನ್ ಮೇಲೆ ದಾಳಿ ಭಯೋತ್ಪಾದನೆಯ ಇನ್ನೊಂದು ಮುಖ

ವಿಶ್ವಸಂಸ್ಥೆಯ ಹಲವಾರು ನಿರ್ಣಯಗಳಿಗೆ ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಸಂಪೂರ್ಣ ವಿರುದ್ಧವಾಗಿ ಇಸ್ರೇಲ್ ದೇಶವು ಪ್ಯಾಲೆಸ್ತೀನ್ ಪ್ರದೇಶಗಳನ್ನು ಆಕ್ರಮಿಸಿಕೊಂಡಿದೆ. ಓಸ್ಲೋ ಒಪ್ಪಂದದ ಪ್ರಕಾರ ಪ್ಯಾಲೆಸ್ತೀನ್‌ಗೆ ಸೇರಿದ ಗಾಜಾ ಪಟ್ಟಿ ಪ್ರದೇಶವನ್ನು ಇಸ್ರೇಲ್ ಅಕ್ರಮವಾಗಿ ವಶಪಡಿಸಿಕೊಂಡು ಪ್ಯಾಲೆಸ್ತೀನ್ ಜನರಿಗೆ ಕನಿಷ್ಠ ಆಹಾರ ಮತ್ತು ಔಷಧಿಗಳನ್ನು ಸಿಗದಂತೆ ಮಾಡಿದೆ. ಗಾಜಾ ಪಟ್ಟಿಯು ಒಂದು ಬೃಹತ್ ಜೈಲಾಗಿದೆ. ಇಲ್ಲಿ ಗುರಿ ನಿರ್ದೇಶಿತ ಕೊಲೆಗಳು, ಮಿಲಿಟರಿ ಧಾಳಿಗಳು ಮತ್ತು ಕನಿಷ್ಠ ಮೂಲ ಸೌಕರ್ಯಗಳ ವಂಚನೆ ನಿತ್ಯದ ಮಾತಾಗಿದೆ. 2008 ಡಿ.27ರಂದು ಇಸ್ರೇಲ್ ಮತ್ತೊಮ್ಮೆ ಪ್ರಾರಂಭಿಸಿರುವ ದಾಳಿ 1500ಕ್ಕೂ ಹೆಚ್ಚು ನಾಗರಿಕರನ್ನು ಕೊಂದಿದೆ. ಮಕ್ಕಳು. ಮಹಿಳೆಯರು, ಆಸ್ಪತ್ರೆಗಳು, ಶಾಲೆಗಳನ್ನು ಗುರಿಯಿಟ್ಟು ನಾಶ ಮಾಡಲಾಗುತ್ತಿದೆ. ಪಶ್ಚಿಮ ದಂಡೆಯನ್ನು ಸಣ್ಣ ಸಣ್ಣ ಪ್ರದೇಶಗಳಾಗಿ ವಿಂಗಡಿಸಿ ಗೋಡೆಗಳ ಮೂಲಕ ಪ್ರತ್ಯೇಕಿಸಲಾಗಿದೆ. ಇಸ್ರೇಲ್ ನಿರಂತರವಾಗಿ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿರುವ ದೇಶವಾಗಿದೆ. ಪ್ಯಾಲೆಸ್ತೀನಿ ಭಾಗದಲ್ಲಿ 'ಹಮಾಸ್' ಒಂದು ಭಯೋತ್ಪಾದಕ ಸಂಘಟನೆ ಮತ್ತು ಅದರ ಜಾಲವನ್ನು ನಾಶ ಮಾಡುವುದಾಗಿ ಹೇಳುತ್ತಾ ಅಮಾಯಕರನ್ನು ಕೊಲ್ಲುತ್ತಿದೆ. ಇದಕ್ಕೆ ಅಮೇರಿಕ ಬೆಂಬಲಿಸುತ್ತಿದೆ. ಇಸ್ರೇಲ್‌ನ ಆಕ್ರಮಣದ ವಿರುದ್ಧ ವ್ಯಾಪಕವಾದ ಪ್ಯಾಲೆಸ್ತೀನಿಯರ ಸಾಮೂಹಿಕ ವಿರೋಧವನ್ನು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಸಂಘಟಿಸಿ ಚಳುವಳಿ ಮಾಡುತ್ತಿದ್ದ PLO (Palestine Liberation Organisation -ಪ್ಯಾಲೆಸ್ತೀನ್ ವಿಮೋಚನಾ ಸಂಘಟನೆ) ನಾಯಕ ಯಾಸೆರ್ ಅರಾಫತ್‌ರವರನ್ನು ಭಯೋತ್ಪಾದಕ ಎಂದು ಜರಿದು ಆ ಪ್ರಜಾಪ್ರಭುತ್ವ ಚಳುವಳಿಯನ್ನು ವಿಭಜನೆ ಮಾಡಲು ಇಸ್ರೇಲ್ ಸ್ವತಃ ಬೆಂಬಲಿಸಿದ ಸಂಘಟನೆಯೇ 'ಹಮಾಸ್'. ಆದರೆ ಅದೇ ಹಮಾಸ್‌ನ್ನು ಈಗ ಭಯೋತ್ಪಾದಕ ಸಂಘಟನೆ ಎನ್ನಲಾಗಿದೆ. ತನ್ನ ಅನುಕೂಲಕ್ಕೆ ತಕ್ಕಂತೆ ಗುಂಪುಗಳಿಗೆ ಶಸ್ತ್ರಾಸ್ತ್ರ ಮತ್ತು ಹಣವನ್ನು ನೀಡುವ ಇಸ್ರೇಲ್ ನೂರಾರು ಅಮಾಯಕರನ್ನು ಕೊಲ್ಲುತ್ತಿರುವುದು ಮಾತ್ರವಲ್ಲ, ಇದರ ಹಲವಾರು ಪಟ್ಟು ಭಯೋತ್ಪಾದಕರನ್ನು ಸೃಷ್ಟಿ ಮಾಡುತ್ತಿದೆಯಷ್ಟೆ. ಇಸ್ರೇಲ್‌ಗೆ ಮತ್ತು ಆ ಮೂಲಕ ಅಮೇರಿಕಕ್ಕೆ ಬೇಕಾಗಿರುವುದೂ ಇದೇ.

★ ★ ★

ತೈಲ ಮತ್ತು ಮಿಲಿಟರಿ ಕೈಗಾರಿಕಾ ಕೂಟ

ಅಮೇರಿಕದ ರಾಷ್ಟ್ರೀಯ ಭದ್ರತಾ ನೀತಿಯು,

ಪುಟ 15ಕ್ಕೆ

ಬಿಜೆಪಿಯಲ್ಲಿನ ಒಳಕ್ಷೋಭೆಗಳು ಸರ್ಕಾರಕ್ಕೆ ನಿರಂತರ ಗ್ರಹಚಾರ

ಕರ್ನಾಟಕದಲ್ಲಿ ಬಿಜೆಪಿ 19 ಸ್ಥಾನಗಳನ್ನು ಗೆದ್ದ ಹಮ್ಮಿನೊಡನೆ ಬೀಗುತ್ತಿತ್ತು. ಲೋಕಸಭೆಯಲ್ಲಿ ಬಿಜೆಪಿ ಪಡೆದ ಸ್ಥಾನಗಳಲ್ಲಿ ಕರ್ನಾಟಕದ್ದೇ ಮೊದಲ ಸ್ಥಾನ. ಗುಜರಾತಿಗಿಂತ ಮೇಲಿನ ಸ್ಥಾನ. ಮಗನನ್ನು ಎಂಪಿ ಮಾಡಿದ್ದಾಯಿತು. ಲೋಕಸಭಾ ಸ್ಥಾನಗಳನ್ನು ಗೆಲ್ಲಲು ಮಾಡಿದ ತಂತ್ರಗಳೆಲ್ಲಾ ಯಶಸ್ವಿಯಾದವು. ಪಕ್ಷದಲ್ಲಿ ಅವರ ಹಿತಶತ್ರುಗಳೆಲ್ಲಾ ತಣ್ಣಗಾದರು. ಯಡಿಯೂರಪ್ಪನವರು ತಮ್ಮ ಗುರಿಗಳನ್ನೆಲ್ಲಾ ಸಾಧಿಸಿದ್ದೇವೆಂಬ ಖುಷಿಯಲ್ಲಿ ಆಕಾಶದಲ್ಲಿ ತೇಲಾಡುತ್ತಿದ್ದರು.

ಬಿಜೆಪಿ ಸರ್ಕಾರ, ಅದರಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಸ್ಥಾನ ಬಂಡೆಯಂತೆ ಗಟ್ಟಿಯಾಯಿತು ಎಂದು ಎಲ್ಲರೂ ಭಾವಿಸಿದ್ದಾಗಲೇ ಹೊರಗಿನ ಯಾವ ಉಳಿ, ಚಾಣಗಳ ಸುತ್ತಿಗೆಗಳ ಏನು ಪೆಟ್ಟೂ ಇಲ್ಲದೆ ಆ ಬಂಡೆಯೊಳಗಿನ ಬಿರುಕುಗಳು ಅದರೊಳಗಿನ ಒಳಜ್ವಾಲೆಯಿಂದಲೇ ಸಿಡಿದೇ ಹೊಗುತ್ತದೇನೋ ಎಂಬಂತೆ ಕಾಣತೊಡಗಿವೆ.

ಒಂದು ಕಡೆ ಬಿಜೆಪಿಯ ದೀರ್ಘ ಕಾಲದ ನಾಯಕ ಈಶ್ವರಪ್ಪನವರು ಶಿವಮೊಗ್ಗದಲ್ಲಿ ಪತ್ರಿಕಾಗೋಷ್ಠಿಯ ಮೂಲಕ ಮೂಡಿಸಿದ ತಲ್ಲಣ. ಮತ್ತೊಂದು ಕಡೆ ಬಳ್ಳಾರಿಯ ಗಣಿ ಮಾಫಿಯಾದ ಮುನಿಸು ಅವರ ಜೊತೆ ನೆರೆದ ಸಚಿವರ ಶಾಸಕರ ಬಲದ ಮೇಲೆ ನಡೆಯುತ್ತಿರುವ ಒಳಸಂಚಿನ ಗಾಳಿ ಸುದ್ದಿಗಳು. ಬಿಜೆಪಿ ಯಡಿಯೂರಪ್ಪನವರು ಧಾರ್ಮಿಕ ಸಮಾರಂಭವೊಂದರಲ್ಲಿ ಶಿವಮೊಗ್ಗ ಮತ್ತು ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಮಗ ರಾಘವೇಂದ್ರನಿಗೆ ಹೆಚ್ಚುವರಿ ಮತಗಳ ಸಂಖ್ಯೆ ಬಗ್ಗೆ ಮಾತನಾಡಿದರೆಂದು ಈಶ್ವರಪ್ಪನವರು ವ್ಯಗ್ರವಾಗಿ ಇಲ್ಲಿಯವರೆಗೆ ಒಳಗೇ ಕುದಿಯುತ್ತಿದ್ದ ಹಲಾಹಲವನ್ನೆಲ್ಲಾ ಹೊರಹಾಕಿದರು. ಮುಖ್ಯಮಂತ್ರಿ ತಮ್ಮ ಮಗನಿಗೆ ಸೀಟು ಕೊಡಿಸಿದ್ದರಿಂದ ಬಿಜೆಪಿಯ ಕಾರ್ಯಕರ್ತರಿಗೆ ಸಿಟ್ಟು ಎಂಬ ಸಂಗತಿಯೊಂದಿಗೆ ಬಿಜೆಪಿಯ ಲೋಕಸಭಾ ವಿಜಯಕ್ಕೆ ಮಸಿ ಬಳಿಯುವಂತೆ 19 ಕ್ಷೇತ್ರಗಳಲ್ಲಿ ಬಿಜೆಪಿ ಗಳಿಸಿದ ವಿಜಯ ಬಿಜೆಪಿಯ ಮೌಲ್ಯಗಳನ್ನು ಗಾಳಿಗೆ ತೂರಿ ಹಣ ಹೆಂಡ ಹಂಚಿ ಗಳಿಸಿದ್ದು ಎಂಬ ಎಲ್ಲರಿಗೂ ಗೊತ್ತಿರುವ ಗುಟ್ಟನ್ನು ಬಿಜೆಪಿಯ ಒಳಗಿನವರಾಗಿ ಘೋಷಿಸಿಬಿಟ್ಟರು. ಅದು ಬಿಜೆಪಿಯ ಮೇಲೆ ಮತ್ತು ಯಡಿಯೂರಪ್ಪನವರ ಮೇಲೆ ಉಳಿದ ರಾಜಕೀಯ ಪಕ್ಷಗಳು ಧಾಳಿ ಮಾಡುವ ಅವಕಾಶ ಕಲ್ಪಿಸಿತು. ಬಿಜೆಪಿ ಸರ್ಕಾರದ ವಾರ್ಷಿಕೋತ್ಸವ ಅಥವಾ ವಿಕಾಸ ಸಂಕಲ್ಪ ಉತ್ಸವಕ್ಕೆ ಬಳ್ಳಾರಿಯ ರೆಡ್ಡಿ ಧಣಿಗಳು ಗೈರು ಹಾಜರಾದದ್ದು ಮಾತ್ರವಲ್ಲದೆ, ತಮ್ಮ ಜಿಲ್ಲೆಯ ಎಲ್ಲಾ ಬಿಜೆಪಿ ಶಾಸಕರನ್ನು ಹಾಗೂ ಇತರ ತಮ್ಮ ಸಹವರ್ತಿ ಸಚಿವರು, ಶಾಸಕರನ್ನು ಬಹಿಷ್ಕರಿಸುವಂತೆ ಮಾಡಿದ್ದು ಬಿಜೆಪಿಯ ಸರ್ಕಾರ ಉರುಳಿಯೇ ಹೋಗುವುದೇ ಎಂಬ ಸಂಶಯ ಭುಗಿಲೇಳುವಂತೆ ಮಾಡಲಾಗಿದೆ. ಆ ಬಗ್ಗೆ ವಾಗ್ವಾದಗಳು, ಪ್ರತ್ಯುತ್ತರಗಳು ಬಿಜೆಪಿ ರಾಷ್ಟ್ರೀಯ ನಾಯಕರ ಒತ್ತಡದ ಮೇಲೆ ಈಶ್ವರಪ್ಪನವರ ವಿವರಣೆ, ಬಿಜೆಪಿ ಸರ್ಕಾರಕ್ಕೆ ಆಪತ್ತು ಬರದಂತೆ ರಾಷ್ಟ್ರೀಯ ನಾಯಕ ಅರುಣ್ ಜೇಟ್ಲಿ ನೇಮಕ ಹೀಗೆ ಈ ಬೆಳವಣಿಗೆಗಳು ಇನ್ನೂ ಮುಂದುವರಿದಿವೆ.

ಬಿಜೆಪಿಯ ಅಧಿಕಾರದಾಹ ಮತ್ತು ಅದಕ್ಕಾಗಿ ಎಲ್ಲ ನೈತಿಕತೆಯನ್ನು ಗಾಳಿಗೆ ತೂರಿದ ಆಪರೇಶನ್ ಕಮಲ ದಂತಹ ಅಸಹ್ಯ ಹುಟ್ಟಿಸುವ ಕ್ರಮಗಳೇ ಈ ಒಳಜ್ವಾಲೆಗಳಿಗೆ ಕಾರಣ ಎಂಬುದು ಕರ್ನಾಟಕದ ಜನರೆಲ್ಲರಿಗೂ ಗೊತ್ತಿರುವ ಸಂಗತಿ. ಅದರ ಜೊತೆಗೆ ವಿವಿಧ ವ್ಯಕ್ತಿ ಮತ್ತು ಅವರ ಸುತ್ತ ನೆರೆದ ಗುಂಪಿನ ಅಧಿಕಾರದಾಹ, ಅಧಿಕಾರವನ್ನು ಉಪಯೋಗಿಸಿ ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡುವ ಧಾವಂತ. ಇವೆರಡೂ ಒಂದರೊಡನೊಂದು ಹೆಣೆದುಕೊಂಡು ಬಿಜೆಪಿಯನ್ನು ತಿನ್ನುತ್ತಿದ್ದರೆ ಅದು ಸ್ವಯಂ ಕೃತಾಪರಾಧ.

ಬಿಜೆಪಿಯಲ್ಲಿ ಇಂದು ನಡೆಯುತ್ತಿರುವ ಬೆಳವಣಿಗೆಗಳಿಂದ ಮೇಲ್ನೋಟಕ್ಕೆ ಈಶ್ವರಪ್ಪ ಒಬ್ಬ ವ್ಯಕ್ತಿಯಾಗಿ ಹಾಗೂ ರೆಡ್ಡಿ ಧಣಿಗಳು ಸಾಕಷ್ಟು ಬಲವಿರುವ ಒಂದು ಗುಂಪಾಗಿ ಭಿನ್ನಮತ ವ್ಯಕ್ತಪಡಿಸುತ್ತಿರುವಂತೆ ಕಾಣುತ್ತಿದೆ. ಈ ಎರಡು ಭಿನ್ನಮತದಿಂದಲೂ ಬಿಜೆಪಿ ಸರ್ಕಾರಕ್ಕೆ ತಕ್ಷಣದ ಅಪಾಯವೇನೂ ಇಲ್ಲ. ಇಬ್ಬರ ಉದ್ದೇಶವೂ ಯಡಿಯೂರಪ್ಪನವರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬುದೇ ಹೊರತು ಸರ್ಕಾರವನ್ನು ಉರುಳಿಸಬೇಕೆಂದಲ್ಲ. ಈಶ್ವರಪ್ಪನವರ ಹಿಂದೆ ಕೂಡ ಒಂದು ಪ್ರಬಲ ಗುಂಪು ಇದೆ. ಈಗ 8 ರಿಂದ 10 ವರ್ಷಗಳಿಂದಲೂ ಬಿಜೆಪಿಯಲ್ಲಿ ರೂಪುಗೊಂಡಿರುವ ಎರಡು ಗುಂಪುಗಳು ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ತೀವ್ರ ಸ್ಪರ್ಧೆ ನಡೆಸುತ್ತಿರುವ ಇಬ್ಬರು ವ್ಯಕ್ತಿಗಳ ಸುತ್ತ ರೂಪುಗೊಂಡಿವೆ. ಒಬ್ಬರು ಯಡಿಯೂರಪ್ಪ ಮತ್ತೊಬ್ಬರು ಅನಂತಕುಮಾರ್. ಇಬ್ಬರೂ ಆರೆಸ್ಸೆಸ್ ಮೂಲದವರೇ. ಅನಂತಕುಮಾರ್ ಹಿಂದೂ ಮತ್ತು ಮುಸ್ಲಿಂ ಮೊದಲಾದ ಕೋಮುವಿಭಜನೆ ಮೊದಲಾದ ಆರೆಸ್ಸೆಸ್‌ನ ಮೂಲ ಸಿದ್ಧಾಂತದ ಜಾರಿಯಲ್ಲಿ ನೀಡಿದ ನಾಯಕತ್ವ, ರೂಪಿಸಿದ ತಂತ್ರಗಾರಿಕೆ, ಅದರಿಂದ ಸೃಷ್ಟಿಸಿದ ಹಿಂದೂ ಮತಬ್ಯಾಂಕ್‌ನಿಂದಾಗಿ ಆರೆಸ್ಸೆಸ್‌ಗೆ ಬಹಳ ಹತ್ತಿರದವರು. ಆರೆಸ್ಸೆಸ್ ಯಡಿಯೂರಪ್ಪ ಲಿಂಗಾಯತರು ಕರ್ನಾಟಕದ ಪ್ರಮುಖ ಜಾತಿಯವರು ಎಂಬ ಕಾರಣಕ್ಕಾಗಿ ತನ್ನ ರಾಜಕೀಯ ಮುಖವಾಡವಾಗಿ ಬಳಸಿಕೊಂಡಿದೆ.



ಅವರು ರೂಪಿಸಿದ ರೈತ ಪರ ಮೊದಲಾದ ನಾಟಕಗಳಲ್ಲಿ ಸಾಥ್ ನೀಡಿದರೂ ತನ್ನ ಮಾತು ನಡೆಯುವಲ್ಲೆಲ್ಲಾ ಪಕ್ಷದ ಕೇಂದ್ರ ನಾಯಕತ್ವ, ಕೇಂದ್ರದ ಮಂತ್ರಿ ಪದವಿಗಳು ಇತ್ಯಾದಿಗಳಲ್ಲಿ ಅನಂತಕುಮಾರ್‌ರವರಿಗೇ ಮಣೆ ಹಾಕುತ್ತಾ ಬಂದಿದೆ. ಈ ಎರಡು ಭಿನ್ನಮತದಿಂದಲೂ ಬಿಜೆಪಿ ಸರ್ಕಾರಕ್ಕೆ ತಕ್ಷಣದ ಅಪಾಯವೇನೂ ಇಲ್ಲ. ಇಬ್ಬರ ಉದ್ದೇಶವೂ ಯಡಿಯೂರಪ್ಪನವರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬುದೇ ಹೊರತು ಸರ್ಕಾರವನ್ನು ಉರುಳಿಸಬೇಕೆಂದಲ್ಲ.

ಈ ವಾರ

ಜಿ.ಎನ್.ನಾಗರಾಜ್

ಇದರಿಂದಾಗಿ ಯಡಿಯೂರಪ್ಪನವರ ಸುತ್ತ ಕೆಲ ಆರೆಸ್ಸೆಸ್ ಮೂಲದ, ಆದರೆ ಬಹಳಷ್ಟು ಇತ್ತೀಚೆಗೆ ಬಿಜೆಪಿ ಸೇರಿದ ಆರೆಸ್ಸೆಸ್ ಸಂಪರ್ಕ ಇಲ್ಲದ ವ್ಯಕ್ತಿಗಳ ಗುಂಪು, ಅನಂತಕುಮಾರ್‌ರವರ ಸುತ್ತ ಆರೆಸ್ಸೆಸ್ ನಿಷ್ಠರ ಬಣ ಕರ್ನಾಟಕದಲ್ಲಿ ಅಧಿಕಾರಕ್ಕಾಗಿ ಮೇಲಾಟ ನಡೆಸುತ್ತಿದೆ. ಈ ಗುಂಪುಗಾರಿಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಹತ್ತಿರ ಬರುತ್ತಿದ್ದಂತೆ ತೀವ್ರವಾಗುತ್ತಾ ನಡೆದಿದೆ. ಒಮ್ಮೆ ಯಡಿಯೂರಪ್ಪನವರು ತಮ್ಮ ಗುಂಪಿನೊಡನೆ ಬಿಜೆಪಿಯಿಂದ ಹೊರಬೀಳುವ ಮಟ್ಟಕ್ಕೂ ಹೋಗಿತ್ತು. ಆದರೆ ಜಾತಿಯ ಬಲದಿಂದ ಇಂದು ಯಡಿಯೂರಪ್ಪನವರು ಬಿಜೆಪಿಯನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತಂದಿದ್ದಾರೆ. ಅದರ ಬಲದಿಂದ ಆರೆಸ್ಸೆಸ್ ತಮಗೇನು ಮಾಡಲಾರದು ಎಂಬಂತೆ ಯಾವ ಅಂಕೆಸಂಕೆಗೂ ಬಗ್ಗದೆ ತಮಗಿಚ್ಛೆ ಬಂದಂತೆ ನಡೆಯುತ್ತಿದ್ದಾರೆ. ಇದು ಬಿಜೆಪಿಯೊಳಗಿನ ಆರೆಸ್ಸೆಸ್ ನಿಷ್ಠ ಅನಂತಕುಮಾರ್ ನೇತೃತ್ವದ ಬಣಕ್ಕೆ ಉರಿಉರಿಯಾಗುತ್ತಿದೆ.

ಈಶ್ವರಪ್ಪನವರ ಸ್ಫೋಟದ ಹಿಂದೆ ಈ ಗುಂಪಿನ ಕಾಣದ ಕೈಗಳಿವೆ. ಯಡ್ಡಿಯೂರಪ್ಪನವರ ವಿರುದ್ಧದ ಭಿನ್ನಮತಕ್ಕೆ ಗಾಳಿ ಹಾಕಿ ಅದನ್ನು ಉಪಯೋಗಿಸಿ ಅವರಿಗೆ ಅಂಕುಶ ಹಾಕಬೇಕೆಂದು, ತಮ್ಮ ಬಣದ ಇಚ್ಛೆಗೆ ತಕ್ಕಂತೆ ಮಣಿಸಬೇಕೆಂಬುದು ಅವರ ಇಚ್ಛೆ.

ಗಣಿಮಾಫಿಯಾದ ಸುತ್ತ ನೆರೆದಿರುವ ಗುಂಪಿಗೆ ಮುಖ್ಯ ಉದ್ದೇಶವೂ ಅದೇ. ಬಿಜೆಪಿ-ಜೆಡಿ(ಎಸ್) ಮೈತ್ರಿ ರೂಪುಗೊಂಡಂದಿನಿಂದ 2008ರ ಚುನಾವಣೆ, ನಂತರದ ದಿನಗಳಲ್ಲಿ ಅಲ್ಪಮತದ ಸರ್ಕಾರಕ್ಕೆ ಬಹುಮತ ತಂದುಕೊಡುವ ಹಲವು ಆಪರೇಷನ್‌ಗಳಲ್ಲಿ ಉಪಚುನಾವಣೆಗಳಲ್ಲಿ ರೆಡ್ಡಿ ಮಾಫಿಯಾದ ಪಾತ್ರ ಪ್ರಧಾನವಾಗಿತ್ತು. ಅವರ ಅನೇಕ ಇಚ್ಛೆಗಳನ್ನು ಯಡಿಯೂರಪ್ಪ ಪೂರೈಸುತ್ತಾ ಕರ್ನಾಟಕದ ಖನಿಜ ಸಂಪತ್ತು, ಭೂ ಸಂಪತ್ತನ್ನು ಬಳ್ಳಾರಿ ಜಿಲ್ಲೆಯ ಇಡೀ ಆಡಳಿತವನ್ನು ಅವರ ವಶಕ್ಕೆ ಒಪ್ಪಿಸಿ ಅವರ ಕುಟುಂಬದ ಸ್ವತ್ತನ್ನು ಹಲವು ಪಟ್ಟು ಹೆಚ್ಚಿಸಲು ಕಾರಣವಾಗಿದ್ದರು. ಆದರೆ ಈ ಮಧ್ಯೆ ರೆಡ್ಡಿ ಕುಟುಂಬದ ಹಲವು ಬೇಡಿಕೆಗಳನ್ನು ಮುಖ್ಯಮಂತ್ರಿಗಳು ಈಡೇರಿಸಲಿಲ್ಲ. ಲೋಕಸಭಾ ಚುನಾವಣೆಯ ನಂತರ ಬಲಗೊಂಡ ಬಿಜೆಪಿ ಮತ್ತು ಯಡಿಯೂರಪ್ಪನವರಿಗೆ ತಮ್ಮ ಮೇಲಿನ ಅವಲಂಬನೆಯ ಅಗತ್ಯವಿಲ್ಲ. ಆದ್ದರಿಂದ ಅವರು ತಮ್ಮ ಹಿಡಿತದಿಂದ ನುಣುಚಿಕೊಳ್ಳುವರು ಎಂಬ ಆತಂಕವಿದೆ. ಆದ್ದರಿಂದ ಈ ಹಿಡಿತವನ್ನುಳಿಸಿಕೊಳ್ಳುವ ಮಾರ್ಗವಾಗಿ ಗುಂಪು ಬೆದರಿಕೆಗೆ ಕೈಹಾಕಿದ್ದಾರೆ. ಎರಡೂ ಗುಂಪಿಗೂ ಯಡ್ಡಿಯೂರಪ್ಪನವರ ಮೇಲೆ ತಂತಮ್ಮ ಹಿಡಿತವನ್ನು ಸಾಧಿಸುವುದೇ ಗುರಿಯಾದರೂ ಈಶ್ವರಪ್ಪನವರೂ ಸೇರಿರುವ ಅನಂತ್‌ಕುಮಾರ್ ಗುಂಪಿಗೂ ರೆಡ್ಡಿಯವರ ಗಣಿ ಮಾಫಿಯಾಕ್ಕೂ ಎರಡು ಮುಖ್ಯ ವ್ಯತ್ಯಾಸವಿದೆ.

ಇಲ್ಲಿಯವರೆಗೂ ಇಲ್ಲದ ಪ್ರಭಾವವನ್ನು ಗಳಿಸಿಕೊಳ್ಳುವ ಗುರಿ ಅನಂತಕುಮಾರ್ ಗುಂಪಿಗೆ, ಇಲ್ಲಿಯವರೆಗೂ ಇದ್ದ ಹಿಡಿತವನ್ನು ಕಳೆದುಕೊಳ್ಳುವ ಭಯ ರೆಡ್ಡಿ ಗುಂಪಿಗೆ.

ಆದರೆ ಪ್ರಧಾನವಾದದ್ದು ಈ ಗುಂಪುಗಳ ರಾಜಕೀಯ ಸ್ವರೂಪದ ವ್ಯತ್ಯಾಸ. ಬಿಜೆಪಿ ಸರ್ಕಾರಕ್ಕೆ ಹಾನಿಯಾಗದಂತೆ ಯಡಿಯೂರಪ್ಪನವರನ್ನು ನಿಯಂತ್ರಿಸುವುದು, ಯಡಿಯೂರಪ್ಪನವರನ್ನು ಕೈಬಿಟ್ಟು ಬಿಜೆಪಿಯ ಮತ್ತೊಬ್ಬ ಲಿಂಗಾಯತರನ್ನು ಮುಂದಿಟ್ಟು ಸರ್ಕಾರ ನಡೆಸುವುದು ಅನಂತಕುಮಾರ್ ಗುಂಪಿನ ಗುರಿಯಾದರೆ, ರೆಡ್ಡಿ ಗುಂಪು ತಮ್ಮ ಹಿತಕ್ಕೆ, ಹಣಕ್ಕೆ ಅಗತ್ಯವಾದರೆ ಬಿಜೆಪಿ ಸರ್ಕಾರವನ್ನು ಉರುಳಿಸಿ ಬೇರೆ ಪಕ್ಷದ, ಬೇರೆ ಕೂಟದ ಸರ್ಕಾರವನ್ನು ಅಧಿಕಾರಕ್ಕೆ ತರುವ ಹಂತಕ್ಕೂ ಹೋಗಲು ಸಿದ್ಧ. ಬಿಜೆಪಿಯ ರಾಷ್ಟ್ರ ನಾಯಕತ್ವ, ಅದಕ್ಕಿಂತಲೂ ದೊಡ್ಡದಾದ ಆರೆಸ್ಸೆಸ್ ಅನ್ನು ಉಪಯೋಗಿಸಿಕೊಂಡು ತಮ್ಮ ಗುರಿಯನ್ನು ಸಾಧಿಸಿಕೊಳ್ಳುವುದು ಅನಂತಕುಮಾರ್ ಗುಂಪಿನ ವಿಧಾನ. ಬಿಜೆಪಿಯ ಒಳಗಿರುವ ಶಾಸಕರಲ್ಲಿ ದೊಡ್ಡ ಗುಂಪನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಪಕ್ಷವನ್ನು ಒಡೆಯುವ, ಸರ್ಕಾರ ಉರುಳಿಸುವ ಮೂಲಕ ತಮ್ಮ ಗುರಿಯನ್ನು ಸಾಧಿಸುವುದು ರೆಡ್ಡಿ ಗುಂಪಿನ ವಿಧಾನ.

ಹೀಗೆ ಎರಡೂ ಗುಂಪುಗಳಿಗೂ ಯಡಿಯೂರಪ್ಪ ಹಾಗೂ ಸರ್ಕಾರದ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸುವುದೇ ಗುರಿಯೇ ಹೊರತು ತಕ್ಷಣದಲ್ಲಿ ಸರ್ಕಾರವನ್ನು ಬೀಳಿಸುವುದಲ್ಲ. ಆದರೆ ಈ ವೈರುಧ್ಯಗಳು ಬಿಜೆಪಿ ಸರ್ಕಾರವಿರುವವರೆಗೂ ಜೀವಂತವಾಗಿರುತ್ತವೆ. ಪರಿಸ್ಥಿತಿಗಳ ಬದಲಾವಣೆಗೆ ಅನುಗುಣವಾಗಿ ತೀವ್ರ ಗೊಳ್ಳುವ ಅಥವಾ ಸದ್ಯಕ್ಕೆ ಸಮಾಧಾನ ವಾಗುವ ಪ್ರಕ್ರಿಯೆಗೊಳಗಾಗುತ್ತವೆ.

ಸುದ್ದಿ ಬಿಂಬ

ರಾಜ್ಯಕ್ಕೆ ವೇದ ವಿಶ್ವವಿದ್ಯಾಲಯ ಅವಶ್ಯವೇ ?

ಡಾ: ಟಿ.ಆರ್.ಚಂದ್ರಶೇಖರ್, ಪ್ರಾಧ್ಯಾಪಕರು,
ಹಂಪಿ ಕನ್ನಡ ವಿಶ್ವವಿದ್ಯಾಲಯ

ಸಂಸ್ಕೃತ ವಿಶ್ವವಿದ್ಯಾಲಯವನ್ನು ಭಾಷೆ ಮತ್ತು ಸಾಹಿತ್ಯದ ದೃಷ್ಟಿಯಿಂದ ಸ್ವಾಗತಿಸಬಹುದು. ನಮ್ಮ ರಾಜ್ಯದಲ್ಲಿ ಆರಂಭದಲ್ಲಿ ಅದನ್ನು ಭಾಷಾ ವಿಶ್ವವಿದ್ಯಾಲಯವನ್ನಾಗಿಯೇ ಪರಿಭಾವಿಸಿ ಕೊಳ್ಳಲಾಗಿತ್ತು. ಅದಕ್ಕಿರುವ ಸಮರ್ಥನೆ ಕೇವಲ ಭಾಷೆಯ ಮತ್ತು ಸಾಹಿತ್ಯದ ನೆಲೆಯದ್ದಾಗಿದೆ. ಆದರೆ ಮುಗುಮ್ಮಾಗಿ ಈಗ ಅದನ್ನು ಸರ್ಕಾರವು 'ಸಂಸ್ಕೃತ ಮತ್ತು ವೇದ' ವಿಶ್ವವಿದ್ಯಾಲಯವನ್ನಾಗಿ ಮಾಡಿಬಿಟ್ಟಿದೆ. ಇಂದು ನಾವು ಜನರನ್ನು ಒಳಗೊಳ್ಳುವ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಸರ್ಕಾರವು ಸಮಾಜದ ಕೆಲವೇ ಕೆಲವು ಕೋಮುಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ 'ವೇದ' ಗಳನ್ನು ಅಧ್ಯಯನ ಮಾಡುವ ಸಂಸ್ಥೆಯನ್ನು ಸ್ಥಾಪಿಸಿದೆ. ಸಂಸ್ಕೃತವು ಜನರನ್ನು ಒಳಗೊಳ್ಳುವ ಭಾಷೆಯಾಗಿದೆ. ಅದರ ಸಾಹಿತ್ಯವು ಸಾರ್ವತ್ರಿಕವಾದುದಾಗಿದೆ. ಆದರೆ ವೇದಗಳು ಜನರನ್ನು ಒಳಗೊಳ್ಳುವ ಸಂಗತಿಗಳಾಗಿಲ್ಲ. ಅವು ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಮೌಲ್ಯಗಳನ್ನು ಪ್ರತಿಪಾದಿಸುವ ಪ್ರಣಾಳಿಕೆಯೇನಲ್ಲ. ಅವುಗಳನ್ನು ನಮ್ಮ ಸಮಾಜದ ಎಲ್ಲ ಸಮುದಾಯಗಳು ಒಪ್ಪಿಕೊಂಡಿಲ್ಲ. ಅವುಗಳ ವಿರುದ್ಧವೇ ಬುದ್ಧ, ಬಸವ, ಅಂಬೇಡ್ಕರ್ ಹೋರಾಟ ಮಾಡಿದ್ದು. ವೇದ ವಿಶ್ವವಿದ್ಯಾಲಯವನ್ನು ಮಾಡುವ ಮೂಲಕ ಸರ್ಕಾರವು ವೇದಾಗಮಗಳನ್ನು ತಿರಸ್ಕರಿಸಿದ ಜನಸಮುದಾಯಗಳಿಗೆ ಅವಮಾನ ಮಾಡುತ್ತಿದೆ. ಶೂದ್ರರ ಮತ್ತು ಅತಿಶೂದ್ರರ ಮನಸ್ಸಿಗೆ ನೋವುಂಟು ಮಾಡುತ್ತಿದೆ. ಏಕೆಂದರೆ ಅವುಗಳಲ್ಲಿರುವ ಅನೇಕ ವಿಚಾರಗಳು, ಮೌಲ್ಯಗಳು ಜೀವ ವಿರೋಧಿಯಾಗಿವೆ. ನಾಡಿನ ಜನಸಂಖ್ಯೆಯ ಶೇಕಡ ನಾಲ್ಕರಿಂದ ಐದರಷ್ಟಿರುವ ಸಮುದಾಯಕ್ಕೆ ಪೂಜ್ಯವಾದ ವೇದಗಳಿಗೆ ಒಂದು ವಿಶ್ವವಿದ್ಯಾಲಯವಾಗುವುದಾದರೆ ಅವೈದಿಕ ವಿಚಾರ ಪ್ರಣಾಳಿಕೆಯನ್ನು ನಂಬಿರುವ ರಾಜ್ಯದ ಜನಸಂಖ್ಯೆಯ ಶೇ.60 ರಿಂದ 70 ರಷ್ಟಿರುವ ಶೂದ್ರಾತಿಶೂದ್ರರ ಸಂಸ್ಕೃತಿಗಳ ಅಧ್ಯಯನಕ್ಕೆ ವಿಶ್ವವಿದ್ಯಾಲಯಗಳನ್ನೇಕೆ ಸ್ಥಾಪಿಸಬಾರದು? ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವೇದಗಳನ್ನು ತಳುಕುಹಾಕಿದ ಮಹಾತಜ್ಞರಿಗೆ ನಮ್ಮ ನಾಡಿನಲ್ಲಿ ವೇದಾಗಮಗಳಿಗೆ ವಿರುದ್ಧವಾದ ವಿಚಾರ ಪ್ರಣಾಳಿಕೆಗಳಲ್ಲಿ ನಂಬಿಕೆಯಿರುವ ಜನಸಮುದಾಯ ಗಳಿವೆಯೆಂಬುದು ಏಕೆ ಹೊಳೆಯಲ್ಲಿಲ್ಲವೋ ತಿಳಿಯುತ್ತಿಲ್ಲ. ಅವರು ನಿಜವಾದ ಅರ್ಥದಲ್ಲಿ ತಜ್ಞರಾಗಿದ್ದರೆ ಅದು ಹೊಳೆಯಬೇಕಾಗಿತ್ತು...

ನಮ್ಮ ನಾಡಿನ ಲಿಂಗಾಯತರು ವೇದಗಳನ್ನು ನಂಬುವುದಿಲ್ಲ. ವೇದಾಧ್ಯಯನಕ್ಕೆ ಒಂದು ವಿಶ್ವವಿದ್ಯಾಲಯವಾಗುವುದಾದರೆ ವಚನ ಸಂಸ್ಕೃತಿಯನ್ನು ಕುರಿತಂತೆ ವಿಶ್ವವಿದ್ಯಾಲಯವೊಂದನ್ನು ಸರ್ಕಾರ ಸ್ಥಾಪಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ನಾಡಿನ ಸರಿಸುಮಾರು ಒಂದೂಕಾಲು ಕೋಟಿಯಷ್ಟಿರುವ ದಲಿತರ ಪ್ರಾತಿನಿಧಿಕ ಸಂಸ್ಥೆಯಾಗಿ ದಲಿತ ಸಂಸ್ಕೃತಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕಾಗುತ್ತದೆ.

ಸರ್ಕಾರವು ಅನೇಕ ವಿಷಯಗಳಲ್ಲಿ ಸಾಮಾಜಿಕ ಪಾರದರ್ಶಕತೆಯನ್ನು ಪಾಲಿಸುತ್ತಿಲ್ಲ. ಜನರಿಗೆ ಗೊತ್ತಾಗದ ರೀತಿಯಲ್ಲಿ ಅದು ಶ್ರೀ ವೇದವ್ಯಾಸ ಯೋಗ ವಿಶ್ವ ವಿದ್ಯಾಲಯವನ್ನು ರಾಜ್ಯದಲ್ಲಿ ಸ್ಥಾಪಿಸಿಬಿಟ್ಟಿದೆ. ಕನ್ನಡ ವಿಶ್ವವಿದ್ಯಾಲಯವು ಆರಂಭವಾಗಬೇಕಾದರೆ ಅದು ಬೇಕೋ ಬೇಡವೋ ಎಂಬುದರ ಬಗ್ಗೆ ಸಾರ್ವಜನಿಕವಾಗಿ ಸಾಕಷ್ಟು ಚರ್ಚೆಯಾಗಿತ್ತು. ಅಂದು ನಮ್ಮ ಅನೇಕ ಬುದ್ಧಿಜೀವಿಗಳು ಕನ್ನಡ ವಿಶ್ವವಿದ್ಯಾಲಯದ ಪ್ರಸ್ತುತತೆ ಬಗ್ಗೆ ಪ್ರಶ್ನೆ ಮಾಡಿದ್ದರು. ಆದರೆ ಇಂದು ಯಾವುದೇ ಸಾರ್ವಜನಿಕ ಚರ್ಚೆಗಳಿಲ್ಲದೆ ವಿಶ್ವವಿದ್ಯಾಲಯಗಳನ್ನು ಸರ್ಕಾರ ಸ್ಥಾಪಿಸುತ್ತಿದೆ. ಅದರಲ್ಲೂ ಒಂದು ಕೋಮಿನ ಹಿತವನ್ನು ರಕ್ಷಿಸುವುದಕ್ಕಾಗಿ ಕಟಿಬದ್ಧವಾಗಿರುವಂತೆ ಅದು ವರ್ತಿಸುತ್ತಿದೆ. ಸಂಸ್ಕೃತ ವಿಶ್ವವಿದ್ಯಾಲಯವನ್ನು ಭಾಷಾ ವಿಶ್ವವಿದ್ಯಾಲಯವನ್ನಾಗಿ ಮಾತ್ರ ಮಾಡಬೇಕು. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಅದಕ್ಕೆ ವೇದಗಳ ಅಧ್ಯಯನವನ್ನು ತಳುಕುಹಾಕಬಾರದು.

...ಸಂಸ್ಕೃತ ವಿಶ್ವವಿದ್ಯಾಲಯವು ಕೇವಲ ಭಾಷೆ ಮತ್ತು ಸಾಹಿತ್ಯದ ವಿಶ್ವವಿದ್ಯಾಲಯವಾಗಬೇಕು. ಅಲ್ಲಿ ಸಂಸ್ಕೃತ ಭಾಷೆ ಮತ್ತು ಭಾಷೆಯಲ್ಲಿರುವ ಸಾಹಿತ್ಯವನ್ನು ಕುರಿತಂತೆ ಅಧ್ಯಯನಗಳಾಗಬೇಕು. ಅದು ಕರ್ಮಕಾಂಡವನ್ನು ಬೋಧಿಸುವ ಸಂಸ್ಥೆಯಾಗಿಬಿಡಬಾರದು. ಯಜ್ಞ ಯಾಗಗಳನ್ನು ಆಚರಿಸುವುದರ ಬಗ್ಗೆ ಪಾಠ ಹೇಳಿಕೊಡುವ ಮತ್ತು ತರಬೇತಿ ನೀಡುವ ವಿಶ್ವವಿದ್ಯಾಲಯವಾಗ ಬಾರದು. ಈ ವಿಶ್ವವಿದ್ಯಾಲಯವು ಅಂತಹ ಸಂಸ್ಥೆಯಾಗಿಬಿಡಬಹುದೆಂಬ ಭಯವಿದೆ. ಏಕೆಂದರೆ ಇಂದು ಜನಪ್ರತಿನಿಧಿಗಳು ಯಜ್ಞ ಯಾಗಗಳನ್ನು ಸರ್ಕಾರದ ಅಂತರ್ಗತ ಭಾಗವಾಗೇ ಆಚರಿಸುತ್ತಿದ್ದಾರೆ.

('ಪ್ರಜಾವಾಣಿ'ಯಿಂದ)

ಸಾಮಾನ್ಯ ನಿಕೃಷ್ಟ ಕಾರ್ಯಕ್ರಮ

ಕ್ಯಾತೆ

ಆರ್.ಕೆ.

'ಡಂಗೂರ' ಪತ್ರಿಕೆಯ ವರದಿಗಾರ ನಕ್ಷತ್ರಿಕ ಲೋಕಸಭಾ ಚುನಾವಣೆಯ ಫಲಿತಾಂಶ ಬಂದು ಹೊಸ ಸಮ್ಮಿಶ್ರ ಸರ್ಕಾರ ರಚನೆಯಾಗುತ್ತಿದೆ ಅಂತ ತಿಳಿದ ಕೂಡಲೇ - ಕಳೆದ ಬಾರಿ 2004 ರಲ್ಲಿ ಸರ್ಕಾರ ರಚನೆಯಾದಾಗಿನ ಸನ್ನಿವೇಶ ನೆನಪಿಸಿಕೊಂಡು ಸಮ್ಮಿಶ್ರ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಬಗೆಗೆ ಎಲ್ಲರಿಗಿಂತಲೂ ಮೊದಲು ವರದಿ ಕೊಟ್ಟುಬಿಡಬೇಕೆಂದು ಹೊರಟೇಬಿಟ್ಟ.

2004ರಲ್ಲಿ ಎಡಪಕ್ಷಗಳು ಸರ್ಕಾರದ ಮೇಲೆ ಇಲ್ಲದ ಸಲ್ಲದ ಷರತ್ತುಗಳನ್ನೆಲ್ಲಾ ಹೇರಿ ಸಿಕ್ಕಾಪಟ್ಟೆ ಬ್ಲಾಕ್‌ಮೇಲ್ ಮಾಡಿಬಿಟ್ಟಿದ್ದರಲ್ಲ. ಈಗಲೂ ಅದೇ ಥರದ ಬ್ರೇಕಿಂಗ್ ನ್ಯೂಸ್ ಸಿಗಬಹುದು ಅಂತ ಅವನ ಲೆಕ್ಕ ಇತ್ತು. ಹೀಗಾಗಿ ಆತ ಮೊದಲು ಪ್ರಧಾನ ಪಕ್ಷ ಕಾಂಗ್ರೆಸನ್ನು ಬಿಟ್ಟು ಇತರ ಯುಪಿಎ ಭಾಗಿಧಾರ ಪಕ್ಷಗಳು ಮತ್ತು ಹೊರಗಿನಿಂದ ಬೆಂಬಲ ಕೊಟ್ಟ ಪಕ್ಷಗಳನ್ನು ಮತ್ತು ಅದರ ನೇತಾರರನ್ನು ಭೇಟಿ ಮಾಡಿದ. ಹಲವು ಬ್ರೇಕಿಂಗ್ ನ್ಯೂಸ್‌ಗಳೇ ಸಿಕ್ಕವು ಅವನಿಗೆ. ಅವು ಕ್ರಮವಾಗಿ ಹೀಗಿವೆ.

ದಕ್ಷಿಣದ ತುದಿಯಿಂದ ನಕ್ಷತ್ರಿಕನ ಯಾತ್ರೆ ಶುರುವಾಯ್ತು.

'ತಲೈವರ್'ಗಾಲಿ ಕುರ್ಚಿಯಲ್ಲಿ ಕುಳಿತಿದ್ದರು. ನಕ್ಷತ್ರಿಕ ಪ್ರಶ್ನೆ ಕೇಳಿದ. ಪಾಪ ವಯಸ್ಸಾಗಿದೆ. ಏನು ಕೇಳಿಸ್ತೋ ಏನೋ? ದೊಡ್ಡ ಮಗ ಅಳಗಿರಿ ಕೇಂದ್ರದಲ್ಲಿ ಮಂತ್ರಿಯಾಗಬೇಕು. ಸ್ಟಾಲಿನ್ನು ಇಲ್ಲಿ ಉಪ ಮುಖ್ಯಮಂತ್ರಿ.... ಅಳಿಯ ದಯಾನಿಧಿ ಮಾರನ್‌ಗೆ ಕ್ಯಾಬಿನೆಟ್ ದರ್ಜೆ ಸಿಗಬೇಕು.... ಡಿಎಂಕೆ ಗೆ 10 ಸ್ಥಾನ ಸಂಪುಟದಲ್ಲಿ ಸಿಗಲೇಬೇಕು. ಆ ಕನ್ನಿಮೊಳಿಗೆ..." ಡಿಎಂಕೆಯ ಕನಿಷ್ಟ ಕಾರ್ಯಕ್ರಮ, ಗರಿಷ್ಟ ಕಾರ್ಯಕ್ರಮ ಎರಡೂ ಗೊತ್ತಾಗಿದ್ದರಿಂದ ನಕ್ಷತ್ರಿಕ ಅಲ್ಲಿಂದ ಜಾಗ ಖಾಲಿ ಮಾಡಿದ.

ಸ್ವಲ್ಪ ಮೇಲೆ ನೆರೆಯ ರಾಜ್ಯ ಕರ್ನಾಟಕಕ್ಕೆ ಬಂದ ಕೂಡಲೇ ಅಲ್ಲಿ ಆವರಿಗೆ ಸಿಕ್ಕಿದ್ದು ದೇವೇಗೌಡರು. ಯುಪಿಎ ಸರ್ಕಾರಕ್ಕೆ ಬೆಂಬಲ ಪತ್ರ ಕೊಟ್ಟು ಅವರು ದಣಿವಾರಿಸಿಕೊಳ್ಳುತ್ತಾ ಕುಳಿತಿದ್ದರು. ಚುನಾವಣೆಯಲ್ಲಿ ದುಡಿದು ಅವರು ತುಂಬಾ ದಣಿದಿದ್ದರಿಂದ ಅವರ ಬಾಯಿಂದ ಮಾತು ಹೊರಡುತ್ತಿರಲಿಲ್ಲ. ಕುಮಾರಸ್ವಾಮಿಯವರು ಸೋನಿಯಾರನ್ನು ಭೇಟಿ ಮಾಡಿ ಬಂದಾಗಿನಿಂದಲೇ ಗೌಡರ ಧ್ವನಿಪೆಟ್ಟಿಗೆ ಕೆಲಸ ನಿಲ್ಲಿಸಿತ್ತು. ಎಲ್ಲ ಕೈಸನ್ನೆಯಲ್ಲೇ. ನಕ್ಷತ್ರಿಕನಿಗೆ ಅವರು ಹೇಳಿದ್ದು ಆಗ ಪೂರ್ತಿ ಅರ್ಥವಾಗಿರಲಿಲ್ಲ. ಜೂನ್ 5 ರಂದು ರಾಜ್ಯ ಜನತಾದಳದ ಶಾಸಕಾಂಗ ಪಕ್ಷದ ಮುಖಂಡರಾಗಿ ರೇವಣ್ಣರನ್ನು ಪಕ್ಷ ಚುನಾಯಿಸಿದ ಮೇಲೆ ಗೌಡ ಸನ್ನೆಗಳೇನೆಂದು ಅರ್ಥವಾಯ್ತು.

"ಸರ್ಕಾರಕ್ಕೆ ಸೇರಿಸಿಕೊಳ್ಳದಿದ್ರೇನಂತೆ. ನಾನು ಮತ್ತೆ ಬೂದಿಯಿಂದ ಏಳುತ್ತೀನಿ.. ಜನತಾದಳನ್ನ ಯಾರೂ ನಾಶ ಮಾಡಕಾಗಲ್ಲ.... ಪಕ್ಷವನ್ನ ಎಲ್ಲ ಕಡೆಗೆ ವಿಸ್ತರಿಸುತ್ತೇವೆ. ಸದ್ಯಕ್ಕೆ ಡೆಲ್ಲಿಯಲ್ಲಿ ಕುಮಾರ, ರಾಜ್ಯದಲ್ಲಿ ರೇವಣ್ಣ, ತುಮಕೂರಿನಲ್ಲಿ ಅನಿತಾ..."

ಜೆಡಿ(ಎಸ್)ನ ಕನಿಷ್ಟ ಕಾರ್ಯಕ್ರಮ ಗೊತ್ತಾದ ನಕ್ಷತ್ರಿಕ ಸೀದಾ ನುಗ್ಗಿದ್ದು ಶರದ್ ಪವಾರ ಮನೆಗೆ. ನೋಡಿದರೆ ಅವರು ಮನೆಯೊಳಗೆ ಇಲ್ಲ. ವಿಚಾರಿಸಿದರೆ, ಪಕ್ಷದ ಸಂಸದರಿಗೆ ನೂತನ ಜವಾಬ್ದಾರಿ ನಿರ್ವಹಿಸೋ ಬಗ್ಗೆ ತರಬೇತಿ ಕೊಡ್ತಾ ಇದ್ದಾರೆ ಅಂತ ತಿಳಿದು ಬರಲಾಗಿ ನಕ್ಷತ್ರಿಕ ತರಬೇತಿ ಜಾಗಕ್ಕೇ ಲಗ್ಗೆಯಿಟ್ಟ. ನೋಡಿದರೆ ಮನೆಯ ಅಂಗಳದಲ್ಲಿ ಪವಾರ್ ಸಾಹೇಬರ ಮಗಳು ಸುಳೆ ಪವಾರ್‌ರಿಗೆ ಟಿಕೆಟ್ ಆಟ ಹೇಳಿಕೊಡುತ್ತಿದ್ದಾರೆ.!!

ಫಾರೂಕ್ ಅಬ್ದುಲ್ಲಾ ಅವರು ಒಮರ್ ಅಬ್ದುಲ್ ಜೊತೆ, ಮುಲಾಯಂಸಿಂಗ್ ಯಾದವರು ಅಖಿಲೇಶ್ ಯಾದವ್ ಜೊತೆ 'ಗಂಭೀರ' ರಾಜಕೀಯ ಚರ್ಚೆಯಲ್ಲಿ ಮುಳುಗಿದ್ದರಿಂದ ಎನ್.ಸಿ, ಎಸ್.ಪಿ ಪಕ್ಷಗಳ ಕನಿಷ್ಟ ಕಾರ್ಯಕ್ರಮ ಏನೂಂತ ತಿಳಿದುಕೊಳ್ಳಲು ಆಗಲಿಲ್ಲ. ದುಃಖದಲ್ಲಿ ಡೆಲ್ಲಿಗೆ ಬಂದರೆ ಕೊಲ್ಕೊತ್ತಾದಿಂದ ಆಗ ತಾನೇ ಬಂದ ಮಮತ ದೀದಿ ಸಿಗಬೇಕೇ?

ಅವರಾದರೂ ಸಿಕ್ಕರಲ್ಲ ಅಂತ ಖುಷಿಯಾಗಿ ಸಮಾನ ಕನಿಷ್ಟ ಕಾರ್ಯಕ್ರಮಕ್ಕೆ ಸಂಬಂಧಿಸಿ ನಿಮ್ಮ ಪಕ್ಷದ ಸಮಾನ ಕನಿಷ್ಟ ಕಾರ್ಯಕ್ರಮ ಏನು ಅಂತ ಕೇಳಿಯೇ ಬಿಟ್ಟ! "ಪಶ್ಚಿಮ ಬಂಗಾಳದ ಮೇಲೆ ಚಂಡಮಾರುತ ಅಪ್ಪಳಿಸಿರೋದರಲ್ಲಿ ಸಿಪಿಐ(ಎಂ) ಕೈವಾಡ ಇದೆ. ಆದ್ದರಿಂದ ಆ ಸರ್ಕಾರವನ್ನು ಕೂಡಲೇ ವಜಾ ಮಾಡಬೇಕು. ಅದಕ್ಕೆ ಯುಪಿಎ ಸರ್ಕಾರಕ್ಕೆ ಡೆಡ್ ಲೈನ್ ನಿ... ಮಾಡ್ತೀವಿ. ಅದೇ ನಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮ" ಅಂದ ಕೂಡಲೇ ಪತ್ರಿಕೆಯ ಡೆಡ್‌ಲೈನ್ ನೆನಪಾಗಿ ನಕ್ಷತ್ರಿಕ ಪತ್ರಿಕಾ ಕಛೇರಿ ಕಡೆ ಓಡಿದ.

ಬರಹಗಾರರು, ವರದಿಗಾರರ ಗಮನಕ್ಕೆ

'ಜನಶಕ್ತಿ' ಯ ಮೇಲೆ ಅಭಿಮಾನವಿಟ್ಟು ಲೇಖನ, ಅಂಕಣ, ವರದಿ, ಫೋಟೋ ಕಳಿಸುತ್ತಿರುವ ಬರಹಗಾರರ ಗಮನಕ್ಕೆ. ಪತ್ರಿಕೆಯು ಶನಿವಾರ ಅಂತಿಮಗೊಂಡು ಭಾನುವಾರ ಮುದ್ರಣಕ್ಕೆ ಹೋಗುವ ಕ್ರಮವನ್ನು ಬದಲಿಸಲಾಗಿದೆ. ಮುಂದೆ ಪತ್ರಿಕೆಯು ಗುರುವಾರ ಸಿದ್ಧಗೊಂಡು ಶುಕ್ರವಾರ ಮುದ್ರಣಕ್ಕೆ ಹೋಗಲಿದೆ. ಹೀಗಾಗಿ ಬದಲಾದ ಸಮಯಕ್ಕೆ ತಕ್ಕಂತೆ ಬರಹಗಳನ್ನು ಕಳಿಹಿಸಲು ಕೋರಲಾಗಿದೆ.

- ಸಂಪಾದಕರು

ಜನಶಕ್ತಿ ಕನ್ನಡ ವಾರಪತ್ರಿಕೆ

ಆಳಿಯನ ಕುರುಡು ಬೆಳಗಾದ ಮೇಲೆ ತಿಳಿಯಿತು ಎಂಬಂತೆ ಲೋಕಸಭಾ ಚುನಾವಣಾ ಫಲಿತಾಂಶ ಬಂದ ಮೇಲೆ ರಾಜ್ಯ ಬಿಜೆಪಿ ಸರ್ಕಾರದ ದುಷ್ಟ ನೀತಿಗಳು ಒಂದೊಂದೇ ಜಾರಿಗೆ ಬರಲು ಆರಂಭವಾಗಿವೆ.

ಹೊಳೆ ದಾಟಿದ ಮೇಲೆ ಅಂಬಿಗನ ಹಂಗೇನು?

ಜನರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುವ ಪ್ರಶ್ನೆಗಳಲ್ಲಿ ನೀತಿ ನಿರ್ಧಾರಗಳ ಪ್ರಶ್ನೆಯಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಧೋರಣೆ ಹೊಳೆ ದಾಟಿದ ಮೇಲೆ ಅಂಬಿಗನ ಹಂಗೇನು? ಎಂಬಂತಿದೆ. ಲೋಕಸಭಾ ಚುನಾವಣಾ ಫಲಿತಾಂಶದ ನಂತರ ಸರ್ಕಾರದ ಹಂಚಿಕೆಯಂತೆ ಈ ಹಿಂದೆಯೇ ನಿಗದಿ ಮಾಡಿಕೊಂಡ ಜನವಿರೋಧಿ ನಿರ್ಧಾರಗಳು ಜಾರಿ ಬರಲು ಶುರುವಾಗಿವೆ.

ಹೆದ್ದಾರಿ ದರೋಡೆ

ಕರ್ನಾಟಕ ರಾಜ್ಯದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಗೊಳ್ಳುವ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲೆಯ ಮುಖ್ಯರಸ್ತೆಗಳು, ಹಾಗೂ ಇತರ ಪ್ರಮುಖ ರಸ್ತೆಗಳಲ್ಲಿ ಒಟ್ಟಾರೆ 215 ಪ್ರಮುಖ ರಸ್ತೆಗಳಲ್ಲಿ ಬಳಕೆ ಶುಲ್ಕವನ್ನು ಸಂಗ್ರಹಿಸಲು ರಾಜ್ಯದ ಸಚಿವ ಸಂಪುಟ ತೀರ್ಮಾನಿಸಿದೆ. ಈ ರೀತಿಯಾಗಿ ಹೊಸದಾಗಿ ಸುಂಕ ವಸೂಲಿ ವ್ಯಾಪ್ತಿಗೆ ಬರುವ ರಸ್ತೆಗಳ ಉದ್ದ ಎಷ್ಟು ಸು. 10 ಸಾವಿರ ಕಿಲೋ ಮೀಟರ್‌ಗಳು. ಪ್ರತಿನಿತ್ಯ 10 ಸಾವಿರಕ್ಕೂ ಹೆಚ್ಚು ವಾಹನ ಸಂಚಾರ ಇರುವ ರಸ್ತೆಗಳನ್ನು ಗುರುತಿಸಿ ಅವುಗಳನ್ನು ಈ ಸುಂಕ ವಸೂಲಿ ...ಯ ವ್ಯಾಪ್ತಿಗೆ ತರಲಾಗಿದೆ. ಮುಂದಿನ 20 ವರ್ಷ ...ಕ ತೆರಿಗೆ ಸಂಗ್ರಹ ನಡೆಯುವುದಂತೆ.

ಇಂತಹ ಪ್ರಸ್ತಾಪವನ್ನು ರಾಜ್ಯ ಸರ್ಕಾರದ ಸಚಿವರು ಈ ಹಿಂದೆಯೇ ಇಟ್ಟಿದ್ದರು. ಚುನಾವಣೆಗಳ ನಂತರ ಇದೀಗ ಜಾರಿಗೆ ಬರುತ್ತಿದೆ ಅಷ್ಟೇ. ಸಾರ್ವಜನಿಕರನ್ನು ಸುಲಿಯುವ ಈ ನೀತಿಗೆ ಸರ್ಕಾರದ ಬಳಿ ಯಾವ ಸಮರ್ಥನೆ ಇದೆ? ಸಾರ್ವಜನಿಕರು ವಾಹನ ಖರೀದಿಸುವಾಗ, ಪೆಟ್ರೋಲ್, ಡೀಸೆಲ್ ಖರೀದಿಸುವಾಗ ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ರಸ್ತೆ ತೆರಿಗೆಯನ್ನು ತೆರುತ್ತಾರೆ. ಅಂತಹ ತೆರಿಗೆಯ ಪ್ರಮಾಣವೇ ಅಗಾಧವಾಗಿರುವಾಗ ಇಂತಹ ಮತ್ತೊಂದು ಸುಂಕ ವಸೂಲಿ ಕ್ರಮ ಈಗಾಗಲೇ ತೆರಿಗೆ ಸುಂಕಗಳ ಭಾರದಿಂದ ಬಳಲಿರುವವರನ್ನೇ ಮತ್ತೆ ಬಡಿಯುವ ಕೆಲಸ.

'ಭೂ ಕಬಳಿಕೆ'ಯ ಕಾರ್ಯ ಯೋಜನೆ

ಲೋಕಸಭಾ ಚುನಾವಣೆಯ ನಂತರ ರಾಜ್ಯ ಸರ್ಕಾರ ಕೈಗೊಂಡ ಅತ್ಯಂತ ಪ್ರಮುಖ ನಿರ್ಧಾರಗಳಲ್ಲಿ ಕೃಷಿ ಭೂಮಿಯನ್ನು ಕೃಷಿಕರಲ್ಲದವರೂ ಸಹ ಕೃಷಿಯೇತರ ಉದ್ದೇಶಗಳಿಗಾಗಿ ಕೊಳ್ಳಬಹುದೆಂಬ ನೀತಿಯ ಜಾರಿಯ ನಿರ್ಧಾರವೂ ಒಂದು.



ಸುಂಕದ ಕಟ್ಟೆ - ವಸೂಲಿ ಕೇಂದ್ರ

ದೇಶದ ಆಹಾರ ಭದ್ರತೆ ಹಾಗೂ ರೈತರ ಹಿತಾಸಕ್ತಿಯನ್ನು ಕಾಪಾಡುವ, ಕೃಷಿಯನ್ನು ಕಾಪಾಡುವ ದೃಷ್ಟಿಯಿಂದ ಕೃಷಿ ಜಮೀನಿನ ಮಾರಾಟ, ಪರಿವರ್ತನೆಗೆ ಸಂಬಂಧಿಸಿದಂತೆ ಹಲವು ಬಿಗಿ ನಿಯಮಗಳಿವೆ. ಇಂತಹ ನಿಯಮಗಳು ತಾನೇ ತಾನಾಗಿ ರೂಪುಗೊಂಡವುಗಳೇನಲ್ಲ. 'ಭೂಮಿ'ಯ ಪ್ರಶ್ನೆಯ ಮೇಲೆ, ಭೂ ಸುಧಾರಣೆಗಾಗಿ ರಾಜ್ಯದಲ್ಲೂ, ದೇಶದಲ್ಲೂ ನಡೆದ ಹತ್ತು ಹಲವು ಜನಾಂದೋಲನಗಳ ಒತ್ತಡದಿಂದಾಗಿ ರೂಪು ಗೊಂಡವು ಈ ನಿಯಮಾವಳಿಗಳು.

ಕರ್ನಾಟಕ ರಾಜ್ಯದಲ್ಲಿ ದೇವರಾಜ ಅರಸು ರೂಪಿಸಿದ ಭೂ ಸುಧಾರಣಾ ಕಾಯ್ದೆಯ ಒಂದು ಪ್ರಧಾನ ಅಂಶ- ಈ ಕೃಷಿ ಭೂಮಿಯ ಪರಭಾರೆಗೆ ಸಂಬಂಧಿಸಿದ ನಿಯಮಾವಳಿ.

ಭೂ ಮಾಲೀಕರ, ಹಾಗೂ ಭೂ ಮಾಫಿಯಾದ ಮರ್ಜಿಯಲ್ಲಿರುವ ಸರ್ಕಾರ ಕೈಗೊಂಡ - ರೈತರ ಭೂಮಿಯನ್ನು ಯಾರು ಬೇಕಾದರೂ ಕಬಳಿಸಲು ಅನುವು ಮಾಡಿಕೊಡುವ - ನಿರ್ಧಾರದ ಹಿಂದೆ ಯಾವ ಜನಹಿತದ ಪ್ರಶ್ನೆಯೂ ಇಲ್ಲ. ಬಿಜೆಪಿಯನ್ನು ಬೆಂಬಲಿಸುವ ಭೂ ಮಾಫಿಯಾದ ಭೂ ದಾಹವನ್ನು ತೀರಿಸುದಷ್ಟೆ ಈ ಕ್ರಮದ ಹಿಂದಿನ ಮೂಲ ಪ್ರೇರಣೆ. ಸರ್ಕಾರ ಈ ಕುರಿತು ಏನೇ ಸದುದ್ದೇಶದ ಕಾರಣಗಳನ್ನು ಕೊಟ್ಟರೂ ಅದು ತನ್ನ ದುಷ್ಟ ಉದ್ದೇಶಗಳನ್ನು ಮರೆಮಾಚುವ ಮಾತಿನ ತೋರಣಗಳಷ್ಟೇ.

ಪ್ರಜಾಪ್ರಭುತ್ವದ ಹಕ್ಕಿನ ಮೇಲೆ ದಾಳಿ

ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರತಿಭಟನೆಯ ಹಕ್ಕು ಎಲ್ಲಾ ಭಾರತೀಯರಿಗೆ ಸಂವಿಧಾನ ಕೊಡಮಾಡಿರುವ ಒಂದು ಮೂಲಭೂತ ಹಕ್ಕು. ಇಂತಹ ಸಂವಿಧಾನಬದ್ಧ, ಪ್ರಜಾಸತ್ತಾತ್ಮಕ ಹಕ್ಕನ್ನೇ ಕಿತ್ತುಕೊಳ್ಳುವ ಪ್ರಜಾಪ್ರಭುತ್ವ ವಿರೋಧಿ ದಾರಿಯಲ್ಲಿ ರಾಜ್ಯ ಬಿಜೆಪಿ ಸರ್ಕಾರ ಹೆಜ್ಜೆ ಇಡುತ್ತಿದೆ. ಕರಾಳ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಡಿದೆನೆಂದು ದಿನ ದಿನವೂ ಕೂಗು ಹಾಕುವ ಬಿಜೆಪಿ ಪಕ್ಷದ ಸರ್ಕಾರದ ನೇತೃತ್ವದಲ್ಲಿ ರಾಜ್ಯದಲ್ಲಿ ಮಾಡ ಹೊರಟಿರುವುದೇನು?

ಬೆಂಗಳೂರಿನಲ್ಲಿ ಜನರ ಪ್ರತಿಭಟನೆ, ಮೆರವಣಿಗೆ, ಪ್ರಜಾಸತ್ತಾತ್ಮಕ ಅಭಿವ್ಯಕ್ತಿಗಳನ್ನು ನಿಗ್ರಹಿಸುವ ನಿಯಮಾವಳಿಗಳನ್ನು ರೂಪಿಸಲಾಗಿದೆ. ಕಾರ್ಖಾನೆ, ಉದ್ದಿಮೆಗಳ ಮಾಲೀಕರಾದ ಬಂಡವಾಳಿಗರ ಪರವಾಗಿ ಈ ದಮನಕಾರಿ ನಿಯಮಾವಳಿ ರೂಪಿಸಲಾಗಿದೆ ಎಂಬುದನ್ನು ಯಾರಾದರೂ ಮೇಲ್ನೋಟಕ್ಕೆ ಗ್ರಹಿಸಬಹುದು(ಇದೇ ಪುಟದ ಮತ್ತೊಂದು ಲೇಖನ ನೋಡಿ).

ಒಟ್ಟಾರೆ ರಾಜ್ಯ ಬಿಜೆಪಿ ಸರ್ಕಾರವು ಹೊರಟಿರುವ ಹಾದಿ ಸ್ಪಷ್ಟವಾಗಿದೆ. ಜನರನ್ನು ಸುಲಿಗೆ ಮಾಡುವಂಥದ್ದು, ಜನರ ಜೀವ ಹಿಂಡುವಂತದ್ದು, ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡುವಂಥದ್ದು ಆಗಿದೆ. ಮತಾಂಧ ಸಿದ್ಧಾಂತದ ಆರೆಸ್ಸೆಸ್ ಆದೇಶ ಪಾಲಿಸಬೇಕಾದ ಹಾಗೂ ಭೂಮಾಲಿಕ, ಬಂಡವಾಳಗಾರ ವರ್ಗದ ಮರ್ಜಿಯಿಂದ ನಡೆಯಬೇಕಾದ ಒಂದು ಸರ್ಕಾರ ಯಾವ ದಾರಿಯಲ್ಲಿ ಹೋಗಲು ಸಾಧ್ಯವೋ ಅದೇ ದಾರಿಯಲ್ಲಿದೆ ಯಡಿಯೂರಪ್ಪನವರ ಸರ್ಕಾರ ಎನ್ನುವುದು ಒಂದು ವರ್ಷದ ಅವಧಿಯಲ್ಲಿ ಹೆಚ್ಚು ನಿಚ್ಚಳವಾಗಿ ಕಾಣತೊಡಗಿದೆ. ○

ಎಚ್ಚರ ...! ನುಸುಳುತ್ತಿದೆ ಅಘೋಷಿತ ತುರ್ತು ಪರಿಸ್ಥಿತಿ

ಕೆ.ಎನ್. ಉಮೇಶ್

ಬೆಂಗಳೂರಿನ ಸಾರಿಗೆ ಸಮಸ್ಯೆ, ಜಾಮ್ ಕಿರಿಕಿರಿಗೆಲ್ಲಾ ಮದ್ದು ಎಂದು ಹೇಳಿಕೊಂಡು ರಾಜ್ಯ ಸರ್ಕಾರದ ಅನುಮೋದನೆ ಮೇರೆಗೆ ಬೆಂಗಳೂರಿನ ಪೋಲೀಸ್ ಆಯುಕ್ತರು 2009 ಮೇ 20 ರಂದು ...ನ ಆದೇಶ ಒಂದನ್ನು ಹೊರಡಿಸಿದ್ದಾರೆ. ಕೆಲ ಮಾಧ್ಯಮಗಳಲ್ಲಿ ಅದನ್ನು ಹಾಡಿ ಹೊಗಳಿ, ಕೆಲವರು ದಿಲ್‌ಕುಶ್ ಆಗಿದ್ದಾರೆ, ಇನ್ನೂ ಮುಂದೆ 'ಹೋರಾಟ, ಚೀರಾಟ', ಮೆರವಣಿಗೆ ಇರಲ್ಲ ಎಂಬೆಲ್ಲಾ ಬಿಂಬಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಒಂದು ಗಣರಾಜ್ಯದಡಿ, ಸಂವಿಧಾನವು ತನ್ನ ಪ್ರಜೆಗಳಿಗೆ ನೀಡುವ ಪ್ರಜಾಸತ್ತಾತ್ಮಕ, ಹಕ್ಕನ್ನೇ ಸದರಿ ಆದೇಶ ಕಸಿಯುತ್ತಿದೆ. ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡಲಿದೆ ಎಂಬುದನ್ನು ಮರೆಮಾಚಲಾಗುತ್ತಿದೆ. ಯಾವುದೇ ನಾಗರೀಕ ಸಮಾಜ ಇಂತಹ ಆದೇಶಗಳಿಗೆ ತೆರಬೇಕಾದ ಬೆಲೆಯು ಸಾಮಾನ್ಯವಲ್ಲ.



ಪೋಲೀಸ್ ಪ್ರಧಾನ ಕಛೇರಿ ಮುಂದೆ ಸಿಐಟಿಯು ಪ್ರತಿಭಟನೆ

04.03.2009ರಂದು ರಾಜ್ಯಸರ್ಕಾರದ ಅನುಮೋದನೆ ಪಡೆದು ಬೆಂಗಳೂರಿನ ಮಾನ್ಯ ಪೋಲೀಸ್ ಆಯುಕ್ತರು 09.03.2009ರಂದು ಸಭೆಗಳು ಹಾಗೂ ಮೆರವಣಿಗೆಗಳ ಪರವಾನಗಿ ಮತ್ತು ನಿಗ್ರಹ(ಬೆಂಗಳೂರು ನಗರ) ಕರಡು ಆದೇಶವನ್ನು ಹೊರಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದರು. ಸಿಐಟಿಯು, ಜೆಎಂಎಸ್ ಒಳಗೊಂಡಂತೆ ಒಟ್ಟು 20 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. 20ರಲ್ಲಿ 11 ಆಕ್ಷೇಪಣೆಗಳು ಆದೇಶದ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಬೇಕೆಂದಿವೆ. ಇತರೆ ಆಕ್ಷೇಪಣೆಗಳಿಗೆ ಸಮಂಜಸ ಉತ್ತರ ನೀಡದೆ, ಸಂಸತ್ ಚುನಾವಣೆಗಳು ಮುಗಿಯುವುದನ್ನೇ ಕಾಯುತ್ತಿದ್ದ ರಾಜ್ಯ ಸರ್ಕಾರ, ಚುನಾವಣೆ ಮುಗಿದು ಫಲಿತಾಂಶ ಹೊರಬಂದ 4 ದಿನಗಳಲ್ಲೇ ಅಂತಿಮ ಆದೇಶ ಹೊರಬರುವ ಮೊದಲೇ ಅದರಲ್ಲಿನ ಅಂಶಗಳನ್ನು ಅಕ್ರಮವಾಗಿ ಜಾರಿಗೆ ತರಲು ಪೋಲೀಸ್ ಇಲಾಖೆ ಕಾರ್ಯಪ್ರವೃತ್ತಿವಾಗಿತ್ತು ಎಂಬುದೇನು ಈಗ ಗುಟ್ಟಾಗಿ ಉಳಿದಿಲ್ಲ.

ಕರಡು ಆದೇಶದಂತೆ...

ಪ್ರತಿಭಟನೆ, ಸಭೆ, ಮೆರವಣಿಗೆ, ಸಮಾವೇಶ ನಡೆಸಲು 7 ದಿನ ಮುಂಚಿತವಾಗಿ ಡಿಸಿಪಿಗಳಿಗೆ ಪರವಾನಗಿ ಕೋರಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಮೆರವಣಿಗೆಗೆ ಹಾಗೂ ಸಭೆ, ಸಮಾವೇಶಕ್ಕೆ ಪ್ರತ್ಯೇಕವಾಗಿ ರೂ.100 ಡಿ.ಡಿ. ಪಾವತಿಸಬೇಕು. ಅರ್ಜಿ ಸಲ್ಲಿಸುವಾಗ ಸಭೆ, ಪ್ರತಿಭಟನೆ ನಡೆಸುವ ಸ್ಥಳದ ಮಾಲೀಕರ ಅನುಮತಿ ಪತ್ರ ಲಗತ್ತಿಸಬೇಕು. ಕಾರ್ಖಾನೆ ಗೇಟ್ ಮೀಟಿಂಗ್, ಪ್ರತಿಭಟನೆಗೆ ಮಾಲೀಕರ ಅನುಮತಿ ಕಡ್ಡಾಯ! ಹೇಗಿದೆ ಬಿಜೆಪಿ ಸರ್ಕಾರದ ಮಾಲೀಕರ ಪರ ಮಸಲತ್ತು? ಯಾವುದೇ ಸಭೆ, ಪ್ರತಿಭಟನೆಯನ್ನು ಮಂದಿರ, ಮಸೀದಿ, ಚರ್ಚ್, ಮುಂತಾದ ಪೂಜಾ ಸ್ಥಳಗಳ ಬಳಿ, ಶಾಲೆ, ಆಸ್ಪತ್ರೆ, ಬಳಿ ನಡೆಸುವಂತಿಲ್ಲ. ಆದೇನೋ ಓ.ಕೆ. ಆದರೆ ಸರ್ಕಾರಿ ಕಛೇರಿ ಹತ್ತಿರ ನಡೆಸುವಂತಿಲ್ಲ ಎಂಬುದ್ಯಾಕೆ? ತುರ್ತುಗಳಲ್ಲಿಯೂ ಸಾಂದರ್ಭಿಕವಾದ ತತ್‌ಕ್ಷಣ ಪ್ರತಿಕ್ರಿಯೆ ಪ್ರತಿಭಟನೆಗೆ ಅವಕಾಶವೇ ಇಲ್ಲ. 7 ದಿನ ಮೊದಲು ಸಲ್ಲಿಸುವ

ಪುಟ 6 ಕ್ಕೆ

ಇದ್ದದ್ದು ಇದ್ದಾಂಗ...

"ಶುಲ್ಕ ಸಂಗ್ರಹ ಅಗತ್ಯವಿರುತ್ತಿರಲಿಲ್ಲ"

"ಕೇಂದ್ರ ಸರಕಾರದಿಂದ ರಸ್ತೆ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಅನುದಾನದಲ್ಲಿ ಶೇ.75 ರಷ್ಟನ್ನಾದರೂ ಪ್ರಾಮಾಣಿಕವಾಗಿ ಖರ್ಚು ಮಾಡಿದ್ದರೆ ರಾಜ್ಯದ ರಸ್ತೆಗಳನ್ನು ಉಕ್ಕಿನಿಂದ ತಯಾರಿಸಬಹುದಿತ್ತು. ಸಾರ್ವಜನಿಕರಿಂದ ಬಳಿಕ ಶುಲ್ಕ ಸಂಗ್ರಹಿಸುವ ಸ್ಥಿತಿ ಬರುತ್ತಿರಲಿಲ್ಲ".

- ಹೈಕೋರ್ಟ್ ನ್ಯಾಯಮೂರ್ತಿ **ಹುಲುವಾಡಿ ಜಿ. ರಮೇಶ್**

★

ಪ್ರಣವ್ ಪ್ರಣೀತ ಆರ್ಥಿಕತೆಯ ನಿರೀಕ್ಷೆಗಳು

"ಕಳೆದ 5 ವರ್ಷಗಳ ಅವಧಿಯಲ್ಲಿ ಎಡಪಕ್ಷಗಳ ಬಾಹ್ಯ ಬೆಂಬಲದಿಂದಾಗಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿಕೂಟ (ಯುಪಿಎ) ಸರ್ಕಾರಕ್ಕೆ ಇನ್ನಷ್ಟು ಆರ್ಥಿಕ ಸುಧಾರಣೆಗಳ ಜಾರಿಗೆ 'ಅಲಿಖಿತ ನಿಷೇಧ'ದ ಲಕ್ಷ್ಮಣ ರೇಖೆ ಅಡ್ಡಿಯಾಗಿತ್ತು. ಈಗ ಅಂತಹ ಅಡಚಣೆಗಳೇನೂ ಇಲ್ಲ. ಆದರೆ, ಎಡಪಕ್ಷಗಳಿಂದಾಗಿಯೇ ದೇಶದ ಆರ್ಥಿಕತೆ ಜಾಗತಿಕ ವಿದ್ಯಮಾನಗಳ ಇನ್ನಷ್ಟು ತೀವ್ರ ಪ್ರಭಾವಕ್ಕೆ ತುತ್ತಾಗಿ ಒದ್ದಾಡಲಿಲ್ಲ ಎನ್ನುವುದೂ ಕಟು ವಾಸ್ತವ. ಈ ಅನುಭವದ ಬೆಳಕಿನಲ್ಲಿಯೇ ಪ್ರಣವ್ ಹೆಜ್ಜೆ ಇಡಬೇಕಾಗಿದೆ."

- **ಕೇಶವ ಜಿ. ಜಿಂಗಾಡೆ**

★

'ದೇಶದ ಅಸ್ತಿತ್ವದ ರಕ್ಷಣೆಗೆ ಹಿಂದುತ್ವ ಇರಲೇಬೇಕು'

'ದೇಶದ ಮೂಲ ಅಸ್ತಿತ್ವದ ರಕ್ಷಣೆಗೆ ಹಿಂದುತ್ವ ಇರಲೇಬೇಕು. ಹಿಂದುತ್ವ ಇಲ್ಲದೆ ದೇಶಕ್ಕೆ ಉಳಿಗಾಲವಿಲ್ಲ' 'ಹಿಂದುತ್ವ ಇಲ್ಲದಿದ್ದರೆ ಹಿಂದುಸ್ತಾನ ಉಳಿಯುವುದಿಲ್ಲ. ದೇಶದ ಇತಿಹಾಸ ಮತ್ತು ಸಂಸ್ಕೃತಿ ರಕ್ಷ... ಹಿಂದುತ್ವ ಉಳಿಸಿಕೊಳ್ಳಬೇಕು'.

- **ಸಂಸದ ಅನಂತಕುಮಾರ್**

★

ಚುಚ್ಚು ಮದ್ದು

'ತಪ್ಪು ಕಲ್ಪನೆ'

- "ದೇಶ ಭಾಷೆಗಾಗಿ ತನ್ನ ಪ್ರಾಣವನ್ನು ತ್ಯಾಗ ಮಾಡಿದ ಸ್ವಾತಂತ್ರ್ಯ ಸೇನಾನಿ ಟಿಪ್ಪು ಸುಲ್ತಾನ್ ಕನ್ನಡ ವಿರೋಧಿ ಎಂಬುದು ತಪ್ಪು ಕಲ್ಪನೆಯಿಂದ ಕೂಡಿದ ರಾಜಕೀಯ ಪ್ರೇರಿತ ಹೇಳಿಕೆ"

- **ಪ್ರೊ. ಮಮ್ತಾಜ್ ಅಲಿ ಖಾನ್**,
ರಾಜ್ಯ ವಕ್ಫ್, ಹಜ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು,

▶ ಈ ಮಾತನ್ನು ನಿಮ್ಮ ಪಕ್ಷದ ಶಂಕರ ಮೂರ್ತಿಗಳ ಕಿವಿಯಲ್ಲಿ ಸ್ವಲ್ಪ ಉಸುರಿ ಸ್ವಾಮಿ , ನೋಡೋಣ..

ನುಸುಳುತ್ತಿದೆ ಅಘೋಷಿತ ತುರ್ತು ಪರಿಸ್ಥಿತಿ....

ಪುಟ 5 ರಿಂದ

ಅರ್ಜಿಗೆ ಅನುಮತಿ ಪೋಲೀಸ್ ಅಧಿಕಾರಿಯ ವಿವೇಚನೆಗೆ ಬಿಟ್ಟಿದ್ದು. ಅನುಮತಿ ನೀಡಿದ ನಂತರ ಪ್ರತಿಭಟನೆ/ಸಭೆಯ ಸ್ಥಳದಲ್ಲಿನ ಪೋಲೀಸ್ ಅಧಿಕಾರಿಯ ನಿರ್ದೇಶನದ ಹೆಸರಿನ ಆದೇಶಗಳನ್ನು ಪಾಲಿಸಬೇಕು. ಪರವಾನಗಿ ನೀಡಿದ ಮೇಲೂ ಸರ್ಕಾರ ಅದನ್ನು ರದ್ದುಗೊಳಿಸಲು ನೀಡುವ ಆದೇಶವನ್ನು ಪಾಲಿಸಬೇಕು. ಅಂದರೆ ಸರ್ಕಾರದ ಜನವಿರೋಧಿ ನೀತಿಯ ವಿರುದ್ಧ ಜನತೆ ನಡೆಸುವ ನ್ಯಾಯಕ್ಕಾಗಿನ ಹೋರಾಟ, ಪ್ರತಿರೋಧವನ್ನು ನಿಗ್ರಹಿಸಲು ಸರ್ಕಾರ ಪಡೆದುಕೊಂಡಿರುವ ಅಧಿಕಾರ ಹೇಗಿದೆ ನೋಡಿ!

ಆಕ್ಷೇಪಣೆಗಳಿಗೆ ಉತ್ತರವಿಲ್ಲ

ಕರಡು ಆದೇಶಕ್ಕೆ ಸಂಘಟನೆಗಳು ಸಲ್ಲಿಸಿದ್ದ ಆಕ್ಷೇಪಣೆಗಳಿಗೆ ಯಾವುದೇ ಉತ್ತರ ನೀಡದೆ, ಏಕಾಏಕಿ ಅಂತಿಮ ಆದೇಶ ಹೊರಡಿಸಿದ್ದಾರೆ. ಆದೇಶದ ಪೀಠಿಕೆಯಲ್ಲಿ ಹೇಳಿರುವುದು ನಗರದ ಸಾರಿಗೆ ಅಡಚಣೆಗೆ ಕಾರಣವಾದ ಮೆರವಣಿಗೆ, ಸಭೆಗಳನ್ನು ನಿಯಂತ್ರಿಸುವುದು(ರೆಗ್ಯುಲೆಟ್ ಮಾಡುವುದು), ಆದರೆ ಆದೇಶದ ಹೆಸರು ಮತ್ತು ಹೂರಣ ನಿಗ್ರಹಿಸುವುದು(ಕಂಟ್ರೋಲ್ ಮಾಡುವುದು) ಹೇಗಿದೆ ನೋಡಿ ಈ ಸರ್ಕಾರ ಹೇಳುವುದು ಹಾಗೂ ಮಾಡುವುದು. ಪ್ರಜಾಪ್ರಭುತ್ವ ಸಮಾಜದಲ್ಲಿ ಆಕ್ಷೇಪಣೆಗಳಿಗೆ ಉತ್ತರ ನೀಡಬೇಕೆಂಬ ಕ್ರಮವನ್ನು ವಹಿಸದೆ, ಅಕ್ರಮ ಎಸಗಿದೆ. ಮಾತ್ರವಲ್ಲ ಅಂತಿಮ ಆದೇಶಕ್ಕೂ ಮುನ್ನ ಅದನ್ನು ಪರೋಕ್ಷವಾಗಿ ಜಾರಿಗೆ ತಂದು, ಹೋರಾಟಗಾರರನ್ನು ಅದಕ್ಕೆ ಒಗ್ಗಿಸಲು ಮುಂದಾಗಿದ್ದಾರೆ.

ಪ್ರತಿಭಟನೆಯ ಬಿಸಿ ಮುಟ್ಟಿದ್ದಾಗ...

ಕರಡು ಆದೇಶ ವಿರೋಧಿಸಿ ಹೋರಾಟ ಹಾಗೂ ಐಕ್ಯತೆ ಘೋಷಣೆಯೊಂದಿಗೆ ಆರಂಭವಾದ ಸಿಐಟಿಯು ಸಂಘಟನೆಯ ವಿವಿಧ ಕಾರ್ಖಾನೆಯ ಕಾರ್ಮಿಕರು ನಗರದ ವಿವಿಧ ಪೋಲೀಸ್ ಠಾಣೆಗಳ ಎದಿರು ಪ್ರತಿಭಟನೆ ನಡೆಸಿದಾಗ ಮೇ 25 ರಿಂದ 30 ರವರೆಗೆ ಸಿಐಟಿಯು ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಪ್ರತಿಭಟನಾ ಸಪ್ತಾಹ ಯಶಸ್ವಿಗೊಳಿಸಿ, 30 ರಂದು ಡಿಜಿಪಿ ಕಛೇರಿಗೆ ರ್‍ಯಾಲಿ ನಡೆಸಲು ಮುಂದಾದಾಗ, ಪೋಲೀಸ್ ಆಯುಕ್ತರು 30 ರೊಳಗೆ ಸಿಐಟಿಯು ಮುಖಂಡರ ಕರೆಸಿ ಮಾತುಕತೆ ನಡೆಸಿ, 'ನಾನಿದ್ದೀನಿ ಹೆದರಬೇಡಿ..' ಕಾರ್ಖಾನೆ ಗೇಟ್ ಮೀಟಿಂಗ್, ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ಪ್ರತಿಭಟನೆಗೆ ತಡೆ ಬರುವ ಅಂಶ ನನ್ನ ತಲೆಗೆ ಬರಲೇ ಇಲ್ಲ ನೋಡಿ, ಏನು ಮಾಡೋದು ಕೋರ್ಟ್ ಟೊಂಕ



ಕಟ್ಟಿ ನಿಂತಿದೆ' ಎಂದು ತಲೆ ಸವರಲು ಮುಂದಾಗಿದ್ದಾರೆ. ಆದರೆ ಅದನ್ನು ಮಾಡಿದ್ದು ಪ್ರತಿಭಟನೆಯ ಬಿಸಿ ಮುಟ್ಟಿದಾಗ.

ಅಂತಿಮ ಆದೇಶ ಹೇಳುವುದೇನು..?

ಆಕ್ಷೇಪಣೆಗಳು, ಪ್ರತಿರೋಧದ ಪರಿಣಾಮ ಅರ್ಜಿ ಸಲ್ಲಿಸಲು ಇದ್ದ ರೂ.100 ಶುಲ್ಕವನ್ನು ರೂ.20ಕ್ಕೆ ಇಳಿಸಿದ್ದಾರೆ. ಒಂದೇ ಠಾಣೆ ವ್ಯಾಪ್ತಿಯಲ್ಲಿ ನಡೆಯುವ ಮೆರವಣಿಗೆಗೆ ಆದರ ವ್ಯಾಪ್ತಿಯ ಪೋಲೀಸ್ ಠಾಣೆ ಇನ್ಸ್‌ಪೆಕ್ಟರ್‌ಗೆ ತೀರ್ಮಾನ ಕೈಗೊಳ್ಳುವ ಅಧಿಕಾರ ನೀಡಿದ್ದಾರೆ ಅಷ್ಟೇ!

ಆದರೆ ಮತ್ತದೆ 7 ದಿನ ಮುಂಚಿ ಅರ್ಜಿ ಸಲ್ಲಿಸಬೇಕು, ಮೆರವಣಿಗೆ, ಸಭೆ, ಧ್ವನಿವರ್ಧಕಗಳಿಗೆ ಪ್ರತ್ಯೇಕ ಪರವಾನಗಿ ಪಡೆಯಬೇಕು. ಸಭೆಗೆ ಡಿಸಿಪಿ ಯಿಂದ ಪರವಾನಗಿ, ಮೆರವಣಿಗೆ ಯಾರದು ಅಭ್ಯಂತರ ಇಲ್ಲ ಎಂಬುದನ್ನು ಖಾತ್ರಿಪಡಿಸಿ ಕೊಳ್ಳಬೇಕು, ಅರ್ಜಿದಾರರ ಸ್ಥಾನಮಾನ, ಪೂರ್ವಾಪರತೆಯನ್ನು ಪರಿಶೀಲಿಸಬೇಕು. ಪ್ರತಿಭಟನೆ, ಸಭೆ, ಸಮಾವೇಶದ ಮಾಲೀಕರ ಅಭ್ಯಂತರ ಇಲ್ಲ ಎಂಬುದನ್ನು, ಸರ್ಕಾರಿ ಕಛೇರಿಗಳಿಗೆ ತೊಂದರೆಯಾಗುವುದಿಲ್ಲ ಎಂಬುದನ್ನು ಪರವಾನಗಿ ನೀಡುವ ಅಧಿಕಾರಿ ಖಾತ್ರಿಪಡಿಸಿಕೊಳ್ಳಬೇಕಂತೆ. ಪ್ರತಿಭಟನೆ ಸ್ಥಳದಲ್ಲಿನ ಪೋಲೀಸ್ ಅಧಿಕಾರಿಯ ನಿರ್ದೇಶನ (Reasonable ಅಲ್ಲದಿದ್ದರು) ಪಾಲಿಸಬೇಕು! ಸದ್ಯ ಇರುವ ಪೋಲೀಸ್ ಕಾಯ್ದೆ, ನಿಯಮಗಳಲ್ಲಿ Resonable directions ಎಂದಿದೆ, ಆದರೆ ಅಂತಿಮ ಆದೇಶದಲ್ಲಿ Resonable ಪದ ಸೇರ್ಪಡೆ ಮಾಡದಿರುವುದು, ಆದೇಶದ ಹಿಂದಿನ ಉದ್ದೇಶವನ್ನು (ದುರುದ್ದೇಶ) ತೋರುತ್ತದೆ. ಅಂತೆಯೇ ನೀಡಿದ ಪರವಾನಗಿ ರದ್ದುಪಡಿಸುವ ಅಧಿಕಾರ ಸರ್ಕಾರದ ಕೈಗೆ!

ಪರಿಣಾಮವೇನು?

ಪ್ರಸ್ತುತ ಆರ್ಥಿಕ ಹಿಂಜರಿತದ ಹೆಸರಿನಲ್ಲಿ ಲೇ ಆಫ್, ಪೇ ಆಫ್, ರಿಟ್ರೆಂಚ್‌ಮೆಂಟ್, ಅಂದರೆ ಉತ್ಪಾದನೆ ಸ್ಥಗಿತತೆ, ವೇತನ ನಿರಾಕರಣ, ಕಾರ್ಮಿಕರ ವಜಾ ಮುಂತಾದ ಕ್ರಮಗಳಿಗೆ ಮಾಲೀಕರು ಮುಂದಾಗಿರುವಾಗ ಎದ್ದು ಬರುವ ಹೋರಾಟ, ಪ್ರತಿಭಟನೆಗಳನ್ನು ಹತ್ತಿಕ್ಕಲು ಬಿಜೆಪಿ ಸರ್ಕಾರವು ತನ್ನ ವರ್ಷಾಚರಣೆಯ ಯಶಸ್ವಿ ಸಾಧನೆಯಾಗಿ ಬಂಡವಾಳಗಾರರಿಗೆ ನೀಡಿರುವ ಕೊಡುಗೆ ಇದು.

ಇದುವರೆಗೆ ಗೇಟ್ ಮೀಟಿಂಗ್‌ಗಳನ್ನು, ಗೇಟ್ ಬಳಿ ಪ್ರತಿಭಟನೆ, ಹೋರಾಟಗಳನ್ನು ತಡೆಯಲು ಮಾಲೀಕರು ನ್ಯಾಯಾಲಯಕ್ಕೆ ಹೋಗಿ ಇಂಜಕ್ಷನ್ ಅಂದರೆ ತಡೆಯಾಜ್ಞೆ ಪಡೆಯಬೇಕಿತ್ತು. ಆದರೆ ಈ ಆದೇಶದಿಂದಾಗಿ ನ್ಯಾಯಾಲಯಕ್ಕೆ ಹೋಗುವ ಇಂಜಕ್ಷನ್ ಕೇಳುವ, ಪಡೆಯುವ ಅವಶ್ಯಕತೆ ಇಲ್ಲ.



ಅಂದರೆ ಗೇಟ್ ಮೀಟಿಂಗ್, ಪ್ರತಿಭಟನೆಯ ಸ್ಥಳದ(ಕಾರ್ಖಾನೆಯ) ಮಾಲೀಕರು ಕಂಪನಿಯಾದ ಕಾರಣ ಕಂಪನಿಯು ಅನುಮತಿಸುವ ಸಾಧ್ಯತೆ ಇದೆಯಾ ಎಂದಾದರೂ ಯೋಚಿಸಬೇಕಿಲ್ಲವೇ. ಅಂದರೆ ಮಾಲೀಕರ ಅಭ್ಯಂತರದ ಹೆಸರಿನಲ್ಲಿ ಗೇಟ್ ಮೀಟಿಂಗ್ ಪ್ರತಿಭಟನೆಗಳನ್ನು ಇಲ್ಲದಾಗಿಸುವ ತಂತ್ರ.

ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ವಿದ್ಯಾರ್ಥಿ-ಯುವಜನತೆ ರೈತರು, ಕೂಲಿಕಾರ, ಕಾರ್ಮಿಕರು, ನೌಕರರು ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಸರ್ಕಾರಿ ಕಛೇರಿಗಳ ಮುಂದೆಯೂ ಪ್ರತಿಭಟಿಸುವಂತಿಲ್ಲ. ಅದಕ್ಕೆ ಆ ಕಛೇರಿಯ ಮಾಲೀಕರು, ಅಧಿಕಾರಿಗಳ ಅನುಮತಿ ಪಡೆಯಬೇಕು. ಅಂದರೆ ರೇಷನ್ ಬೇಕೆಂದು ಆಹಾರ ಇಲಾಖೆ ಮುಂದೆ, ಕಾರ್ಮಿಕರು ಕಾರ್ಮಿಕ ಇಲಾಖೆ ಮುಂದೆ, ವಿದ್ಯಾರ್ಥಿಗಳು ಶಿಕ್ಷಣ ಇಲಾಖೆ ಮುಂದೆ, ರೈತರು ಕೃಷಿ ಇಲಾಖೆ ಕಛೇರಿಗಳ ಮುಂದೆ ಪ್ರತಿಭಟಿಸುವಂತಿಲ್ಲ.

ಒಂದೇ ಏಟಿನಲ್ಲಿ ಮಾಲೀಕರಿಗೂ ಲಾಭ, ಸರ್ಕಾರಕ್ಕೂ ಲಾಭ ಹೇಗಿದೆ ಬಿಜೆಪಿ ಸರ್ಕಾರದ ಒಂದು ವರ್ಷದ ಸಾಧನೆ!ಒಟ್ಟಾರೆ ಇಡೀ ರಾಜ್ಯದ ಜನತೆಯ ಹೋರಾಟದ ಕೇಂದ್ರವಾದ ಬೆಂಗಳೂರಿನಲ್ಲಿ ಹೋರಾಟಗಳು, ಪ್ರತಿಭಟನೆ, ಸಭೆ, ಸಮಾವೇಶಗಳನ್ನು ನಿಗ್ರಹಿಸಿದರೆ, ಬೆಂಗಳೂರು ವಿಶ್ವದರ್ಜೆ ನಗರವಾಗಲಿದೆ. ವಿಶ್ವದ ಬಂಡವಾಳ ಬೆಂಗಳೂರಿಗೆ ಹರಿದು ಬರಲಿದೆ. ಈಗಾಗಲೇ ಬಹುರಾಷ್ಟ್ರೀಯ ಬಂಡವಾಳದ ಕೇಂದ್ರವಾಗಿದೆ ಬೆಂಗಳೂರು ಅಂತರಾಷ್ಟ್ರೀಯ ಬಂಡವಾಳದ ಕೇಂದ್ರವಾಗಲಿದೆ. ಅಭಿವೃದ್ಧಿ ತ್ವರಿತಗತಿಯಲ್ಲಿ ಆಗಲಿವೆ. ಅದೇ ನಮ್ಮ ಮಂತ್ರ, ಅದುವೆ ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ... ಎಂಬ ಮುಖ್ಯಮಂತ್ರಿ ಯಡಿಯೂರಪ್ಪನವರ ಉದ್ದೇಶ ಅದಕ್ಕಾಗಿ ಏನೆಲ್ಲಾ ಮಾಡಲು ತಯಾರು ಎಂಬ ಅವರ ಮಾತಿನಂತೆ ನಡೆದಿದ್ದಾರೆ. ಅದರ ಫಲವೇ ಪ್ರತಿಭಟನೆ, ಹೋರಾಟ, ಸಭೆ, ಸಮಾವೇಶ ನಿಗ್ರಹಿಸುವ ಆದೇಶ. ಶ್ರೀಮತಿ ಇಂದಿರಾಗಾಂಧಿ 70ರ ದಶಕದ ಕೊನೆಯಲ್ಲಿ ಹೇರಿದ್ದ ಘೋಷಿತ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಬಂಧಿತರಾಗಿದ್ದ ಮುಖಂಡರನ್ನು ಇರಿಸಿದ್ದ ಕೇಂದ್ರ ಕಾರಾಗೃಹವನ್ನು 'ಸ್ವತಂತ್ರ ಪಾರ್ಕ್' ಮಾಡಿರುವ ಈ ಸರ್ಕಾರ. ಅಂತೆಯೇ ಜನತೆಯ ಪ್ರತಿಭಟನೆಯ ಹಕ್ಕನ್ನು ಕಸಿಯುವ, ನ್ಯಾಯಬದ್ಧ ಪ್ರತಿರೋಧಗಳನ್ನು ಇಲ್ಲವಾಗಿಸುವ ಈ ಆದೇಶದ ಮೂಲಕ ಅಘೋಷಿತ ತುರ್ತು ಪರಿಸ್ಥಿತಿಯನ್ನು ರಾಜ್ಯದಲ್ಲಿ ನುಸುಳಲು ಅನುವುಗೊಳಿಸಿದೆ. ಜನತೆಯ ಸ್ವತಂತ್ರ ಹರಣಮಾಡಿ, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲು ಸನ್ನದ್ಧಾಗಿದೆ. ಎಚ್ಚರ, ಎಚ್ಚರ ನುಸುಳುತ್ತಿದೆ ಅಘೋಷಿತ ತುರ್ತು ಪರಿಸ್ಥಿತಿ!

ಪಶ್ಚಿಮ ಬಂಗಾಳ

75 ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಹೇರುವ-ಮೊದಲೇ 70ರ ದಶಕದ ಮೊದಲ ಭಾಗದಲ್ಲೇ ಪಶ್ಚಿಮ ಬಂಗಾಳದಲ್ಲಿ ಭಯಾನಕ ತುರ್ತು ಪರಿಸ್ಥಿತಿಯ ವಾತಾವರಣ ಸೃಷ್ಟಿಸಲಾಗಿತ್ತು. ತುರ್ತುಪರಿಸ್ಥಿತಿ ಕಾಲದ ಸಂಜಯ್‌ಗಾಂಧಿ ಬ್ರಿಗೇಡ್‌ನ ಗೂಂಡಾಪಡೆಯ ನಾಯಕಿಯಾಗಿದ್ದ ಮಮತಾ ಇಂದು 'ಮಮತಾ ದೀದಿ'ಯಾಗಿ ಅದೇ ಪರಿಸ್ಥಿತಿಯನ್ನು ಮರು ಸೃಷ್ಟಿಸಲು ಹೊರಟಿದ್ದಾರೆ.

70 ರ ದಶಕದ ಹಿಂಸಾಚಾರಗಳ ಮರುಕಳಿಕೆಗೆ ಹುನ್ನಾರ

ತೃಣಮೂಲ ಕಾಂಗ್ರೆಸ್ ಈಗ ಕೇಂದ್ರ ಸರಕಾರದ ಭಾಗವಾಗಿದ್ದರೂ, ಒಬ್ಬ ಸಂಪುಟ ದರ್ಜೆಯ ಮಂತ್ರಿಯಲ್ಲದೆ ಇನ್ನೂ ಆರು ಲೋಕಸಭಾ ಸದಸ್ಯರು ಕೇಂದ್ರ ಸಂಪುಟದಲ್ಲಿ ಅಧಿಕಾರ ವಹಿಸಿಕೊಂಡರೂ ಪಶ್ಚಿಮ ಬಂಗಾಲದಲ್ಲಿ ಇನ್ನೂ ಅದು ಬೇಜವಾಬ್ದಾರಿ ಪಕ್ಷವಾಗಿಯೇ ವರ್ತಿಸುತ್ತಿದೆ.

ಚುನಾವಣಾ ಫಲಿತಾಂಶ ಬರುತ್ತಿದ್ದಂತೆಯೇ ಇಬ್ಬರು ಎಡರಂಗದ ಕಾರ್ಯಕರ್ತರ ಕೊಲೆಯಾಗಿದೆ. ಹೌರಾ ಸಂಸದೀಯ ಕ್ಷೇತ್ರದಲ್ಲಿ ಕಾರ್ಯಕರ್ತರು ಚಿತ್ನನ್ ಗ್ರಾಮ ಪಂಚಾಯತ್‌ನ ಸಮಸ್ತ ಪ್ರದೇಶದ ಮೇಲೆ ಧಾಳಿ ನಡೆಸಿ ಲೂಟಿ, 43 ಮನೆಗಳಿಗೆ ಬೆಂಕಿ ಹಚ್ಚಿದರು. ಹೆಂಗಸರು, ಮಕ್ಕಳನ್ನು ಹಿಂಸಿಸಿದರು. ಸಂತ್ರಸ್ತ ಜನಗಳನ್ನು ಒಂದು ತಾತ್ಕಾಲಿಕ ಪರಿಹಾರ ಶಿಬಿರಕ್ಕೆ ಸ್ಥಳಾಂತರಿಸಲಾಯಿತು. ಮುರ್ಷಿದಾ ಬಾದಿನಲ್ಲಿ ಸಿಪಿಐ(ಎಂ) ಕಾರ್ಯಕರ್ತ ಮಂತಜ್ ಶೇಖ್‌ನನ್ನು ಕೊಂದರು. ರಾಣಿನಗರ ಪ್ರದೇಶದಲ್ಲಿ ಭಯೋತ್ಪಾದನೆ ಹರಿಯ ಬಿಟ್ಟು ಗೋಪಾಲ್ ಮೊಂಡಲ್ ಎಂಬ ಪೋಲೀಸ್ ಅಧಿಕಾರಿಯನ್ನು ಕೊಂದರು. ಮಾಲ್ದಾದ ಕಾಲಿಯಾಗಂಜ್‌ನಲ್ಲಿ ಸಿಪಿಐ(ಎಂ) ಕಾರ್ಯಕರ್ತರ 30 ಮನೆಗಳಿಗೆ ಬೆಂಕಿ ಹಚ್ಚಿದರು. ಬೀರ್‌ಭೂಮ್ ಕ್ಷೇತ್ರದಲ್ಲಿ ಮಹಮ್ಮದ್‌ಬಜಾರ್ ಕ್ಷೇತ್ರದ ಶಾಸಕ ಧಿರೇನ್ ಬಾಗ್ದಿಯ ಮೇಲೆ ಹಲ್ಲೆ ನಡೆದು ಅವರನ್ನು ಸೂರಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಈ ಧಾಳಿಯಲ್ಲಿ 15 ಸಿಪಿಐ(ಎಂ) ಕಾರ್ಯಕರ್ತರು ಗಾಯಗೊಂಡರು. ವಿಜಯೋತ್ಸವದ ಹೆಸರಿನಲ್ಲಿ ಹಲವೆಡೆ ದಾಳಿಗಳು ನಡೆದವು.

ಚುನಾವಣೆಯ ಹಿಂದಿನ ದಿನ ತೃಣಮೂಲ ಕಾಂಗ್ರೆಸಿನ ಗೂಂಡಾಗಳು ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ತಾ ಕ್ಷೇತ್ರದ ಶಾಸಕಿ ಚಂದನಾ ಘೋಷ್ ದಸ್ತಿದಾರ್ ಮೇಲೆ ದೈಹಿಕ ಹಲ್ಲೆ ನಡೆಸಿ ಅವಮಾನಗೊಳಿಸಿದರು. ಆಕೆಯನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಯಿತು. ಫಲಿತಾಂಶ ಬಂದ ಮೇಲೂ ಆಕೆಗೆ ಬೆದರಿಕೆ [illegible]ಲಾಯಿತು. ದಕ್ಷಿಣ 24 ಪರಗಣ, ಉತ್ತರ 24 ಪರಗಣ, ಮಿದ್ನಾಪುರ, ಕೂಚ್‌ಬೆಹಾರ್ ಇತ್ಯಾದಿ ಜಿಲ್ಲೆಗಳಲ್ಲೂ ತೃಣಮೂಲ ಕಾಂಗ್ರೆಸಿನ ದಾಳಿಗಳು ನಡೆದಿವೆ.

ಚುನಾವಣೆಯ ಮೊದಲು ಕೂಡಾ ಮಾರ್ಚ್ 7ರಿಂದ ಮೇ 13ರ ನಡುವೆ 31 ಜನ ಸತ್ತಿದ್ದಾರೆ. ಇವರಲ್ಲಿ 26 ಮಂದಿ ಸಿಪಿಐ(ಎಂ) ಕಾರ್ಯಕರ್ತರು, ಇಬ್ಬರು ಫಾರ್ವರ್ಡ್ ಬ್ಲಾಕಿನ ಸದಸ್ಯರು, ಒಬ್ಬರು ಪೋಲೀಸ್ ಸಿಬ್ಬಂದಿ ಹಾಗೂ 3 ಮಂದಿ ಚುನಾವಣಾ ಅಧಿಕಾರಿಗಳು.

ಕೊಲ್ಕತಾದಲ್ಲೂ ಮೇ19-20ರಂದು ಕೊಲ್ಕತ ಮಹಾನಗರದ ರಾಜಾಬಜಾರ್ ನಲ್ಲಿ ಮೇ19-20ರಂದು ಸಿಪಿಐ(ಎಂ) ಸದಸ್ಯ ಫಯಾಜ್ ಅಲಿ ತನ್ನ ಮಾವನ ಮನೆಯಿಂದ ಕಾಯಿಲೆ ಬಿದ್ದಿದ್ದ ತನ್ನ ಸೋದರ ಸಂಬಂಧಿಗೆ ರಕ್ತ ಕೊಡಿಸಲು ರಕ್ತದಾನದ ಕಾರ್ಡ್ ತರಲು ಹೊರಟಾಗ ಆತನನ್ನು ಬೆನ್ನಟ್ಟಿದ ತೃಣಮೂಲಿಗಳು ಚಾಕುವಿನಿಂದ ಇರಿದರು. ಕೊಲ್ಕತಾದ ಉತ್ತರ ಭಾಗಗಳಲ್ಲೂ, ಉಪನಗರಗಳಲ್ಲೂ ಇಂತಹ ದಾಳಿಗಳ, ಲೂಟಿಗಳ ವರದಿಗಳು ಬಂದಿವೆ.



ಉಲುಬೇರಿಯಾ ಗ್ರಾಮದಲ್ಲಿ ಭಗ್ನ ಅವಶೇಷಗಳ ಬಳಿ ನೊಂದವರು

ಮೇ 23ರಂದು ಪುರುಲಿಯಾದ ಬಲರಾಂಪುರದಲ್ಲಿ ಸಣ್ಣ ವೆಲ್ಡಿಂಗ್ ಅಂಗಡಿಯಿಟ್ಟುಕೊಂಡು ಜೀವನ ನಡೆಸುತ್ತಿದ್ದ 43 ವರ್ಷದ ದಿನೇಶನನ್ನು ತೃಣಮೂಲಿಗಳು ಮತ್ತು ಮಾವೋವಾದಿಗಳೆನ್ನುವವರು ಗುಂಡು ಹಾರಿಸಿ ಕೊಂದು ಹಾಕಿದರು. ದಕ್ಷಿಣ 24 ಪರಗಣ ಜಿಲ್ಲೆಯ ಬಿಷ್ಣುಪುರದಲ್ಲಿ ತನ್ನ ಮಗನನ್ನು ರಕ್ಷಿಸಲು ಬಂದ 76 ವರ್ಷದ ಮನೋರಂಜನ್ ನಸ್ಕರ್‌ನನ್ನು ತೃಣಮೂಲಿಗಳು ಕೊಂದರು. ಕೃಷ್ಣನಗರದ ನಾಡಿಯಾದ ಒಂದು ಹಳ್ಳಿಯಲ್ಲಿ 15 ವರ್ಷದ ಬಾಲಕ ವಿದ್ಯಾರ್ಥಿಗಳ ಸಂಘಟನೆಯಲ್ಲಿ ತೊಡಗಿರುವ ಅಪೂರ್ಬ ಘೋಷ್‌ನನ್ನು ಅತ್ಯಂತ ಅಮಾನುಷವಾಗಿ ಸಾಯಿಸಲಾಯಿತು.

'ಭಕ್ತ'ರು ಕಾಲಿಗೆ ಬೀಳುವ ಅವಕಾಶ ನಿರಾಕರಿಸದ ಮಮದಾ ದೀದಿ



ಆತನನ್ನು ಅಪಹರಿಸಿ, ಆತನ ಕೈಗಳನ್ನು ಹಿಂದಕ್ಕೆ ಕಟ್ಟಿ, ಗಂಟಲು ಹಿಸುಕಿ, ಅಂತಿಮವಾಗಿ ಅವನ ಕಿವಿಯಿಂದ ಒಂದು ಉದ್ದನೆಯ ಹರಿತವಾದ ಉಪಕರಣವನ್ನು ತೂರಿಸಿ ಕೊಲ್ಲಲಾಯಿತು. ಕೆಲವು ದಿನಗಳ ಹಿಂದೆ ಕೂಚ್‌ಬೆಹಾರ್‌ನ ಭೇರ್‌ಭೇರಿ ಗ್ರಾಮದಲ್ಲಿ ಇನ್ನೊಬ್ಬ ಎಸ್‌ಎಫ್‌ಐ ಕಾರ್ಯಕರ್ತ 17 ವರ್ಷದ ಬಿಬೇಕ್ ಬರ್ಮನ್‌ನನ್ನು ಕೂಡಾ ಅಪಹರಿಸಿ ಅಮಾನುಷವಾಗಿ ಕೊಲ್ಲಲಾಯಿತು. ಆ ಪ್ರದೇಶದ ಮಹಿಳೆಯರ ಮೇಲೂ ಹಲ್ಲೆಗಳು ನಡೆದವು.

ನಿಲ್ಲದ ಹಿಂಸಾಚಾರ

ಸಿಪಿಐ(ಎಂ) ಸಧಸ್ಯರು ಮತ್ತು ಅವರ ಕುಟುಂಬದವರ ಮೇಲೆ ಹಲ್ಲೆಗಳು ಈಗಲೂ ಮುಂದುವರೆಯುತ್ತಿವೆ. ಇತ್ತೀಚೆಗೆ, ಜೂನ್ 2ರಂದು ಮಿದ್ನಾಪುರ ಪೂರ್ವ ಜಿಲ್ಲೆಯ ತಾಮಲೂಕ್ ಬಳಿಯ ಹಳ್ಳಿ ಹರಿಣಬಾಡಿಯಲ್ಲಿ 13 ವರ್ಷದ ಬಾಲಕಿ ಸಾಯಂತಿಕಾ ರಕ್ಷಿತ್ ತೃಣಮೂಲಿಗಳ ಇತ್ತೀಚಿನ ಬಲಿ. ಅಂದು ಬೆಳಿಗ್ಗೆಯಿಂದ ಶಸ್ತ್ರಸಜ್ಜಿತ ತೃಣಮೂಲಿ ಗೂಂಡಾಗಳು ಸಿಪಿಐ(ಎಂ) ಸದಸ್ಯರ ಮತ್ತು ಬೆಂಬಲಿಗರ ಮನೆಗಳು, ಅಂಗಡಿಗಳ ಮೇಲೆ ಹಲ್ಲೆ ಆರಂಭಿಸಿದರು. ಮೊದಲು ಅವರು ಉಜ್ವಲ್ ಶೀತ್ ಎಂಬಾತನನ್ನು ತೀವ್ರವಾಗಿ ಗಾಯಗೊಳಿಸಿದರು. ನಂತರ ರಕ್ಷಿತ್ ಕುಟುಂಬದ ಮೇಲೆ ಎರಗಿ ಗೋಲಿಬಾರು ಆರಂಭಿಸಿದರು. ಭಯಭೀತಳಾದ ಬಾಲಕಿ ಸಾಯಂತಿಕಾ ಮನೆಯ ಹೊರಗೆ ಬಂದು ಅವರಿಂದ ತಪ್ಪಿಸಿಕೊಳ್ಳಲು ಓಡಲಾರಂಭಿಸಿದಳು. ಅವಳ ತಲೆಗೆ ಗುಂಡಿಟ್ಟರು. ಆಕೆ ರಕ್ತದ ಮಡುವಿನಲ್ಲಿ ಪ್ರಾಣ ಬಿಟ್ಟಳು.

ಮುರ್ಷಿದಾಬಾದ್ ಜಿಲ್ಲೆಯ ಬೆರ್ರಾಂಪುರದಲ್ಲಿ ಕಾಂಗ್ರೆಸ್ ಕಿಡಿಗೇಡಿಗಳು ಸಿಪಿಐ(ಎಂ)ನ ಬಿಶ್ವನಾಥ್ ಚಕ್ರವರ್ತಿ(38) ಮತ್ತು ಗೌತಮ್ ದಾಸ್(40)ರ ಕುಟುಂಬಗಳು ಗೌತಮ್ ಮನೆಯಲ್ಲಿ ಕಲೆತು ಉಭಯಕುಶಲೋಪರಿಯಲ್ಲಿದ್ದಾಗ ಒಳನುಗ್ಗಿ ಗುಂಡು ಹಾರಿಸಿ ಪರಾರಿಯಾದರು. ಬಿಶ್ವನಾಥ್ ಅದೇ ಜಿಲ್ಲೆಯ ಡಿವೈಎಫ್‌ಐ ಮುಖಂಡ ದೇಬಶಿಶ್ ಘೋಶಾಲ್ ಕೊಲೆಯ ಪ್ರಮುಖ ಸಾಕ್ಷಿಯಾಗಿದ್ದರು.

ಜೂನ್ 2ರಂದೇ ಉತ್ತರ 24 ಪರಗಣ ಜಿಲ್ಲೆಯ ಹರೀವಾದ ರೈತ ಮುಖಂಡ ಮತ್ತು ಸಿಪಿಐ(ಎಂ) ಮುಖಂಡ ಖಾಲೆಕ್ ಮೊಲ್ಲಾ ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ಆರೋಗ್ಯ ತಪಾಸಣೆಗೆಂದು ಹೊರಟಿದ್ದಾಗ ಹತ್ತಾರು ತೃಣಮೂಲಿ ಗೂಂಡಾಗಳು ಅವರ ಮೇಲೆರಗಿ ಕಬ್ಬಿಣದ ಸಲಾಕೆಗಳಿಂದ ಬಡಿದು ಅವರ ಮೈಮೇಲೆ ಸ್ಫೋಟಕಗಳನ್ನು ಸಿಡಿಸಿದರು. ಆತನ ರಕ್ಷಣೆಗೆ ಇತರರು ಧಾವಿಸುವ ಮೊದಲೇ ಆತನ ಪ್ರಾಣಪಕ್ಷಿ ಹಾರಿ ಹೋಯಿತು. ಇಲ್ಲಿ ಚುನಾವಣಾ ಫಲಿತಾಂಶಗಳು ಪ್ರಕಟವಾದಂದಿನಿಂದ ಸುಮಾರು 300 ಸಿಪಿಐ(ಎಂ) ಕಾರ್ಯಕರ್ತರನ್ನು ಆ ಪ್ರದೇಶದಿಂದ ಓಡಿಸುವ ಪ್ರಯತ್ನ ನಡೆದಿದೆ.



ತೃಣಮೂಲ ಗೂಂಡಾಗಳು ಹಚ್ಚಿರುವ ಬೆಂಕಿ

ಮುಖ್ಯವಾಗಿ ತೃಣಮೂಲ ಕಾಂಗ್ರೆಸಿನ ಮಂದಿಗಳ ಈ ದಾಳಿಗಳ ಉದ್ದೇಶ ಸಿಪಿಐ(ಎಂ) ಬೆಂಬಲಿಗರಲ್ಲಿ ಭಯ ಹುಟ್ಟಿಸಿ ಅವರನ್ನು ಕೆಲವು ಆಯ್ದ ಪ್ರದೇಶಗಳಿಂದ ಹೊರಗಟ್ಟುವುದು, ರಾಜ್ಯದಲ್ಲಿ ಕಾನೂನು-ವ್ಯವಸ್ಥೆಯನ್ನು ಹಾಳುಗೆಡವುದು, ಪೋಲೀಸರು ಮಧ್ಯಪ್ರವೇಶಿಸುವಂತೆ ಉದ್ರೇಕಿಸಿ ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸುವುದು ಹಾಗೂ ಅದು ಜನಪರ ನೀತಿಗಳನ್ನು ಜಾರಿಗೆ ಬರದಂತೆ ಮಾಡುವುದು. ಈ ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ಕೃತ್ಯಗಳನ್ನು ವಿಫಲಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ. ಪಶ್ಚಿಮ ಬಂಗಾಳದಿಂದ ಚುನಾಯಿತರಾದ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸಂಸದ್ ಸದಸ್ಯರು ರಾಜ್ಯದಲ್ಲಿ ಈ ರೀತಿ ಪ್ರಜಾಪ್ರಭುತ್ವ ಮತ್ತು ಸಂವಿಧಾನಿಕ ಹಕ್ಕುಗಳನ್ನು ತಮ್ಮ ಕೂಟದ ಕಾರ್ಯಕರ್ತರು ತುಳಿದು ಹಾಕದಂತೆ ನೋಡಿಕೊಳ್ಳಬೇಕು ಎಂದು ಅದು ಹೇಳಿದೆ. ಎಪ್ಪತ್ತರ ದಶಕದ ಅರಾಜಕತೆ ಮತ್ತು ಹಿಂಸಾಚಾರ ಮರುಕಳಿಸುವಂತೆ ಮಾಡುವ ಹುನ್ನಾರಗಳನ್ನು ಪಶ್ಚಿಮ ಬಂಗಾಳದ ಶಾಂತಿಪ್ರಿಯ ಜನತೆ ವಿಫಲಗೊಳಿಸುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಶಿಸಿದೆ.

ರಾಷ್ಟ್ರಪತಿಗಳ ಭಾಷಣ

ಭಾರತದ ಆಳುವ ವರ್ಗಗಳಲ್ಲಿ ಉನ್ನತ ಆಶಯಗಳ ಘೋಷಣೆಗಳಿಗೆ ಎಂದೂ ಕೊರತೆಯಿರಲಿಲ್ಲ. ಅವುಗಳ ನಿಜವಾದ ವರ್ಗ ಸ್ವಭಾವ ಪ್ರಕಟವಾಗುವುದು ಅವುಗಳ ಜಾರಿಯ ಸಂದರ್ಭದಲ್ಲೇ. ಸಾರ್ವತ್ರಿಕ ಚುನಾವಣೆಗಳ ನಂತರ ರಾಷ್ಟ್ರಪತಿಗಳ ಭಾಷಣದಲ್ಲಿ ವ್ಯಕ್ತವಾಗಿರುವ ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯ ಕಾಳಜಿಯೆಂದೇ ಇರಲಿ, ಇನ್ನಷ್ಟು ಹೊರೆಗಳು ಜನಗಳಿಗೆ ಕಟ್ಟಿಟ್ಟ ಬುತ್ತಿ ಎಂದೇ ಕಾಣುತ್ತದೆ.

ಮಾತು... ಮಾತು ... ಕೃತಿಗಿಳಿಯುತ್ತದೆಷ್ಟು ?

15ನೇ ಸಾರ್ವತ್ರಿಕ ಚುನಾವಣೆಗಳ ನಂತರ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳ ಭಾಷಣ ನಿರೀಕ್ಷಿಸಿದಂತೆಯೇ ಇದೆ. ಈ ಬಾರಿ ಈ ಯುಪಿಎ ಸರಕಾರ ಏನೆಲ್ಲಾ ಸಾಧಿಸಬೇಕೆಂದಿದೆ ಎಂದು ಹೇಳಿಕೊಳ್ಳುವ ಅಬ್ಬರದ ಮಾತುಗಳೇ ಎಲ್ಲೆಲ್ಲೂ. ಈಗ ಪಟ್ಟಿ ಮಾಡಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳಲ್ಲಿ ಹಲವು ವಾಸ್ತವವಾಗಿ ಹಿಂದಿನ ಸರಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಇದ್ದವುಗಳ ಪುನರಾವರ್ತನೆಯೇ. ಅಂದರೆ ಹಿಂದಿನ ಬಾರಿ ನೀಡಿದ್ದ ಹಲವು ಭರವಸೆಗಳನ್ನು ಈಡೇರಿಸಲೇ ಇಲ್ಲ ಎಂದು ಈ ಮೂಲಕವಾದರೂ ಒಪ್ಪಿಕೊಂಡಂತಾಗಿದೆ. ಗ್ರಾಮೀಣ ಉದ್ಯೋಗ ಖಾತ್ರಿ , ಭಾರತ ನಿರ್ಮಾಣದಂತಹ ಪ್ರಮುಖ ಕಾರ್ಯಕ್ರಮಗಳು ಗುರಿ ತಲುಪಲು ಸಾಧ್ಯವಾಗಿರಲಿಲ್ಲ. ಉದಾಹರಣೆಗೆ, ಉದ್ಯೋಗ ಖಾತ್ರಿ ಕಾನೂನು 100 ದಿನಗಳ ಕೆಲಸದ ಆಶ್ವಾಸನೆ ಕೊಟ್ಟಿತ್ತು. ಆದರೆ ದೇಶವಿಡೀ ದಾಖಲಾತಿ ಪಡೆದ 10 ಕೋಟಿ ಕೆಲಸದ ಕಾರ್ಡುದಾರರಿಗೆ ಸರಾಸರಿಯಾಗಿ ದೊರೆತಿರುವುದು 48 ದಿನಗಳ ಕೆಲಸವಷ್ಟೇ. ಅದೇ ರೀತಿ ಗ್ರಾಮೀಣ ವಿದ್ಯುದೀಕರಣದ ಗುರಿಯಲ್ಲಿ ಸಾಧನೆಯಾದದ್ದು ಕೇವಲ 27ಶೇಕಡಾ. ಕೃಷಿ ವಲಯದಲ್ಲಿ ಮೂಲರಚನೆಯನ್ನು ಬಲಪಡಿಸುವ ಬಗ್ಗೆ ರಾಷ್ಟ್ರಪತಿಗಳು ಬಹಳಷ್ಟು ಹೇಳಿದ್ದಾರೆ. ಆದರೆ ನೀರಾವರಿಯ ವಿಸ್ತರಣೆಯಲ್ಲಿ ಗುರಿಸಾಧನೆ ಕೇವಲ 56 ಶೇಕಡಾ.

ಭಾರತದ ಮೇಲೆ ಜಾಗತಿಕ ಆರ್ಥಿಕ ಹಿಂಜರಿತದ ಪ್ರಭಾವವೇನಿಲ್ಲ ಎಂದು ನಿರಾಕರಿಸುವ ನಿಲುವು ಹಾಗೆಯೇ ಮುಂದುವರೆದಿದೆ. 'ಭಾರತದ ಆರ್ಥಿಕವನ್ನು ವಿಶ್ವದ ಇತರ ಪ್ರತಿಯೊಂದೂ ದೇಶದಲ್ಲಿ ಕಾಣ ಬರುತ್ತಿರುವಂತಹ ನಿಧಾನಗತಿಯ ಪರಿಸ್ಥಿತಿ ತಟ್ಟಿಲ್ಲ ಎಂಬುದು ಸಮಾಧಾನದ ಸಂಗತಿ' ಎಂದು ರಾಷ್ಟ್ರಪತಿಗಳ ಭಾಷಣ ಹೇಳುತ್ತದೆ. ಇದಕ್ಕೆ ಈಗ ಹಲವರು ಒಪ್ಪಿಕೊಂಡಿರುವಂತೆ ಹಿಂದಿನ ಸರಕಾರ ಲಂಗುಲಗಾಮಿಲ್ಲದ ಹಣಕಾಸು ಉದಾರೀಕರಣ ಮಾಡದಂತೆ ಎಡಪಕ್ಷಗಳು ಒತ್ತಡ ಹಾಕಿದ್ದು ಬಹು ಮಟ್ಟಿಗೆ ಕಾರಣ. ಆದರೆ ರಾಷ್ಟ್ರಪತಿಗಳು ಈಗ ತಮ್ಮ ಸರಕಾರ ಈ ಕ್ರಮಗಳನ್ನೇ, ಅಂದರೆ ಬ್ಯಾಂಕಿಂಗ್ ಸುಧಾರಣೆಗಳು, ಪೆನ್ಶನ್ ವಲಯದ 'ನಿಯಂತ್ರಣ' ವ್ಯವಸ್ಥೆ(ಅಂದರೆ ಖಾಸಗೀಕರಣ) ಮುಂತಾದವುಗಳನ್ನೇ ಕೈಗೊಳ್ಳುವುದಾಗಿ ಹೇಳಿದ್ದಾರೆ. ಇದು ಕೋಟ್ಯಂತರ ಭಾರತೀಯರು ಜೀವಮಾನವಿಡೀ ಕಷ್ಟಪಟ್ಟು ಮಾಡಿರುವ ಉಳಿತಾಯಗಳಿಗೆ, ಇಳಿವಯಸ್ಸಿನ ಭದ್ರತೆಗೆ ಭಾರೀ ವಿಪತ್ತು ತರುತ್ತದೆ.



'ಎಲ್ಲರನ್ನೂ ಒಳಗೊಳ್ಳುವ ಸಮಾಜ ಮತ್ತು ಎಲ್ಲರನ್ನೂ ಒಳಗೊಳ್ಳುವ ಆರ್ಥಿಕ' ತನ್ನ ಸರ್ಕಾರ 2004ರಲ್ಲಿ ದೇಶದ ಮುಂದಿಟ್ಟಿರುವ ಗುರಿ, ಇದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ರಾಷ್ಟ್ರಪತಿಗಳು ಹೇಳಿದ್ದಾರೆ. ಆದರೆ ಕಳೆದ ಐದು ವರ್ಷಗಳ ವಾಸ್ತವತೆಯೇನು? ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಮತ್ತು ಹಿಂಜರಿತನವೇ ಪರಿಣಾಮ ನಮ್ಮ ಮೇಲೆ ಆಗುವವರೆಗೆ ನಮ್ಮ ಆರ್ಥಿಕ ಉನ್ನತ ಬೆಳವಣಿಗೆಯ ಹಾದಿಯಲ್ಲಿತ್ತು ಎಂದು ದೊಡ್ಡದಾಗಿ ಹೇಳಿಕೊಂಡರೂ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಆರ್ಥಿಕ ಸುಧಾರಣೆ ಎರಡು ಭಾರತಗಳನ್ನು ಸೃಷ್ಟಿಗಳು. ಒಂದು ಹಿಡಿಯಷ್ಟೇ ಜನಕ್ಕೆ 'ಹೊಳೆಯುತ್ತಿರುವ ಭಾರತ' ಮತ್ತು ಬಹುಪಾಲು ಜನಗಳಿಗೆ 'ನರಳುತ್ತಿರುವ ಭಾರತ'. ಸ್ವತಃ ಸರ್ಕಾರದ ಅಂದಾಜಿನ ಪ್ರಕಾರವೇ 78 ಶೇಕಡಾ ಭಾರತೀಯರು ದಿನಕ್ಕೆ 20 ರೂ. ಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. ಇನ್ನೊಂದೆಡೆ ದೇಶದಲ್ಲಿ ಕನಿಷ್ಠ 36 ಡಾಲರ್ ಮಿಲಿಯಾಧಿಪತಿಗಳಿದ್ದಾರೆ. ಕೇವಲ ಈ 36 ಮಂದಿಯ ಆಸ್ತಿಗಳ ಮೊತ್ತ ಇಡೀ ದೇಶದ ಒಟ್ಟು ಆಂತರಿಕ ಉತ್ಪಾದನೆಯ 25 ಶೇಕಡಾರಷ್ಟಿದೆ. ಪ್ರತಿದಿನ ಒಂದು ಸಾವಿರ ಮಕ್ಕಳು ನೀರಿನಿಂದ ಬರುವ, ಸಂಪೂರ್ಣ ತಡೆಯಬಹುದಾದ ಕಾಯಿಲೆಗಳಿಂದ ಸಾಯುತ್ತಿದ್ದಾರೆ. ನಮ್ಮ ದೇಶದ 56 ಶೇಕಡಾ ಮಕ್ಕಳಿಗೆ ಯಾವುದೇ ರೀತಿಯ ರಕ್ಷಣೆಯಿಲ್ಲ, 40 ಶೇಕಡಾ ಮಕ್ಕಳ ತೂಕ ಅಗತ್ಯಕ್ಕಿಂತ ಕಡಿಮೆಯಿದೆ, 70 ಶೇಕಡಾ ಮಕ್ಕಳು ಪೋಷಕ ಆಹಾರವಿಲ್ಲದೆ ರಕ್ತಹೀನತೆಯಿಂದ ನರಳುತ್ತಿದ್ದಾರೆ. ಇವೆಲ್ಲಾ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇಕ್ಷಣೆಯ ಅಂಕಿ-ಅಂಶಗಳು. ನಮ್ಮ 70 ಶೇಕಡಾ ಜನಗಳಿಗೆ ಆರೋಗ್ಯಕರ ಶೌಚಾಲಯಗಳಿಲ್ಲ. ಮೂರನೇ ಎರಡರಷ್ಟು ಜನಸಂಖ್ಯೆಗೆ ತಮ್ಮ ವಸತಿ ಸ್ಥಳಗಳ ಬಳಿ ಕುಡಿಯುವ ನೀರು ಲಭ್ಯವಿಲ್ಲ. ಗರ್ಭಿಣಿಯರಲ್ಲಿ ಸುಮಾರು ಮೂರನೇ ಎರಡು ಮಂದಿ ರಕ್ತಹೀನತೆಯಿಂದ ಬಾಧಿತರು. ಭಾರತದ ಭವಿಷ್ಯ ಇವರ ಗರ್ಭಗಳಲ್ಲಿವೆ. ಇದೀಗ ನಮ್ಮ ದೇಶದ ತಾಯಂದಿರ, ಮಕ್ಕಳ ಸ್ಥಿತಿ-ಗತಿ ಕೇವಲ ಆಶಯಗಳಿಂದ ನಿಜವಾದ ಭಾರತದ ಈ ಶೋಚನೀಯ ಸ್ಥಿತಿ-ಗತಿ ಬದಲಾಗದು. ಬದಲಿಗೆ ಸಾರ್ವಜನಿಕ ಹೂಡಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಿದರೆ ಮಾತ್ರ ಇದು ಸಾಧ್ಯ. ಆದರೆ ಹಿಂದಿನ ಅನುಭವಗಳನ್ನು ನೋಡಿದರೆ ಅಗತ್ಯ ಮಟ್ಟದಲ್ಲಿ ಇದು ಸಂಭವಿಸುವ ಸಾಧ್ಯತೆಯಿಲ್ಲ.

ಆದರೆ ಈ ಪರಿಸ್ಥಿತಿಯನ್ನು ಎದುರಿಸಲು ಸಂಪನ್ಮೂಲಗಳನ್ನು ಸಂಗ್ರಹಿಸುವ ಹೆಸರಿನಲ್ಲಿಯೇ ತನ್ನ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವಲಯದಲ್ಲಿ ಸರ್ಕಾರದ ಹೂಡಿಕೆಗಳನ್ನು ಹಿಂದಕ್ಕೆ ಪಡೆಯುತ್ತದೆ, ಹೀಗೆ ಮಾಡುವಾಗ 'ಸರ್ಕಾರದ ಬಂಡವಾಳ 51 ಶೇಕಡಾಕ್ಕಿಂತ ಕಡಿಮೆಯಾಗದಂತೆ ನೋಡಿಕೊಳ್ಳಲಾಗುವುದು' ಎಂದು ರಾಷ್ಟ್ರಪತಿಗಳು ಪ್ರಕಟಿಸಿದ್ದಾರೆ. ಅಂದರೆ ಕಳೆದ ಐದು ವರ್ಷಗಳಲ್ಲಿ ಯಾವುದನ್ನು ತಡೆದಿಡಲು ಎಡಪಕ್ಷಗಳಿಗೆ ಸಾಧ್ಯವಾಗಿತ್ತೋ ಅದೀಗ ಅವರ ಪ್ರಮುಖ ಅಜೆಂಡಾ ಆಗುತ್ತಿದೆ. ಅತ್ತ ಅಮೇರಿಕಾ ಸರ್ಕಾರ ದಿವಾಳಿಯೆದ್ದಿರುವ ದೈತ್ಯ ಖಾಸಗಿ ಕಂಪನಿ ಜನರಲ್ ಮೋಟಾರ್ಸ್‌ನ್ನು ರಾಷ್ಟ್ರೀಕರಣ ಮಾಡಬೇಕಾಗಿ ಬಂದಿರುವ ಸನ್ನಿವೇಶದಲ್ಲಿ ನಮ್ಮ ಸರ್ಕಾರ ಖಾಸಗೀಕರಣಕ್ಕೆ ಹೊರಟಿದೆ! ಹೌದು, ಸಂಪನ್ಮೂಲಗಳನ್ನು ಸಂಗ್ರಹಿಸಲೇಬೇಕು. ಆದರೆ ಅದು ತಮ್ಮ ಲಾಭಗಳಲ್ಲಿ ಒಂದು ಪಾಲನ್ನು ತೆರುವ ಸಾಮರ್ಥ್ಯವಿರುವುದರಿಂದ, ದೇಶ ಕಟ್ಟುವ ಕೆಲಸಕ್ಕೆ ಕೊಡಬಲ್ಲವರಿಂದ ಸಂಗ್ರಹಿಸಬೇಕೇ ಹೊರತು ಸಾರ್ವಜನಿಕ ವಲಯ ಈಗಾಗಲೇ ಕಟ್ಟಿ ಬೆಳೆಸಿರುವುದನ್ನು ನಿರ್ನಾಮ ಮಾಡುವ ಮೂಲಕ ಅಲ್ಲ. ಯುಪಿಎ ಸರ್ಕಾರದ ಆಳ್ವಿಕೆಯ ಮೊದಲ ನಾಲ್ಕು ವರ್ಷಗಳಲ್ಲಿ ದೊಡ್ಡ ಹತ್ತು ಕಂಪನಿಗಳ ಸಂಪತ್ತು ದ್ವಿಗುಣಗೊಂಡಿತು. ಕಂಪನಿ ತೆರಿಗೆ 33 ಶೇಕಡಾವಿದೆ. ಆದರೆ ಅವುಗಳಲ್ಲಿ ಒಂದು ಕಂಪನಿ ಕೂಡಾ ಈ ಹಣವನ್ನು ಸರ್ಕಾರದ ಖಜಾನೆಗೆ ಕೊಟ್ಟಿಲ್ಲ. ಎರಡು ಕಂಪನಿಗಳು ಮಾತ್ರ 30 ಶೇಕಡಾ ದರ ದಾಟಿವೆ. ಉಳಿದವುಗಳಲ್ಲಿ ಒಂದು ಮಾತ್ರ 20 ಶೇಕಡಾ ದರವನ್ನು ದಾಟಿದೆ. ಉಳಿದವುಗಳು ಕೊಟ್ಟಿರುವ ತೆರಿಗೆ ಪ್ರಮಾಣ ಇದಕ್ಕಿಂತಲೂ ಕಡಿಮೆ. ಒಂದು ಕಂಪನಿಯಂತೂ ತೆತ್ತಿರುವುದು ಕೇವಲ 0.08 ಶೇಕಡಾ. ಹೀಗೆ ಪ್ರಕಟಿತ ತೆರಿಗೆ ವ್ಯವಸ್ಥೆಯನ್ನು ಅನುಸರಿಸದಿರಲು ಅವಕಾಶ ನೀಡಿರುವ ಕಾನೂನಿನಲ್ಲಿಯ ತೂತುಗಳನ್ನು ಮುಚ್ಚಬೇಕೇ ಹೊರತು ದೇಶದ ಆಸ್ತಿಗಳನ್ನು ಮಾರಿ ಬಿಡಲು ಮುಂದಾಗಬಾರದು.

ಇಷ್ಟಕ್ಕೆ ನಿಂತಿಲ್ಲ. ಖಾಸಗಿ ಬಂಡವಾಳಕ್ಕೆ ತಮ್ಮ ಸಂಪತ್ತನ್ನು, ಲಾಭವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಅವಕಾಶ ನೀಡುವ ಪ್ರಕಟಣೆಗಳನ್ನು ರಾಷ್ಟ್ರಪತಿಗಳು ಮಾಡಿದ್ದಾರೆ. ದೇಶದ ಮೂಲರಚನೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಪಿ.ಪಿ.ಪಿ. ಅಂದರೆ 'ಸಾರ್ವಜನಿಕ-ಖಾಸಗಿ- ಭಾಗೀದಾರಿಕೆ' ಎಂಬುದು ಮುಖ್ಯ ಸಾಧನೆ ಎಂದು ಅವರು ಹೇಳಿದ್ದಾರೆ. ಈ ಪಿ.ಪಿ.ಪಿ. ಯೋಜನೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಅವು ಬಂಡವಾಳಕ್ಕೆ ಭಾರೀ ಲಾಭ ತಂದು ಕೊಡುತ್ತವೆ, ಅದಕ್ಕಾಗಿ ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕುತ್ತವೆ. ಖಾಸಗಿ ವಿಮಾನ ನಿಲ್ದಾಣಗಳಲ್ಲಿ ಈಗ ವಿಧಿ ಸುತ್ತಿರುವ 'ಬಳಕೆದಾರ ಅಭಿವೃದ್ಧಿ ಶುಲ್ಕ'ದ ಪ್ರಮಾಣವೇ ಇದಕ್ಕೊಂದು ಉದಾಹರಣೆ. ಆದ್ದರಿಂದ 'ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆ'ಯ ಕಾಳಜಿಯೇನೇ ಇರಲಿ, ಭವಿಷ್ಯದಲ್ಲಿ ಜನಗಳ ಮೇಲೆ ಇನ್ನಷ್ಟು ಹೊರೆಗಳು ಕಟ್ಟಿಟ್ಟ ಬುತ್ತಿಯೆಂದು ಕಾಣುತ್ತದೆ.

100 ದಿನಗಳ ಪಟ್ಟಿ

ರಾಷ್ಟ್ರಪತಿಗಳು ಮೊದಲ ನೂರು ದಿನಗಳಲ್ಲಿ

ಪುಟ 15 ಕ್ಕೆ

ಕನಿಷ್ಟ ಸಾಮಾನ್ಯ ಕಾರ್ಯಕ್ರಮ ಪ್ರಜಾಪ್ರಭುತ್ವ ಮತ್ತು ಕಾಂಗ್ರೆಸ್ ಪಕ್ಷ

ಹೊಸದಾಗಿ ರಚನೆಯಾದ ಯುಪಿಎ ಸರ್ಕಾರಕ್ಕೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಎಂಬುದೇನಿಲ್ಲ. ಸಮ್ಮಿಶ್ರ ಸರ್ಕಾರವೊಂದಕ್ಕೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಏಕೆ ಬೇಕು, ಅದರ ಹಿಂದಿನ ತತ್ವವೇನು? ಓದಿ....

ಜಿ.ಎನ್.ನಾಗರಾಜ್

'ಕನಿಷ್ಠ ಸಾಮಾನ್ಯ ಕಾರ್ಯಕ್ರಮ' ಇದು 2004-09ನೇವರೆಗಿನ ಕೇಂದ್ರ ಸರ್ಕಾರದ 5 ವರ್ಷಗಳಲ್ಲಿ ಪದೇ ಪದೇ ಚರ್ಚೆಗೆ ಬಂದ, ಕೊನೆಗೆ ಆ ಸರ್ಕಾರದ ಜೀವಕ್ಕೆ ಮುಳುವಾದ ಪ್ರಧಾನ ಪರಿಕಲ್ಪನೆ

ಯುಪಿಎ ಕನಿಷ್ಠ ಕಾರ್ಯಕ್ರಮದ ಪ್ರಕಾರ ನಡೆಯಬೇಕು. ಕೇಂದ್ರ ಸರ್ಕಾರ ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿರುವ ಈ ಅಂಶಗಳನ್ನು ಜಾರಿಗೆ ತರಬೇಕು ಎಂಬ ಮಾತುಗಳು ಎಡಪಕ್ಷಗಳಿಂದ ಕೇಳಿಬರುತ್ತಲೇ ಇದ್ದವು. ಕೊನೆಗೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಉಲ್ಲಂಘನೆಯ ಕಾರಣಕ್ಕಾಗಿಯೇ ಸರ್ಕಾರ ಬೀಳುವ ಪರಿಸ್ಥಿತಿ ಉಂಟಾದಾಗ ಕಾರ್ಯಕ್ರಮ ಹೆಚ್ಚು ಚರ್ಚೆಗೊಳಗಾಯಿತು.

2009 ರ ಚುನಾವಣೆಯ ನಂತರವೂ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವುದು ಒಂದು ಸಮ್ಮಿಶ್ರ ಸರ್ಕಾರವೇ. ಆದರೆ ಕನಿಷ್ಠ ಕಾರ್ಯಕ್ರಮ ಪ್ರಸ್ತಾಪ ಮಾತ್ರ ಅದರ ವಿರುದ್ಧ ರೂಪದಲ್ಲಿ, ಫಲಿತಾಂಶ ಬರುತ್ತಿದ್ದಂತೆ ಟಿ.ವಿ. ಛಾನೆಲ್‌ಗಳ ವ್ಯಾಖ್ಯಾನಕಾರರು, ಕೈಗಾರಿಕೆ ಮತ್ತು ವಾಣಿಜ್ಯ ಮಂಡಳಿಗಳ ಬಂಡವಾಳಶಾಹಿಗಳು ಸರ್ಕಾರ ಇನ್ನು ಮುಂದೆ ಎಡಪಕ್ಷಗಳ ಮೇಲೆ ಅವಲಂಬಿಸಬೇಕಾಗಿಲ್ಲ. ಇನ್ನು ಈ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಬಂಧನದಿಂದ ಬಿಡುಗಡೆ ಎಂದು ಹಿರಿ ಹಿರಿ ಹಿಗ್ಗಿದರು. ಕುಣಿದಾಡಿದರು. ನಂತರ ಸರ್ಕಾರ ರಚಿಸುವ ಹೊಣೆ ಹೊತ್ತ ಕಾಂಗ್ರೆಸ್ ಇತರ ಮೈತ್ರಿ ಪಕ್ಷಗಳ ಜೊತೆ ಸಮಾಲೋಚಿಸಿ 2009 ರ ಜನಾದೇಶದ ಮೇರೆಗೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿ ದೇಶದ ಮುಂದಿರಿಸುವ ಕರ್ತವ್ಯವನ್ನು ನಿರ್ವಹಿಸಬೇಕಾಗಿತ್ತು. ಆದರೆ ಕಾಂಗ್ರೆಸ್ ಅದನ್ನು ಪ್ರಸ್ತಾಪ ಮಾಡುವುದಿರಲಿ, ಅದನ್ನು ಮರೆಸುವುದಕ್ಕೆ ಇನ್ನಿಲ್ಲದ ಪ್ರಯತ್ನ ಮಾಡಿತು. ಹೀಗೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಮಾತು ಸತ್ತೇಹೋಯಿತು.

ಕನಿಷ್ಠ ಸಾಮಾನ್ಯ ಕಾರ್ಯಕ್ರಮ ಎಂಬ ಪ್ರಜಾಪ್ರಭುತ್ವದ ಸಾಧನ

'ಕನಿಷ್ಠ ಸಾಮಾನ್ಯ ಕಾರ್ಯಕ್ರಮ' ಇದು ಜನಾದೇಶವನ್ನು ಸಾಕಾರಗೊಳಿಸುವ ಸಾಧನ. ಸಮ್ಮಿಶ್ರ ಸರ್ಕಾರಗಳ ಆಡಳಿತದ ಅಡಿಪಾಯ. ಒಂದೇ ಪಕ್ಷಕ್ಕೆ ಬಹುಮತ ದೊರೆತು ಸರ್ಕಾರ ರಚಿಸುವುದೆಂದರೆ ಆ ಪಕ್ಷದ ಚುನಾವಣಾ ಪ್ರಣಾಳಿಕೆಗೆ ಜನಾದೇಶ ದೊರೆತಂತೆ. ಆ ಪಕ್ಷದ ಸರ್ಕಾರಕ್ಕೆ ಚುನಾವಣಾ ಪ್ರಣಾಳಿಕೆಯೇ ಆಧಾರ. ಅದನ್ನು ಜಾರಿಗೆ ತರುವುದೇ ಆ ಸರ್ಕಾರದ ಕರ್ತವ್ಯ. ಆದರೆ ಜನತೆ ಒಂದೇ ಪಕ್ಷಕ್ಕೆ ಬಹುಮತ ನೀಡದಿದ್ದರೆ ಆಗ ಚುನಾವಣೆ ನಂತರ ಪಕ್ಷಗಳು ತಮ್ಮ ಪಕ್ಷಗಳ ಸಿದ್ಧಾಂತ ಹಾಗೂ ಪ್ರಣಾಳಿಕೆಗಳಿಗನುಗುಣವಾಗಿ ಜೊತೆಗೂಡಿ ಸಮ್ಮಿಶ್ರ ಸರ್ಕಾರವನ್ನು ರಚಿಸುತ್ತವೆ. ಸಮ್ಮಿಶ್ರ ಸರ್ಕಾರದಲ್ಲಿ ಪಕ್ಷಗಳು ಜೊತೆಗೂಡಲು ಆಧಾರಭೂತವಾಗಿ, ಸರ್ಕಾರವನ್ನು ಮುನ್ನಡೆಸಲು ತಮ್ಮ ಪ್ರಣಾಳಿಕೆಗಳ ಆಧಾರದಲ್ಲಿ ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವದು ಜನಾದೇಶವನ್ನು ಗೌರವಿಸುವ, ಅದನ್ನು ಕಾರ್ಯಗತ ಮಾಡುವ ಸಾಧನ.

ಈ ಕಾರ್ಯಕ್ರಮಕ್ಕೆ ಸಾಮಾನ್ಯ ಎಂಬ [illegible]ನೇನೋ ಸೂಕ್ತವಾದದ್ದೇ. ಆದರೆ ಈ ಕನಿಷ್ಠ [illegible]ದರ ಅವಶ್ಯಕತೆ ಏನು? ಎಂಬ ಪ್ರಶ್ನೆ ಏಳುತ್ತಿರುತ್ತದೆ. ಒಂದೇ ಪಕ್ಷಕ್ಕೆ ಬಹುಮತ ದೊರೆತರೆ ಆ ಪಕ್ಷದ ಗರಿಷ್ಠ ಕಾರ್ಯಕ್ರಮವನ್ನು ಜಾರಿಗೆ ತರಲು ಅವಕಾಶವುಂಟು. ಆದರೆ ಒಂದೇ ಪಕ್ಷಕ್ಕೆ ಬಹುಮತ ಬರದಿದ್ದರೆ ಯಾವ ಪಕ್ಷವೂ ತನ್ನ ಗರಿಷ್ಠ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಪಕ್ಷಗಳ ಕನಿಷ್ಠ ಕಾರ್ಯಕ್ರಮಗಳನ್ನು ಜಾರಿಗೆ ತರುವ ಪ್ರಯತ್ನವೇ ಕನಿಷ್ಠ ಸಾಮಾನ್ಯ ಕಾರ್ಯಕ್ರಮ.

ಕನಿಷ್ಠ ಸಾಮಾನ್ಯ ಕಾರ್ಯಕ್ರಮಕ್ಕೆ ಬೆಂಬಲ ನೀಡುವ ಮೂಲಕವೇ ಅದನ್ನು ಜಾರಿ ಮಾಡುವ ಮೂಲಕವೇ ಆಯಾ ಪಕ್ಷಗಳು ತಮಗೆ ಮತ ನೀಡಿದ ಜನತೆಯ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುವ ಅಧಿಕಾರವನ್ನು ಪಡೆಯುವರು. ಕನಿಷ್ಠ ಸಾಮಾನ್ಯ ಕಾರ್ಯಕ್ರಮ ಸಮ್ಮಿಶ್ರ ಸರ್ಕಾರಗಳು ಪ್ರಜಾಪ್ರಭುತ್ವಕ್ಕೆ ಬದ್ಧವಾಗಿ ಸರ್ಕಾರ ನಡೆಸುವಂತೆ ನೋಡಿಕೊಳ್ಳುವ ಸಾಧನ. ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ಉಲ್ಲಂಘಿಸಿದರೆ ಅದು ಜನಾದೇಶದ ಉಲ್ಲಂಘನೆಯಾದಂತೆ. ಆ ಮೂಲಕ ಪ್ರಜಾಪ್ರಭುತ್ವಕ್ಕೆ ಅಗೌರವ ಮಾಡಿದಂತೆ.

ಯುಪಿಎ ಅಂಗಪಕ್ಷಗಳಿಗೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಅಗತ್ಯ ಬರಲಿಲ್ಲ. ಆದರೆ ಈ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿದ ಪಕ್ಷಗಳು -ಜೆಡಿ(ಎಸ್), ಎಸ್.ಪಿ, ಬಿ.ಎಸ್.ಪಿ ಇತ್ಯಾದಿ ಇವರು ಬೆಂಬಲ ನೀಡಲು ಯಾವ ಆಧಾರ? ಅವರಾದರೂ ಕನಿಷ್ಠ ಸಾಮಾನ್ಯ ಕಾರ್ಯಕ್ರಮಕ್ಕಾಗಿ ಒತ್ತಾಯ ಮಾಡಬೇಕಿತ್ತು. ಆದರೆ ಕಾಂಗ್ರೆಸ್ ಕೇಳದೆಯೆ ತಾನಾಗಿ ಓಡೋಡಿ ಬಂದು ಮೇಲಾಟ ನಡೆಸಿ ಬೆಂಬಲ ನೀಡಿದ ಈ ಪಕ್ಷಗಳಿಗೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮ ಪ್ರಶ್ನೆಯೆತ್ತಲು ಅವಕಾಶವಾದರೂ ಎಲ್ಲಿ?

2004 ರಲ್ಲಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ರೂಪಿಸಿದ ನಂತರ ಎಡಪಕ್ಷಗಳ ಮುಖಂಡರು ಹಾಗೂ ಯುಪಿಎ ಮುಖಂಡರು



2004 ರ ಕನಿಷ್ಠ ಕಾರ್ಯಕ್ರಮವನ್ನು ರೂಪಿಸುವಾಗ ಕರಡುಗಳಲ್ಲಿ ಸಾಮ್ರಾಜ್ಯಶಾಹಿಗಳೊಡನೆ ಹತ್ತಿರದ ಮೈತ್ರಿ ಸಾಧಿಸಬಯಸುವ ಭಾರತದ ಹಿರಿಯ ಬಂಡವಾಳಶಾಹಿಗಳ ಹಿತವನ್ನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷಕ್ಕೂ ಕಾರ್ಮಿಕ ವರ್ಗದ ಪಕ್ಷವಾದ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳಿಗೂ ಹೆಜ್ಜೆ ಹೆಜ್ಜೆಗೂ, ಕಾರ್ಯಕ್ರಮದ ಸಾಲು ಸಾಲಿಗೂ ತೀವ್ರ ಸಂಘರ್ಷವೇ ನಡೆಯಿತು. ನಂತರ ಅಂತಿಮವಾಗಿ ಒಂದು ರಾಜೀ ದಾಖಲೆಯಾಗಿ ಕನಿಷ್ಠ ಸಾಮಾನ್ಯ ಕಾರ್ಯಕ್ರಮ ರೂಪುಗೊಂಡಿತು. ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಮಾತ್ರ ಸರ್ಕಾರಕ್ಕೆ ಬೆಂಬಲ ಎಂಬು ದನ್ನು ಸ್ಪಷ್ಟಪಡಿಸಲಾಯಿತು. ಈ ಕನಿಷ್ಠ ಕಾರ್ಯಕ್ರಮವನ್ನು ರೂಪಿಸುವುದರಲ್ಲಿ ಬೇರೆ ಯಾವ ಯುಪಿಎ ಅಂಗಪಕ್ಷವೂ ಕ್ರಿಯಾಶೀಲ ಪಾತ್ರವಹಿಸಲಿಲ್ಲ. 2009 ರಂತೆ ಅಂದೂ ಕೂಡ ತಮ್ಮ ತಮ್ಮ ಪಕ್ಷಗಳಿಗೆ ಎಷ್ಟು ಮಂತ್ರಿಸ್ಥಾನ, ಯಾರಿಗೆ, ಯಾವ ಖಾತೆ ಎಂಬ ಕಚ್ಚಾಟದಲ್ಲಿಯೇ ಮಗ್ನವಾಗಿದ್ದವು.

ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಕೇವಲ 145 ಸ್ಥಾನವನ್ನಷ್ಟೇ ಗಳಿಸಿದ್ದರೂ ಕೂಡ ಯುಪಿಎ ಸರ್ಕಾರವೆಂದರೆ ಕೇವಲ ಕಾಂಗ್ರೆಸ್ ಸರ್ಕಾರವೆಂದೇ ಕೇವಲ ಕಾಂಗ್ರೆಸ್‌ಗೆ ಏಕಪಕ್ಷದ ಆಡಳಿತ ನಡೆಸಲು ಜನಾದೇಶ ದೊರೆತಿದೆಯೆಂದೇ ಭಾವಿಸಿತು. ತನ್ನ ಗರಿಷ್ಠ ಕಾರ್ಯಕ್ರಮವನ್ನು ಜಾರಿ ಮಾಡಲು ಪ್ರಯತ್ನಿಸಿತು. ಎಡಪಕ್ಷಗಳು ಇಂತಹ ಎಲ್ಲಾ ಸಂದರ್ಭ ಎತ್ತಿ ತೋರಿಸಿದಾಗಲೂ ಪ್ರಜಾಪ್ರಭುತ್ವದ ಮೂಲ ತತ್ವಗಳ ಆಧಾರದಲ್ಲಿ ಅವುಗಳ ಬಗ್ಗೆ ಚರ್ಚೆಯಾಗಲಿಲ್ಲ. ಹೀಗೆ ಕಾಂಗ್ರೆಸ್ ನೀತಿಗಳನ್ನು ದೇಶದ ಬಹುಸಂಖ್ಯಾತ ಜನತೆ ಒಪ್ಪದೇ ಅದಕ್ಕೆ ಬಹುಮತ ನೀಡಲು ನಿರಾಕರಿಸಿದಾಗಲೂ ಕೂಡ ಜನಾದೇಶವನ್ನು ಉಲ್ಲಂಘಿಸಲಾಯಿತು.

ಪತ್ರಿಕೆ ಮಾಧ್ಯಮಗಳಿಂದ ಪ್ರಜಾಪ್ರಭುತ್ವಕ್ಕೆ ಅಪಚಾರ

ಪ್ರಜಾಪ್ರಭುತ್ವದ ಒಂದು ಪ್ರಮುಖ ಆಧಾರಸ್ಥಂಭವೆಂದು ಕರೆದುಕೊಳ್ಳಲಿಚ್ಛಿಸುವ ಪತ್ರಿಕೆ ಮತ್ತು ಮಾಧ್ಯಮರಂಗವೂ ಕೂಡ ಪ್ರಜಾಪ್ರಭುತ್ವದ ಈ ಮೂಲತತ್ವದ ಪಾಲನೆಗೆ ಒತ್ತು ನೀಡುವುದಕ್ಕಿಂತಲೂ ಅದನ್ನು ಉಲ್ಲಂಘಿಸುವುದನ್ನು ಶ್ಲಾಘಿಸುತ್ತಾ ಪ್ರಜಾಪ್ರಭುತ್ವ ವಿರೋಧಿಯಾಗಿಯೇ ವರ್ತಿಸಿವೆ. 2004 ರ ಸಮಯದಲ್ಲಿ ಕನಿಷ್ಠ ಸಾಮಾನ್ಯ ಕಾರ್ಯಕ್ರಮ ರೂಪುಗೊಳ್ಳುವ ಪ್ರಕ್ರಿಯೆ ಹಾಗೂ ಅದರಲ್ಲಿ ಒಳಗೊಂಡ, ದೇಶದ ಹಿತಕ್ಕೆ ಪ್ರಧಾನವಾದ ವಿಷಯಗಳ ಚರ್ಚೆಯನ್ನು ಜನರ ಗಮನಕ್ಕೆ ತರದಂತೆ ಮುಚ್ಚಿಟ್ಟವು. ಎಡಪಕ್ಷಗಳು ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಉಲ್ಲಂಘನೆಯನ್ನು ವಿರೋಧಿಸಿದಾಗೆಲ್ಲಾ ಅದನ್ನು "ಹೊಣೆಗಾರಿಕೆಯಿಲ್ಲದ ಅಧಿಕಾರ" ಎಂದು "ಬಾಲವೇ ನಾಯಿಯನ್ನು ಅಲ್ಲಾಡಿಸುತ್ತದೆ" ಎಂದು, ಎಡಪಕ್ಷಗಳು ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳಾಗಿ ಏಕಕಾಲಕ್ಕೆ ವರ್ತಿಸುತ್ತಿವೆ ಎಂದೂ ಅಪಪ್ರಚಾರ ಮಾಡುತ್ತಾ ಪ್ರಜಾಪ್ರಭುತ್ವಕ್ಕೆ ಅಪಚಾರವೆಸಗಿದವು. ಅಣು ಒಪ್ಪಂದದ ಮೂಲಕ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಉಲ್ಲಂಘನೆಯಾದಾಗಲಂತೂ ಪತ್ರಿಕೆಗಳು, ಮಾಧ್ಯಮಗಳೆಲ್ಲಾ ಒಂದಾಗಿ (ಒಂದೆರಡು ಅಪವಾದವನ್ನು ಹೊರತುಪಡಿಸಿ) ಎಡಪಕ್ಷಗಳ ಮೇಲೆ ಧಾಳಿ ಎಸಗಿದವು. ಕನಿಷ್ಠ ಸಾಮಾನ್ಯ ಕಾರ್ಯಕ್ರಮವೆಂಬುದೊಂದಿದೆ ಎಂದು ನೆನಪಿಸಲೂ ಬಯಸಲಿಲ್ಲ. ಅದಕ್ಕೆ ವಿರುದ್ಧವಾಗಿ ಇಂತಹ ಉಲ್ಲಂಘನೆಯನ್ನು ಮಾಡಿದ ಮನಮೋಹನ್‌ಸಿಂಗ್‌ರವರನ್ನು ಹೊಗಳಿ ಅಟ್ಟಕ್ಕೇರಿಸಿದವು.

2009 ರಲ್ಲಿಯಂತೂ ಒಂದು ಸಮ್ಮಿಶ್ರ ಸರ್ಕಾರದ ಆಧಾರ, ಜನಾದೇಶದ ಜಾರಿ, ಕನಿಷ್ಠ ಸಾಮಾನ್ಯ



ಕಾರ್ಯಕ್ರಮ. ಅಂತಹ ಕಾರ್ಯಕ್ರಮವಿಲ್ಲದೆ ಯುಪಿಎ ಸರ್ಕಾರಕ್ಕೆ ಆಡಳಿತ ನಡೆಸಲು ಅಧಿಕಾರವಿಲ್ಲ ಎಂಬುದನ್ನೂ ನೆನಪಿಸಲೂ ಕೂಡ ಯಾವ ಪತ್ರಿಕೆಯೂ ಬಯಸುತ್ತಿಲ್ಲ. ಬದಲಾಗಿ ಈ ಸರ್ಕಾರಕ್ಕೆ ಅಂತಹ ತಾಪತ್ರಯವೊಂದಿಲ್ಲ ಎಂದು ಸಂಭ್ರಮಿಸುತ್ತಿವೆ.

ಕಾಂಗ್ರೆಸ್‌ನ ಸ್ಥಾನ 145 ರಿಂದ 206 ಕ್ಕೇರಿದ್ದರೂ ಕಾಂಗ್ರೆಸ್‌ಗೆ ಬಹುಮತ ದೊರಕಿಲ್ಲ. ಯುಪಿಎ ಕೂಟಕ್ಕೂ ಬಹುಮತ ದೊರೆತಿಲ್ಲ. ಹೀಗಾಗಿ ಅವರ ಪ್ರಣಾಳಿಕೆಗಳಿಗೆ ಜನತೆಯ ಮಂಜೂರಾತಿ ದೊರೆತಿಲ್ಲ. ಆದರೆ ಪತ್ರಿಕೆ- ಮಾಧ್ಯಮಗಳು ಕಾಂಗ್ರೆಸ್- ಮನಮೋಹನ್‌ಸಿಂಗ್ ಸೋನಿಯಾ- ರಾಹುಲ್‌ಗಾಂಧಿ ಕೂಟ ದಿಗ್ವಿಜಯವನ್ನೇ ಗಳಿಸಿದೆ ಎಂಬಂತೆ ವೈಭವೀಕರಿಸುತ್ತಾ ನಡೆದಿವೆ. ಕಾಂಗ್ರೆಸ್ ತನಗಾರು ಸಮಾನರು ಎಂಬ ಗರ್ವದಲ್ಲಿ ಮದದಾನೆಯಂತೆ ವರ್ತಿಸಿತು.

ಯುಪಿಎ ಅಂಗಪಕ್ಷಗಳೂ ಹೊರಬೆಂಬಲ ನೀಡಿದ ಪಕ್ಷಗಳೂ ತಮಗೆ ಮತ ನೀಡಿದ ಜನರ ಆದೇಶಕ್ಕೆ ಬದ್ಧವಾಗಿ ವರ್ತಿಸುವುದರ ಬದಲು ಕಾಂಗ್ರೆಸ್‌ಗೆ ಅಧೀನವಾಗಿ ವರ್ತಿಸುವುದೇ ತಮಗೆ ಜನ ನೀಡಿದ ಆದೇಶ ಎಂಬಂತೆ ವರ್ತಿಸುತ್ತಿವೆ. ಇಂತಹ ಪರಿಸ್ಥಿತಿ ಫಲವತ್ತಾದ ವಾತಾವರಣವನ್ನು ಸೃಷ್ಟಿಸಿದೆ.

ಇಂತಹ ಸಂದರ್ಭದಲ್ಲಿ ಜನತೆ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು, ಎಡಪಕ್ಷಗಳು ಜನಾದೇಶವನ್ನು ಸರ್ಕಾರದ ಮೇಲೆ ಹೇರುವ, ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಕೆಲಸವನ್ನು ಮಾಡಬೇಕಾಗಿದೆ. ○

ಶಿವಮೊಗ್ಗ


ಭಾರಿ ತತ್ವಬದ್ಧ ಎಂದು ಡಂಗೂರ ಸಾರಿಕೊಳ್ಳುವ ಬಿಜೆಪಿಯ ಇಬ್ಬರು ಹಿರಿಯ ರಾಜ್ಯ ಮುಖಂಡರ ನಡುವಿನ ತಿಕ್ಕಾಟದ ಕೇಂದ್ರ ಬಿಂದು ಏನು? ಇದು ವೈಚಾರಿಕ ಸಂಘರ್ಷವಾ? ಅನೈತಿಕವಾದ ವ್ಯಾವಹಾರಿಕ ಜಗಳವಾ? ಶಿವಮೊಗ್ಗದಿಂದ ಒಂದು ವರದಿ

ಯಡ್ಡಿ - ಈಶ್ವರಪ್ಪ ಭಿನ್ನಮತದ ಇನ್ನೊಂದು ಮುಖ ವೈಚಾರಿಕವೇನೂ ಇಲ್ಲ - ಎಲ್ಲ ವ್ಯವಹಾರಿಕ

"ಈ ಬಾರಿಯ ಚುನಾವಣೆಯಲ್ಲಿ ಜಯ ಗಳಿಸಲು ಹಣ, ಹೆಂಡ, ಜಾತಿಯ ಬಳಕೆ ಆಗಿದ್ದು ಇದರ ಬಗ್ಗೆ ಹಿರಿಯ ಮುಖಂಡರಿಂದ ತನಿಖೆ ನಡೆಸಬೇಕು. ಹಿಂದಿನ ಯಾವ ಚುನಾವಣೆಯಲ್ಲೂ ಪಕ್ಷದ ವಿರುದ್ಧ ಇಷ್ಟು ಆರೋಪಗಳು ಕೇಳಿ ಬಂದಿರಲಿಲ್ಲ. ಅಭಿವೃದ್ಧಿ ಕಾರ್ಯಗಳಿಗಿಂತ ಹೆಚ್ಚಾಗಿ ಹಣ ಹೆಂಡದ ಆರೋಪಗಳೇ ಚರ್ಚೆಯಾದವು. 19 ಕ್ಷೇತ್ರದಲ್ಲಿ ಪಕ್ಷ ಗೆದ್ದಿರಬಹುದು, ಆದರೆ ಯಾವ ರೂಪದಲ್ಲಿ ಜಯ ಲಭಿಸಿದೆ ಎಂಬುದೂ ಮುಖ್ಯ. ಶಿವಮೊಗ್ಗ ಕ್ಷೇತ್ರದಲ್ಲಿ ಬಿಜೆಪಿ ವಿರುದ್ಧವೇ ಹೆಚ್ಚು ನೀತಿಸಂಹಿತೆ ಉಲ್ಲಂಘನೆಯ ದೂರುಗಳು ಕೇಳಿಬಂದ ಹಿನ್ನಲೆಯಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಹಿತೈಷಿಗಳು ಬೇಸರ ವ್ಯಕ್ತ ಪಡಿಸಿದ್ದಾರೆ. ಅಪ್ಪ ಮಕ್ಕಳ ಪಕ್ಷ ಅಂತ ಬೇರೆಯವರಿಗೆ ಹೇಳುತ್ತಿದ್ದರು. ಈಗ ನಮ್ಮನ್ನೇ ದೂರುವಂತಾಗಿದೆ. ಬೂತ್ ಮಟ್ಟದ ಸಭೆಗಳಲ್ಲಿ ಪಕ್ಷದ ಸಭೆಗಳಲ್ಲಿ ಪಕ್ಷದ ಪ್ರಮುಖ ಮುಖಂಡರೇ ಖುದ್ದಾಗಿ ರಾಘವೇಂದ್ರ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದರ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿದ್ದಾರೆ.

ಬಿ ಜೆ ಪಿ ಯಲ್ಲಿ ಅಪ್ಪ ಮಕ್ಕಳ ದರ್ಬಾರು ಆರಂಭವಾಗಿರುವ ಕುರಿತು ನಾನು ನೀಡಿರುವ ಹೇಳಿಕೆಗೆ ಈಗಲೂ ಬದ್ಧ. ಕಾಂಗ್ರೇಸ್‌ನ ವಂಶಪಾರಂಪರ್ಯ ಆಡಳಿತ ಹಾಗೂ ಜೆ ಡಿ ಎಸ್‌ನ ಅಪ್ಪ ಮಕ್ಕಳ ರಾಜಕಾರಣ ಕುರಿತು ಟೀಕೆ ಮಾಡುತ್ತಿದ್ದ ಬಿಜೆಪಿ ಈಗ ಮಾಡುತ್ತಿರುವುದೇನು? ಲೋಕ ಸಭೆ ಚುನಾವಣೆ ರಾಜಕೀಯ ನೀತಿ ಸಿದ್ದಾಂತ ಮತ್ತು ಕಾರ್ಯಕ್ರಮಗಳ ಮೇಲೆ ನಡೆಯಬೇಕಿತ್ತು. ಬದಲಾಗಿ ಜಾತಿ ಹಣ ಹೆಂಡ ಬಳಕೆಯಾಗಿದ್ದು ದುರದೃಷ್ಟಕರ. ಧಾರ್ಮಿಕ ಸಮಾರಂಭ ವೊಂದರಲ್ಲಿ ಭಾಗಹಿಸಿದ್ದ ಮುಖ್ಯ ಮಂತ್ರಿಗಳು ಶಿವಮೊಗ್ಗ ನಗರ ಹಾಗೂ ಗ್ರಾಮೀಣ ಕ್ಷೇತ್ರಗಳಲ್ಲಿ ಬಿಜೆಪಿಗೆ ಹೆಚ್ಚಿನ ಬಹುಮತ ಬರಲಿಲ್ಲ ಎಂದು ಆರೋಪಿಸಿದ್ದಾರೆ. ರಾಜಕಾರಣ ಮಾಡುವುದು ಅಲ್ಲಿ (ಧಾರ್ಮಿಕ ಸಭೆಯಲ್ಲಿ) ಅಗತ್ಯವಿರಲಿಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ನಮ್ಮ ಪ್ರಶ್ನಾತೀತ ನಾಯಕರು. ಆದರೆ ಅವರು ದೇವರಲ್ಲ. ತಪ್ಪುಗಳನ್ನು ತಿದ್ದಿಕೊಂಡು ಪರಿಪೂರ್ಣರಾಗಬೇಕು. ಮಕ್ಕಳ ಮೇಲಿನ ವ್ಯಾಮೋಹದಂತಹ ಕೊರತೆಯನ್ನು ನೀಗಿಕೊಳ್ಳಬೇಕು. ನಾನು ಎತ್ತರುವ ಪ್ರಶ್ನೆಗಳ ಬಗ್ಗೆ ವೈಚಾರಿಕ ಚರ್ಚೆಯಾಗಬೇಕು."


ಇವಿಷ್ಟೂ ಕಳೆದ ವಾರದಿಂದ ಇಂಧನ ಸಚಿವ ಕೆ.ಎಸ್. ಈಶ್ವರಪ್ಪನವರು ನೀಡುತ್ತಿರುವ ಹೇಳಿಕೆಗಳ ಮುಖ್ಯಾಂಶಗಳು. ಈ ಹೇಳಿಕೆಯ ಮೂಲಕ ಬಿಜೆಪಿಯ ಅನೈತಿಕ ರಾಜಕಾರಣವನ್ನು ಈಶ್ವರಪ್ಪ ಹೊರ ಹಾಕಿದ್ದಾರೆ. ಮುಂಪರು ಪರೀಕ್ಷೆಯಲ್ಲಿ ಮನದಾಳವನ್ನು ಬಿಚ್ಚಿಡುವಂತೆ ಈಶ್ವರಪ್ಪನವರು ಈ ಪರಿ ಕಟು ಸತ್ಯಗಳನ್ನಾಡುತ್ತಿರುವುದರ ಮರ್ಮವಾದರೂ ಏನು? ನಮ್ಮ ನಡುವೆ ಭಿನ್ನಾಭಿಪ್ರಾಯ 'ವಯುಕ್ತಿಕ' ವಾದುದಲ್ಲ, 'ವೈಚಾರಿಕ'ವಾದದ್ದು ಎಂದು ಅವರು ಹೇಳಿದ್ದಾರಾದರೂ, ಸ್ವಲ್ಪ ಒಳಹೊಕ್ಕು ನೋಡಿದರೆ 'ವ್ಯಾವಹಾರಿಕ' ಕಾರಣಗಳು 'ವೈಚಾರಿಕ' ರೂಪದಲ್ಲಿ ಹೊರಬಂದಿದೆ ಎಂಬುದು ತಿಳಿಯುತ್ತದೆ.




ಮಗನ ಗೆಲುವಿನ ಅಂತರ ಕಡಿಮೆಯಾಯ್ತು ಅಂತ ಉಳಿದವರ ಜೊತೆ ಅಂತರ ಜಾಸ್ತಿ ಮಾಡ್ಕೊಳ್ತಿದ್ದಾರೆ !

ಬಡ ಕೂಲಿಕಾರರ ಕುಟುಂಬದಲ್ಲಿ ಬಳ್ಳಾರಿಯಲ್ಲಿ ಜನಿಸಿದ ಈಶ್ವರಪ್ಪ ತಂದೆ ತಾಯಿಯೊಡನೆ ಬಾಲ್ಯದಲ್ಲಿಯೇ ಶಿವಮೊಗ್ಗ ಸೇರಿದರು. ಮಂಡ್ಯ ಜಿಲ್ಲೆ ಬೂಕನಕೆರೆಯ ರೈತರ ಕುಟುಂಬದ ಯಡಿಯೂರಪ್ಪ ಶಿಕಾರಿಪುರದಲ್ಲಿ ಗುಮಾಸ್ತರಾಗಿ ಕೆಲಸಕ್ಕಾಗಿ ಬಂದರು. ನಂತರ ಹಾರ್ಡವೇರ್ ಅಂಗಡಿ ಪ್ರಾರಂಭಿಸುವುದರೊಂದಿಗೆ ಶಿವಮೊಗ್ಗಕ್ಕೆ ವಿಸ್ತರಿಸಿದರು. ಇಬ್ಬರೂ 'ಸಂಘ' ಸಂಪರ್ಕದಿಂದ ಒಂದಾಗಿ ರಾಜಕೀಯದಲ್ಲಿ ಸರಿಸಮವಾಗಿ ಬೆಳೆದರು. ಅಧಿಕೃತ, ಅನಧಿಕೃತ ವ್ಯವಹಾರಗಳೆಲ್ಲದರಲ್ಲೂ ಇಬ್ಬರೂ ಉತ್ತಮ ಪಾಲುದಾರರಾಗಿದ್ದವರು. ಆದರೆ ಪಾಳೆಗಾರಿ ಮನೋಭಾವದ ಯಡಿಯೂರಪ್ಪನವರು ಪಾಲುದಾರಿಕೆಗಿಂತ ಕುಟುಂಬ 'ಅಭಿವೃದ್ಧಿ'ಗೆ ಒತ್ತು ನೀಡಲಾರಂಭಿಸಿದರು. ಶಿವಮೊಗ್ಗದ ಅವರ 'ಸಾಮ್ರಾಜ್ಯ'ಕ್ಕೆ ಮಕ್ಕಳು ಅಧಿಪತಿಗಳಾಗ ತೊಡಗಿದರು. ಯಡಿಯೂರಪ್ಪ ಉಪ ಮುಖ್ಯ ಮಂತ್ರಿಯಾದಾಗ ಈಶ್ವರಪ್ಪನವರಿಗೆ ಮಹತ್ವದ ಜಲಸಂಪನ್ಮೂಲ ಖಾತೆಯೇ ದೊರಕಿತ್ತು. ಆದರೆ ಅವರು ಮುಖ್ಯಮಂತ್ರಿಯಾದ ನಂತರ ಈಶ್ವರಪ್ಪನವರಿಗೆ ಹಿಂದಿಗಿಂತ ಕಡಿಮೆ ಮಹತ್ವದ ಇಂಧನ ಖಾತೆ ದೊರಕಿತು. ಅಧಿಕಾರ ವಹಿಸಿಕೊಳ್ಳುತ್ತಿದ್ದ ಹಾಗೆ ವಿದ್ಯುತ್ ಅಭಾವದಿಂದ ಈಶ್ವರಪ್ಪ ಖಾತೆ ನಿಭಾಯಿಸಲಾರದೆ ದಿನಕ್ಕೊಂದು ಹೇಳಿಕೆಗಳನ್ನು ನೀಡಿ ಜನಗಳಿಂದ ಛೀಮಾರಿ ಹಾಕಿಸಿಕೊಳ್ಳಬೇಕಾಯಿತು. ಜತೆಗೆ ಇವರ ಖಾತೆಯ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಅವರ ಆಪ್ತ ಸಚಿವೆ ಮಾತ್ರವಲ್ಲದೆ ಮುಖ್ಯಮಂತ್ರಿಗಳ ಕುಟುಂಬದವರೂ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಮಾತುಗಳೂ ಕೇಳಿ ಬಂದವು. ಅದುವರಿಗೂ ಈಶ್ವರಪ್ಪನವರು ಎಲ್ಲವನ್ನೂ ಸಹಿಸಿಕೊಂಡಿದ್ದರು.

ಯಾವಾಗ ಮುಖ್ಯಮಂತ್ರಿ ಗಳ ಮಗನೇ ಲೋಕಸಭಾ ಅಭ್ಯರ್ಥಿ ಎಂದಾಯಿತೋ ಆಗ ಇಬ್ಬರ ನಡುವಿನ ಪಾಲುದಾರಿಕೆ ಸಂಬಂಧ ಸಂಪೂರ್ಣ ಹಳಸಿತು. ವ್ಯವಹಾರಗಳು ಬೇರೆ ಬೇರೆಯಾಗಿ ಪರಸ್ಪರ ಸ್ಪರ್ಧಿಗಳಾಗ ಲಾರಂಭವಾಯಿತು. ಯಡಿಯೂರಪ್ಪನವರ 'ಪೆಸಿಟ್' ಕಾಲೇಜಿಗೆ ಸ್ಪರ್ಧಿಯಾಗಿ ಈಶ್ವರಪ್ಪನವರ 'ಪೇಸ್' ಕಾಲೇಜಿಗೆ ಬೀಜಾಂಕುರವಾಯಿತು.






ಅವರಿಬ್ಬರ ನಡುವಿನ ಭಿನ್ನಾಭಿಪ್ರಾಯಗಳು, ಜಗಳಗಳು ಏನೇ ಇರಲಿ ರಾಜಕೀಯದಲ್ಲಿ ವ್ಯವಹಾರದಲ್ಲಿ ಇವೆಲ್ಲ ಮಾಮೂಲಿ. ಆದರೆ ಈ ವಿಚಾರದಲ್ಲಿ ನಮ್ಮ ಪತ್ರಿಕೆಗಳು ಹಾಗೂ ಮಾಧ್ಯಮಗಳೂ ಈಶ್ವರಪ್ಪನವರ ವಿರುಧ್ಧ, ಯಡಿಯೂರಪ್ಪನವರ ಪರವಾಗಿ ನಾಚಿಗೆ ಹೇಸಿಗೆ ಯಿಲ್ಲದಂತೆ ಪಕ್ಷಪಾತದಿಂದ ವರದಿಗಳನ್ನು ಮಾಡುತ್ತಿರುವುದು ಖಂಡನೀಯ. 'ಈಶ್ವರಪ್ಪ ಮೀಸೆ ಮಣ್ಣು', 'ಈಶ್ವರಪ್ಪ ಪಟಾಕಿ ಟುಸ್' 'ಈಶ್ವರಪ್ಪನ ಇಂಧನ ಖಾಲಿ' ಇವು ನಮ್ಮ ಕನ್ನಡ ದಿನ ಪತ್ರಿಕೆಗಳ ಶೀರ್ಷಿಕೆಗಳು. ಈ ವಿಷಯದಲ್ಲಿ ಈಶ್ವರಪ್ಪನವರ ಆರೋಪಗಳು, ಹೇಳಿಕೆಗಳು ಅಕ್ಷರಶಃ ಸತ್ಯವಾಗಿದ್ದರೂ, ಅವರ ನಿಲುವಿಗೆ ಅವರ ಪಕ್ಷದರೂ, ಯಾವ ಪತ್ರಿಕೆಗಳು ಬೆಂಬಲಕ್ಕೆ ಬರದಿದ್ದುದರ ಹಿಂದೆ ಬಲವಾದ 'ವ್ಯಾವಹಾರಿಕ' ಕಾರಣಗಳೇ ಇರಬೇಕು. ಯಡಿಯೂರಪ್ಪ ಮುಖ್ಯಮಂತ್ರಿಯಾದಾಗಿನಿಂದಲೂ 'ಮಾಧ್ಯಮ' ಮಿತ್ರರನ್ನು ಬಹಳ ಚನ್ನಾಗಿ 'ನೋಡಿಕೊಳ್ಳುತ್ತಿದ್ದಾರೆ'. ಹೆಚ್ಚೂ ಕಡಿಮೆ ಪ್ರತಿದಿನ ಪುಟಗಟ್ಟಲೆ ಜಾಹಿರಾತುಗಳು ಪತ್ರಿಕೆಗಳಿಗೆ ಹರಿದುಬರುತ್ತಿವೆ. ಅಧಿಕೃತವಾಗಿ ಜಾಹಿರಾತುಗಳ ಜತೆಗೆ ಬೇರೆ ಬೇರೆ ರೀತಿಗಳಲ್ಲೂ ಕೂಡ ಬಹಳ ಚನ್ನಾಗಿ 'ನೋಡಿಕೊಳ್ಳು'ತ್ತಿದ್ದಾರೆ. ಈ ಋಣ ಭಾರದಿಂದ ಪತ್ರಿಕೆಗಳು ಈಶ್ವರಪ್ಪನವರನ್ನು ಹೀರೋ ವಿರುದ್ಧ ಬಂಡುಕೋರನನ್ನಾಗಿ ಚಿತ್ರಿಸುತ್ತಿದ್ದಾರೆ.

"ಯಾರೇ ಆಗಲೀ ಪಕ್ಷದ ಅಂತರಿಕ ವಿಚಾರಗಳನ್ನು ಬಹಿರಂಗ ಮಾಡುವ ಅಗತ್ಯವಿಲ್ಲ. ಆಂತರಿಕ ವಿಚಾರಗಳನ್ನು ಹೊರಗೆ ಚರ್ಚೆ ಮಾಡಬಾರದು. ಹಾಗೆ ಮಾಡಿದರೆ ಅಂತಹವರ ವಿರುದ್ಧ ಶಿಸ್ತುಕ್ರಮ ಅನಿವಾರ್ಯ" ಎಂದು ಪಕ್ಷಾಧ್ಯಕ್ಷ ಸದಾನಂದ ಗೌಡ ಎಚ್ಚರಿಕೆ ನೀಡಿದ್ದಾರೆ. ಈಶ್ವರಪ್ಪನವರು ತಪ್ಪು ಮಾಡಿದ್ದಾರೆಂದರೆ, ಮುಖ್ಯಮಂತ್ರಿ ಯಡಿಯೂರಪ್ಪನವರು ತಪ್ಪು ಮಾಡಿಲ್ಲವೇ? ಧಾರ್ಮಿಕ ಸಭೆಯೊಂದರಲ್ಲಿ ಪಕ್ಷದ ಆಂತರಿಕ ವಿಚಾರಗಳನ್ನು ಬಹಿರಂಗವಾಗಿ ಚರ್ಚಿಸಿದ್ದು ಸರಿಯೇ? ಸದಾನಂದಗೌಡರು ಇವರ ವಿರುದ್ದವೂ ಶಿಸ್ತು ಕ್ರಮ ಕೈಗೊಳ್ಳುವರೇ? ಖಂಡಿತ ಇಲ್ಲ. ಗೆದ್ದಮೇಲೂ ಈ ಗುದ್ದಾಟ ಯಾಕೆ? "ನಾನು ಹತ್ತು ರೂಪಾಯಿ ಕೊಟ್ಟಿದ್ದೆ. ನೀನು ಒಂದು ರೂಪಾಯಿಯ ಐದು ಚಾಕಲೇಟು ಮಾತ್ರ ತಂದಿದ್ದೀಯ ಇನ್ನುಳಿದ ಐದು ಚಾಕಲೇಟು ಅಥವಾ ಐದು ರುಪಾಯಿ ಏನಾಯಿತು?" ಎಂದು ಬಹಿರಂಗವಾಗಿ ಯಡಿಯೂರಪ್ಪ ಚೀರಾಡುತ್ತಿದ್ದಾರೆ. ಇದರಲ್ಲಿ ವೈಚಾರಿಕ ಕಾರಣವೇನಿದೆ? ಅಪ್ಪಟ 'ವ್ಯವಹಾರಿಕ' ಕಾರಣ ತಾನೆ? (ಈ ಬಾರಿ ಹಣ ಹಂಚಿಕೆಯ ವಿಶೇಷವೇನೆಂದರೆ ಓಟು ಹಾಕುವುದಕ್ಕೆ ಹಣ ಹಂಚುವುದರ ಜೊತೆಗೆ ವಿರೋಧಿಗಳು ಓಟು ಹಾಕದಿರಲೂ ಹಣ ನೀಡಿದರು ಎಂಬ ಸುದ್ದಿ ಹರಿದಾಡುತ್ತಿತ್ತು.)

ಇದಕ್ಕೆಲ್ಲ ಮೂಲ ಏನು? ಎಲೆಕ್ಟ್ರಾನಿಕ್ ಮತಯಂತ್ರಗಳ ಫಲಿತಾಂಶ ಎಣಿಕೆಯ ರೀತಿ. ಮುಂಚೆ ವಿವಿಧ ಬೂತ್‌ಗಳ ಮತಗಳನ್ನು ಒಟ್ಟಿಗೆ ಎಣಿಸಲಾಗುತ್ತಿತ್ತು. ಈಗ ಒಂದೊಂದು ಬೂತ್‌ನ ಮತಗಳ ವಿವರವೇ ತಿಳಿಯುವುದರಿಂದ 'ಗುಪ್ತ ಮತದಾನ' ಎಂಬುದು ಇಲ್ಲವಾಗಿದೆ. ಇದರಿಂದ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ಗೆದ್ದ ಪ್ರತಿನಿಧಿಗಳು "ನಿಮ್ಮ ಏರಿಯಾದಲ್ಲಿ ನನಗೆ ಕಡಿಮೆ ಓಟ್ ಬಿದ್ದಿದೆ ಹೋಗ್ರೀ" ಅಂತ ಜನರ ಅಹವಾಲುಗಳನ್ನು ಕೇಳದೇ ದಬಾಯಿಸಿ ಕಳುಹಿಸುತ್ತಿದ್ದಾರೆ.

ಈಗ ಬಿಜೆಪಿಯೊಳಗಿನ ಅನೈತಿಕ ವ್ಯವಹಾರಗಳ ಹೂರಣ ಬೀದಿಗೆ ಬಿದ್ದಿದೆ. ಪಕ್ಷದ ರಾಷ್ಟ್ರೀಯ ಮುಖಂಡರು ಪಂಚಾಯ್ತಿ ಮಾಡಿ ತತ್‌ಕಾಲಕ್ಕೆ ಏನೋ ಒಂದು ತೇಪೆ ಹಚ್ಚಬಹುದು. ಒತ್ತಡಕ್ಕೊಳಗಾದ ಈಶ್ವರಪ್ಪ ಕೊಂಚ ಧಾಟಿ ಬದಲಿಸಬಹುದು. ಆದರೆ ಇದು ಇಲ್ಲಿಗೇ ನಿಲ್ಲುವ ಜಗಳವಲ್ಲ. ಏಕೆಂದರೆ ಆಳ ಕೆಸರಿನಲ್ಲಿ ಕಾಲು ಹೂತುಕೊಂಡು ನಿಂತಿರುವವರು ಎಷ್ಟು ಹೊತ್ತು ಹಾಗೆ ನಿಂತಾರು?. ಜಾರಿ ಹೊಲಸಲ್ಲಿ ಮುಳುಗುವುದು ಖಚಿತ. ಯಾವಾಗ ಎಂಬುದಷ್ಟೇ ಪ್ರಶ್ನೆ.

● ಶ್ರೀ



ಅಂತ್ಯ ಕಾಣದ ಉದ್ಯೋಗ ಕಡಿತ

ಜಾಗತಿಕ ಆರ್ಥಿಕತೆ ಚೇತರಿಕೆ ಕಾಣುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಕಳೆದ ಮೇ ತಿಂಗಳಲ್ಲಿ ಮಾತ್ರವೇ ಅಮೆರಿಕದ ಕಂಪನಿಗಳು 5,32,000 ಉದ್ಯೋಗಗಳನ್ನು ಕಡಿತಗೊಳಿಸಿವೆ. 499 ಕ್ಕಿಂತಲೂ ಹೆಚ್ಚು ಸಿಬ್ಬಂದಿಯನ್ನು ಹೊಂದಿರುವ ಸಣ್ಣ ಕಂಪನಿಗಳು 1 ಲಕ್ಷ ಉದ್ಯೋಗಗಳನ್ನು ಕಡಿತಗೊಳಿಸಿದ್ದರೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕಂಪನಿಗಳು 2,23,000 ಉದ್ಯೋಗಗಳನ್ನು ಕಡಿತಗೊಳಿಸಿವೆ. ಸರಕು ಉತ್ಪಾದನೆ ಮತ್ತು ನಿರ್ಮಾಣ ಕಂಪನಿಗಳಲ್ಲಿ 2,67,000 ಉದ್ಯೋಗ ಕಡಿತವಾಗಿದ್ದರೆ, ತಯಾರಿಕೆ ವಲಯದಲ್ಲಿ ಮಾತ್ರವೇ 1,49,000 ಮತ್ತು ಸೇವಾ ವಲಯದಲ್ಲಿ 2,65,000 ಉದ್ಯೋಗಗಳನ್ನು ಕಡಿತಗೊಳಿಸಲಾಗಿದೆ. ಇದೇ ಸಂದರ್ಭದಲ್ಲಿ ಅಮೆರಿಕದ ನಿರುದ್ಯೋಗ ಪ್ರಮಾಣ ಕಳೆದ 25 ವರ್ಷಗಳಲ್ಲೇ ಅತ್ಯಧಿಕ ಶೇಕಡ 9.2ಕ್ಕೆ ತಲುಪಿದೆ.

ಜಪಾನ್‌ನಲ್ಲೂ ಉದ್ಯೋಗ ಕಡಿತ ಪ್ರಮಾಣ ತೀವ್ರವಾಗಿದೆ. ಕಳೆದ ಆರು ತಿಂಗಳಲ್ಲಿ ಜಪಾನ್‌ನ 20 ಪ್ರಮುಖ ತಯಾರಿಕಾ ಕಂಪನಿಗಳು 87 ಸಾವಿರ ಉದ್ಯೋಗಗಳನ್ನು ಕಡಿತಗೊಳಿಸಿವೆ. ಪಾನಾಸೋನಿಕ್ ಮತ್ತು ಸೋನಿ ಕಾರ್ಪೊರೇಷನ್ ಸಹ ಇದರಿಂದ ಹೊರತಾಗಿಲ್ಲ. ಕಳೆದ ಮಾರ್ಚ್ ಅಂತ್ಯದವರೆಗೆ ಈ 20 ಪ್ರಮುಖ ತಯಾರಿಕಾ ಕಂಪನಿಗಳಲ್ಲಿ 28,58,000 ಮಂದಿ ಕಾರ್ಯ ನಿರ್ವಹಿಸುತ್ತಿದ್ದರು. ಆದರೀಗ ಉದ್ಯೋಗಿಗಳ ಸಂಖ್ಯೆ ಶೇಕಡ 3ರಷ್ಟು ಕಡಿಮೆಯಾಗಿದೆ.

ಆರ್ಥಿಕತೆ ಚೇತರಿಕೆ ಕಾಣುತ್ತಿದೆ ಎಂದು ಸರ್ಕಾರಗಳು ಬೊಗಳೆ ಬಿಡುತ್ತಿವೆ. ಮತ್ತೊಂದೆಡೆ ಉದ್ಯೋಗ ಕಡಿತ ನಿರಂತರವಾಗಿ ಮುಂದುವರೆದಿದೆ. ಜಗತ್ತಿನಾದ್ಯಂತ ಎಲ್ಲ ಸರ್ಕಾರಗಳು ಬಂಡವಾಳಶಾಹಿಗಳನ್ನು ರಕ್ಷಿಸಲು ತೆರಿಗೆದಾರರ ಹಣವನ್ನು ಯಥೇಚ್ಛವಾಗಿ ಬಳಕೆ ಮಾಡುತ್ತಿವೆ. ಅಮೆರಿಕ ಸರ್ಕಾರ ಈಗಾಲೇ 70 ಸಾವಿರ ಕೋಟಿ ಡಾಲರ್ ಪರಿಹಾರ ಪ್ಯಾಕೇಜ್ ಪ್ರಕಟಿಸಿದೆ. ಇನ್ನೂ ಒಂದು ಲಕ್ಷ ಕೋಟಿ ಡಾಲರ್ ಪರಿಹಾರ ಬೇಕಾಗಿದೆ ಎಂದು ಜಾಗತಿಕ ಸಂಸ್ಥೆಗಳು ಹೇಳುತ್ತಿವೆ. ಬ್ರಿಟನ್ ಆದಿಯಾಗಿ ಇತರ ದೇಶಗಳೂ ಪರಿಹಾರ ಪ್ಯಾಕೇಜ್‌ಗಳನ್ನು ನೀಡಿವೆ.

ಜಾಗತಿಕ ಆರ್ಥಿಕ ಹಿಂಜರಿತದ ತೀವ್ರ ಹೊಡೆತದಿಂದ ಸ್ವಲ್ಪ ಮಟ್ಟಿಗೆ ತಪ್ಪಿಸಿಕೊಂಡಿರುವ ದೇಶಗಳೆಂದರೆ ಚೀನಾ ಮತ್ತು ಭಾರತಗಳಾಗಿವೆ. ಚೀನಾದಲ್ಲಿ ಕಮ್ಯೂನಿಷ್ಟ್ ಪಕ್ಷದ ನೇತೃತ್ವದ ಆಡಳಿತವಿರುವುದರಿಂದ ಭಾರತದಲ್ಲಿ ಕಳೆದ ಐದು ವರ್ಷಗಳಲ್ಲಿ ಯುಪಿಎಗೆ ಬಾಹ್ಯ ಬೆಂಬಲ ನೀಡಿದ್ದ ಎಡಪಕ್ಷಗಳ ರಚನಾತ್ಮಕ ವಿರೋಧದಿಂದಾಗಿ ಈ ಮಟ್ಟಿನ ರಕ್ಷಣೆ ಸಾಧ್ಯವಾಗಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈಗ ಜಾಗತಿಕ ಆರ್ಥಿಕ ಹಿಂಜರಿತವನ್ನು ಹಿಮ್ಮೆಟ್ಟಿಸಲು ಚೀನಾ ಮತ್ತು ಭಾರತದ ಸಂಪನ್ಮೂಲಗಳ ಮೇಲೆ ಶ್ರೀಮಂತ ದೇಶಗಳ ನೋಟ ನೆಟ್ಟಿದೆ.

○ ಅಪ್ಪು


ತಗ್ಗಿದ 'ವಿಮಾನ ಹಾರಾಟ'

ಇದೇ ಬಿಕ್ಕಟ್ಟು ವಿಮಾನ ಸಾರಿಗೆ ಕ್ಷೇತ್ರದ ಮೇಲೆ ಹೇಗೆ ಪರಿಣಾಮ ಬೀರಿದೆ ನೋಡಿ. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ (ಬಿಐಎ)ದ ಮೂಲಕ ಸಂಚರಿಸುವ ವಿಮಾನ ಪ್ರಯಾಣಿಕರ ಸಂಖ್ಯೆಯಲ್ಲಿ ದೊಡ್ಡ ಕುಸಿತವಾಗಿದೆ.

ಮೇ 24, 2008 ರಂದು ಉದ್ಘಾಟನೆಗೊಂಡ ಈ ವಿಮಾನ ನಿಲ್ದಾಣದ ಮೂಲಕ ಒಂದು ವರ್ಷದ ಅವಧಿಯಲ್ಲಿ ಸುಮಾರು 13 ದಶಲಕ್ಷ ಅಂದರೆ 1 ಕೋಟಿ 30 ಲಕ್ಷ ಪ್ರಯಾಣಿಕರು ಪ್ರಯಾಣ ಮಾಡುವರೆಂಬ ಅಂದಾಜಿತ್ತು. ಆದರೆ ಕಳೆದ ಒಂದು ವರ್ಷದ ಅವಧಿಯಲ್ಲಿ 8.7 ದಶಲಕ್ಷ ಅಂದರೆ 87 ಲಕ್ಷ ಪ್ರಯಾಣಿಕರು ಮಾತ್ರ ಈ ನಿಲ್ದಾಣದ ಮೂಲಕ ಪ್ರಯಾಣಿಸಿದ್ದಾರೆ. ಇದು ಅದರ ಹಿಂದಿನ ವರ್ಷದ ಪ್ರಯಾಣಿಕರ ಸಂಖ್ಯೆಗಿಂತ ಶೇ. 14 ರಷ್ಟು ಕಡಿಮೆ.

ಕೈಗಾರಿಕಾ, ವ್ಯಾಪಾರ, ವಾಣಿಜ್ಯ ವ್ಯವಹಾರಗಳಲ್ಲಿನ ಕುಸಿತದ ನೇರ ಪರಿಣಾಮ ಇದು ಅಂದರೆ ತಪ್ಪೇನಲ್ಲ. ಆರ್ಥಿಕತೆ ಬಿಕ್ಕಟ್ಟು ಎಷ್ಟು ತೀವ್ರವಾಗಿದೆ ಎಂಬುದಕ್ಕೆ ಇದು ಒಂದು ಅಳತೆಗೋಲು ಅಂದರೂ ತಪ್ಪಿಲ್ಲ.

ಆಳುವವರಿಗೆ ಬಿಕ್ಕಟ್ಟಿನ ತೀವ್ರತೆ ಅರ್ಥವಾಗುವುದೇ?



ಬೆಂಗಳೂರು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ

ಆರೋಗ್ಯ ಕ್ಷೇತ್ರದ ಮೇಲೂ ಬಿಕ್ಕಟ್ಟಿನ ಛಾಯೆ

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮ ಯಾವ ಕ್ಷೇತ್ರವನ್ನು ಬಿಟ್ಟಿಲ್ಲ. ಅದರ ಕರಿ ನೆರಳು ಕೈಗಾರಿಕಾ ವ್ಯಾಪಾರ ಉದ್ದಿಮೆ ಎಲ್ಲದರ ಮೇಲೂ ಬಿದ್ದಿದೆ. ಉದ್ದಿಮೆ ಎಂದಾಗ ಅದು ಆರೋಗ್ಯ ಸಂಬಂಧಿ ಸಾಧನ ಸಲಕರಣೆ ತಯಾರಿಸುವ ಉದ್ದಿಮೆಯನ್ನು ಕೂಡ ತಟ್ಟಿದೆ.

ಜಿ.ಇ. ಮೆಡಿಕಲ್ಸ್ ಎಂಬುದು ಬೆಂಗಳೂರು ನಗರದ ಕೆ.ಆರ್.ಪುರಂ ಪ್ರದೇಶದಲ್ಲಿರುವ ಉದ್ದಿಮೆಗಳ ಸಮೂಹ. ಆರೋಗ್ಯ ಕ್ಷೇತ್ರದಲ್ಲಿ ಬಳಕೆಯಾಗುವ ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ ಇಲ್ಲಿ ನಡೆಯುವುದು. ಜಿ.ಇ. ಹೆಲ್ತ್ ಕೇರ್, ಜಿ.ಇ. ಬೆಲ್, ವಿಪ್ರೊ ಜಿ.ಇ. ಹೆಸರಿನ ಮೂರು ಘಟಕಗಳು ಇಲ್ಲಿವೆ. ಒಟ್ಟಾರೆ ಸುಮಾರು 2000 ಜನ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದರು. ಅವರಲ್ಲಿ 700 ಜನ ಟ್ರೈನಿಗಳಾಗಿದ್ದರು. ಈ 700 ರಲ್ಲಿ 250 ಜನರನ್ನು ತೆಗೆದುಹಾಕಲಾಗಿದೆ. ಇನ್ನೂ 125 ಜನರಿಗೆ ತೆಗೆದುಹಾಕುವ ಬಗೆಗೆ ಸೂಚನೆ ನೀಡಲಾಗಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ಇದೆ ಎಂಬ ಕಾರಣಕ್ಕೆ ಜನರ ಆರೋಗ್ಯ ಕೆಡುವುದೇನಾದರೂ ತಪ್ಪುತ್ತದಾ? ಇಲ್ಲವಲ್ಲ. ಆದರೂ ಆಸ್ಪತ್ರೆಗೆ ಬೇಕಾದ ಈ ವೈಜ್ಞಾನಿಕ ಸಾಧನ ಸಲಕರಣೆಗಳಿಗೆ ಬೇಡಿಕೆ ಕುಗ್ಗುತ್ತಿದೆಯಂತೆ. ಅಂದರೆ ಅನಾರೋಗ್ಯ ಆದರೂ ಜನ ಆಸ್ಪತ್ರೆಗೆ ಹೋಗುವುದನ್ನು ತಪ್ಪಿಸುತ್ತಾರೆ ಅಂತ ಇದರ ಅರ್ಥ. ಹೀಗಿದೆ ಆರ್ಥಿಕ ಬಿಕ್ಕಟ್ಟಿನ ಪರಿಣಾಮ.

ಸಂಪನ್ಮೂಲ ಶಿಕ್ಷಕರಿಂದ ಉಪವಾಸ ಸತ್ಯಾಗ್ರಹ

ಮಾನಸಿಕ ಹಾಗೂ ದೈಹಿಕ ವಿಕಲಾಂಗ ಮಕ್ಕಳಿಗೆ ವಿಶೇಷ ತರಬೇತಿ ನೀಡುವ ಸಂಪನ್ಮೂಲ ಶಿಕ್ಷಕರು ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಿ ಬೆಂಗಳೂರಿನ ಬನ್ನಪ್ಪ ಪಾರ್ಕ್ ಬಳಿ ಎಸ್‌ಎಫ್‌ಐ ಡಿವೈಎಫ್‌ಐ ಬೆಂಬಲದೊಂದಿಗೆ ಜೂನ್ 5 ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.


ಕೇಂದ್ರ ಸರ್ಕಾರದ ಅನುದಾನದಡಿ ವಿಕಲಾಂಗ ಮಕ್ಕಳಿಗೆ ವಿಶೇಷ ತರಬೇತಿ ನೀಡುವ ಉದ್ದೇಶದೊಂದಿಗೆ 1984 ರಲ್ಲಿ ಜಾರಿಗೆ ಬಂದ ಈ ಯೋಜನೆಯನ್ನು ಕೇಂದ್ರ ಸರ್ಕಾರ ಹಿಂಪಡೆಯುವುದರೊಂದಿಗೆ ಶಿಕ್ಷಕ ಸಮುದಾಯ ಹಾಗೂ ಬುದ್ಧಿ ಮಾಂದ್ಯ ಮಕ್ಕಳು ಇದರಿಂದ ಅತಂತ್ರ ಸ್ಥಿತಿಯನ್ನು ಎದುರಿಸುವಂತಾಗಿದೆ. 1984 ರಿಂದಲೂ ಕರ್ನಾಟಕ ರಾಜ್ಯ ಸರ್ಕಾರ ಈ ಯೋಜನೆಯನ್ನು ತಾನು ನಿರ್ವಹಿಸದೆ ಎನ್‌ಜಿಓಗಳಿಗೆ ಬಿಟ್ಟುಕೊಟ್ಟು ಅಪಾರ ಪ್ರಮಾಣದ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಟ್ಟಿತು. ದೇಶದ ಇತರೆ ರಾಜ್ಯಗಳಲ್ಲಿ ಈ ಯೋಜನೆಯನ್ನು ಆಯಾ ರಾಜ್ಯ ಸರ್ಕಾರವೇ ನೇರವಾಗಿ ವಹಿಸಿಕೊಂಡು ಬರುತ್ತಿದ್ದರೂ ಕರ್ನಾಟಕದಲ್ಲಿ ಈ ಯೋಜನೆ ಎನ್‌ಜಿಓ ಗಳ ಕೈಗೆ ಸಿಕ್ಕಿ ಯೋಜನೆಯ ಮೂಲ ಉದ್ದೇಶವೇ ಜಾರಿಯಾಗದೆ, ಕೊನೆಗೆ ಒಟ್ಟು ಯೋಜನೆಯೇ ನಿಲ್ಲುವಂತಾಗಿ, ಸದರಿ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 1200 ಶಿಕ್ಷಕರು ತಮ್ಮ ಕೆಲಸ ಕಳೆದುಕೊಂಡು ಅಸಹಾಯಕ ಸ್ಥಿತಿ ತಲುಪಿದ್ದಾರೆ. ಹಲವು ವರ್ಷಗಳಿಂದಲೂ ಹೋರಾಟಗಳನ್ನು, ನಡೆಸಿ ಸರ್ಕಾರದ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗದೇ ಕೊನೆಗೆ ಉಪವಾಸ ಸತ್ಯಾಗ್ರಹದ ದಾರಿ ಹಿಡಿದಿದ್ದಾರೆ.

ಮುಖ್ಯವಾಗಿ ಸರ್ಕಾರದ ಮುಂದಿಟ್ಟಿರುವ ಪ್ರಮುಖ ಬೇಡಿಕೆಗಳೆಂದರೆ, 1. ಯೋಜನೆಯನ್ನು ಮುಂದುವರೆಸಲು ಪರ್ಯಾಯ ಕ್ರಮಗಳನ್ನು ಅನುಸರಿಸಿ 1200 ಶಿಕ್ಷಕರ ಪುನರ್ ನೇಮಕಾತಿಗೆ ರಾಜ್ಯ ಸರ್ಕಾರ ಮುಂದಾಗಬೇಕು.

2. ಈ ಯೋಜನೆಯನ್ನು ಮತ್ತೆ ಎನ್‌ಜಿಓ ಗಳಿಗೆ ವಹಿಸದೆ ರಾಜ್ಯ ಸರ್ಕಾರವೇ ನೇರವಾಗಿ ನಡೆಸಬೇಕು.

3. 1200 ನೌಕರರನ್ನು ಸರ್ಕಾರ ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಈ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗಿದೆ. ಸರ್ಕಾರ ಪ್ರತಿಭಟನಾ ನಿರತರನ್ನು ಮಾತುಕತೆಗೆ ಕರೆದು ಯಾವುದೇ ಪರಿಹಾರ ಸೂಚಿಸದ ಹಿನ್ನೆಲೆಯಲ್ಲಿ ಸತ್ಯಾಗ್ರಹವನ್ನು ಮುಂದುವರೆಸಲಾಗುತ್ತಿದೆ.

ಬೆಂಗಳೂರಿನ ಬನ್ನಪ್ಪ ಪಾರ್ಕ್ ಬಳಿ ಶಿಕ್ಷಕರ ಪ್ರತಿಭಟನೆ



ಪಶ್ಚಿಮ ಬಂಗಾಳದಲ್ಲಿ ಐಲಾ ಚಂಡಮಾರುತ ಸೃಷ್ಟಿಸಿದ ಅನಾಹುತ ಭೀಕರವಾದದ್ದು. ಅಲ್ಲಿನ ಎಡರಂಗ ಸರ್ಕಾರ ಸಂತ್ರಸ್ತ ಜನತೆಯ ನೆರವಿಗೆ ತನ್ನ ಶಕ್ತಿ ಮೀರಿ ಶ್ರಮಿಸುತ್ತಿದೆ. ಆದರೆ ಪರಿಹಾರ ನೀಡಿಕೆಯಲ್ಲಿ ಕೇಂದ್ರ ಸರ್ಕಾರದ ತಾತ್ಸಾರ, ಪರಿಹಾರ ನೀಡಿಕೆಗೆ ತೃಣಮೂಲದ ಅಡ್ಡಿ, ಎಡರಂಗದ ಬಗೆಗೆ ಅಪಪ್ರಚಾರ... ಏನಿದು!?

ಚಂಡಮಾರುತ ಹಾನಿ

ಪರಿಹಾರಕ್ಕೆ ಧುಮುಕಿರುವ ಎಡರಂಗವೂ ತೃಣಮೂಲದ ಧೂರ್ತ ರಾಜಕಾರಣವೂ

ಮುಂಗಾರು ಮಳೆ ಅಂದಾಜಿಗಿಂತಲೂ ಒಂದು ವಾರ ಮೊದಲೇ ಆರಂಭವಾಗಲಿದೆ ಯೆಂದು ಹವಾಮಾನತಜ್ಞರು ಹೇಳಿದಾಗ ನಮ್ಮ ಕೃಷಿಕರ ಚಟುವಟಿಕೆಗಳು ಇಮ್ಮಡಿಗೊಂಡವು. ಅದರಂತೆಯೇ ಕೇರಳದ ಕಡಲ ತಡಿಗಳಲ್ಲಿ ರಾಜ್ಯದ ಒಳನಾಡಿನಲ್ಲಿ ಮಳೆ ಆರಂಭವಾಗಿ ಕರ್ನಾಟಕದ ಕಡಲ ತೀರ ಸೇರಿಕೊಂಡಾಗ ಖುಷಿಯೇ ಖುಷಿ. ಆ ಮುಂಗಾರು ಬರುವಿನ ಸೂಚನೆಯಾಗಿ ರಾಜ್ಯದ ಹಲವು ಜಿಲ್ಲೆಗಳಲ್ಲಿಯೂ ಮಳೆ ಸಿಂಚನವಾದಾಗ ಧೋ ಎಂದು ಸುರಿದಾಗ ಎತ್ತುಗಳ ಹೆಗಲ ತೊಳೆದು ಬಿತ್ತನೆ, ಬೀಜ, ಗೊಬ್ಬರ ಹಿಡಿದು ನಿಂತವರು ಅನೇಕ. ಇನ್ನೇನು ಮಳೆರಾಯ ಬಂದೇಬಿಟ್ಟ ಎಂದಲ್ಲಿ ಹಲವು ಕನಸುಗಳ ಬಿತ್ತನೆ.... ಹುಯ್ಯೋ, ಹುಯ್ಯೋ ಮಳೆರಾಯನಿಗೆ ಜೀವ-ಜನ ಕಾತುರ ಆದರೆ....?!

● ಇನ್ನೇನು ಮುಂಗಾರು ಭರ್ಜರಿ ಬಂದೇಬಿಟ್ಟಿತು ಎನ್ನುವಾಗ ಕೇರಳದಲ್ಲಿ ಅದು ದುರ್ಬಲವಾಯಿತೆಂಬ ವರದಿಗಳು! ಕಾರಣ... ಬಂಗಾಳದ ಕೊಲ್ಲಿಯಲ್ಲಿ ಬೀಸಿದ, ಪಶ್ಚಿಮ ಬಂಗಾಳವನ್ನು ಅಪ್ಪಳಿಸಿದ 'ಐಲಾ' ಎಂದ ಚಂಡಮಾತುರದ ರುದ್ರ ನರ್ತನವು ಕೇರಳದ ಕರ್ನಾಟಕದ ಮುಂಗಾರಿನ ಕೊರಳನ್ನೇ ಹಿಸುಕಿತು.. ಪುನಃ ಸನ್ನದ್ಧ ಸ್ವರೂಪಕ್ಕೆ ಅಲ್ಪ ಕಾಲ ಕಾಯಲೇಬೇಕು... ಅಂದರೆ ಐಲಾದ ಹುಚ್ಚು ಕುಣಿತ ನಿಲ್ಲಲೇಬೇಕು.

● ಇದೀಗ ಅದು ನಿಂತ ಸುದ್ದಿ... ಇಲ್ಲಿ. ಆದರೆ ಅಲ್ಲಿ... ಬಂಗಾಳದಲ್ಲಿ... 'ಐಲಾ' ಚಂಡ ಮಾರುತ ಉಂಟುಮಾಡಿರುವ ಅನಾಹುತ, ಅಪಾರ. ನೂರಾರು ಜೀವಗಳ ಬಲಿ, ಹೊಲಗದ್ದೆಗಳು, ದನಕರುಗಳು, ಮನೆ, ಆಸ್ತಿಪಾಸ್ತಿಯ ಸರ್ವನಾಶ.. ಅನ್ನ, ಆಹಾರಗಳಿಲ್ಲದೆ, ಕುಡಿಯುವ ನೀರು ಸಿಗದೇ ಹಗಲು, ರಾತ್ರಿಗಳ ಅಂಧಕಾರದಲ್ಲಿ ನಡು ನೀರಿನಲ್ಲೇ ಜೀವ ಹಿಡಿದು ನಿಂತ ಜನ.

ಸರ್ವಸಾಧಾರಣವಾಗಿ ಬಂಗಾಳಕೊಲ್ಲಿ ಯಲ್ಲಿ ಹಾಗೆ ಸಾಗಿಬರುವ ಚಂಡಮಾರುತ ಬಾಂಗ್ಲಾದೇಶದತ್ತ ಬಲಕ್ಕೆ ತಿರುಗುವುದು ವಾಡಿಕೆ. ಆದರೀಗ 'ಐಲಾ' ಎಡಕ್ಕೆ ತಿರುಗಿತು. ಬಂಗಾಳದ ಕಡಲಿನ ದಕ್ಷಿಣ - ನಂತರ ಉತ್ತರಕ್ಕೆ ಸಾಗಿತು. ತನ್ನ ನಾಲಿಗೆಗೆ ಸಿಕ್ಕದ್ದನ್ನು ಸಿಕ್ಕಿ ನಿರ್ಮೂಲಗೊಳಿಸಿತು. ಮಳೆಯಾಗಿ ಸುರಿದು ಒಳನುಗ್ಗಿದ ಅದರ ಕಾಲ್ತುಳಿತಕ್ಕೆ ಹಲವು ಜಿಲ್ಲೆಗಳು ಅನಾಹುತಕ್ಕೀಡಾದವು. ಮೇ 25 ಮತ್ತು 26 ಪಶ್ಚಿಮ ಬಂಗಾಳದ ಜನತೆಯ ಪಾಲಿಗೆ ಕರಾಳ ದಿನಗಳು.. ಆ ಬಳಿಕವೂ. ಬಂಗಾಳ ಇಂತಹ ಹಲವು ನೈಸರ್ಗಿಕ ಪ್ರಕೋಪಗಳನ್ನು ಕಂಡಿದೆ, ಎದುರಿಸಿದೆ. 1978 ರಲ್ಲಿನ ವಿಧ್ವಂಸಕಾರಿ ಪ್ರವಾಹ, 1980 ರ ಮತ್ತು 1990ರ ದಶಕದ ಆರಂಭದಲ್ಲಿನ ನೈಸರ್ಗಿಕ ಪ್ರಕೋಪಗಳನ್ನು ಜನ ನೆನಪಿಸಿಕೊಳ್ಳುತ್ತಾರೆ. ಆದರೀಗ ಐಲಾ ಮತ್ತೊಂದು ಘೋರ ಸನ್ನಿವೇಶ-ಸವಾಲನ್ನು ಸೃಷ್ಟಿಸಿದೆ.

● ಈಗ ದೊರೆತ ವರದಿಗಳಂತೆ (ಜೂನ್ 3) 130 ಜನ ಮಹಿಳೆಯರು, ಮಕ್ಕಳು, ಪುರುಷರು ಸಾವಿಗೀಡಾಗಿದ್ದಾರೆ. ಡಾರ್ಜಿಲಿಂಗ್‌ನಂತಹ ಗುಡ್ಡಗಾಡು ಪ್ರದೇಶದಲ್ಲಿ ಹಲವರು ಕಾಣೆಯಾಗಿದ್ದಾರೆ. 70 ಲಕ್ಷದಷ್ಟು ಜನ ಐಲಾ ಹೊಡೆದ ಮೊದಲ ಏಟಿಗೇ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿ ನೀರ ನಡುವೆ ನಿಂತಿದ್ದಾರೆ. ಅವರಿಗೆ ಮನೆಯಿಲ್ಲದೆ, ಆಹಾರ, ನೀರಿಲ್ಲದೆ, ಸಂಪರ್ಕ ಸಾಧನ, ಸಾಧ್ಯತೆಗಳೇ ಇಲ್ಲದೇ ನಲುಗಿದ್ದಾರೆ. ಮರಗಳು ಉರುಳಿವೆ. ವಿದ್ಯುತ್ ಕಂಬಗಳು ನೆಲಕಚ್ಚಿವೆ. ವಿದ್ಯುತ್ ಕಡಿತವಾಗಿವೆ. ಸಾಂಕ್ರಾಮಿಕ ರೋಗಗಳು ಹಬ್ಬುವ ಸಾಧ್ಯತೆಗಳು ಅಪಾರ, ಕೊಚ್ಚಿ ಹೋದ ರಸ್ತೆಗಳು ಮುರಿದುಬಿದ್ದ ಸೇತುವೆಗಳು ನೆರವಿನ ಹಸ್ತ ಚಾಚಲು, ಹುಲುಕಡ್ಡಿ ಹಿಡಿದು ಗಟ್ಟಿನೆಲ ತಲುಪಲು ಅಸಾಧ್ಯತೆ ಸೃಷ್ಟಿಸಿವೆ.

ಪರಿಹಾರ ಕಾರ್ಯದ ಧಾವಂತ

ಆದರೆ... ಈ ಘೋರ ಸನ್ನಿವೇಶ ಎದುರಾಗುತ್ತಿರುವಾಗಲೇ ಎಡರಂಗ ಸರ್ಕಾರದ ಆಡಳಿತ ಯಂತ್ರ, ಜನತೆಯ ಅಪಾರ ನೆರವಿನೊಂದಿಗೆ ಜನರ ರಕ್ಷಣೆಯತ್ತ, ಪರಿಹಾರ ಕಾರ್ಯಗಳೊಂದಿಗೆ ಚಂಡಮಾರುತ ಅಪ್ಪಳಿಸಿದ ಕೆಲವು ಗಂಟೆಗಳಲ್ಲೇ ಧಾವಿಸಿದೆ. ಪೀಡಿತ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲೇ ನೂರಕ್ಕೂ ಹೆಚ್ಚು ಪರಿಹಾರ ಶಿಬಿರಗಳು ನಿರ್ಮಾಣಗೊಂಡು ಕಾರ್ಯ ಆರಂಭಿಸಿವೆ. ಅದು ಮುಂದುವರಿದು 700 ದೊಡ್ಡ ಪರಿಹಾರ ಕೇಂದ್ರಗಳು, ಹಲವು ಸಾವಿರ ಚಿಕ್ಕ ಶಿಬಿರಗಳು ಜನರ ನೆರವಿಗೆ ತೊಡಗಿವೆ. ಎಡರಂಗ ಸರ್ಕಾರ 30 ಲಕ್ಷ ಲೀಟರ್ ಕುಡಿಯುವ ನೀರನ್ನು ಪ್ಲಾಸ್ಟಿಕ್ ಚೀಲಗಳ ಮೂಲಕ



ವಿತರಿಸಿದೆ. ಸಂಪರ್ಕ ಸಾಧಿಸುವ ಪ್ರದೇಶಗಳಿಗೆ ಕ್ಯಾನ್‌ಗಳ ಮೂಲಕ ಕೊಟ್ಟಿದೆ. 3400 ಮೆಟ್ರಿಕ್ ಟನ್ ಒಣ ಆಹಾರವನ್ನು ವಿಮಾನಗಳ ಮೂಲಕ ಹಾಕಲಾಗಿದೆ. ಅಷ್ಟೇ ಪ್ರಮಾಣದ ಅಕ್ಕಿಯನ್ನು ಹಂಚಲಾಗಿದೆ. ಸಾವಿರಾರು ತಾಡಪಾಲು, ಪ್ಲಾಸ್ಟಿಕ್ ಹಾಳೆ ವಿತರಿಸಲಾಗಿದೆ. ತಾತ್ಕಾಲಿಕ ಗೋಡೌನ್‌ಗಳ ಮೂಲಕ ದಾಸ್ತಾನು ಮಾಡಿ ಪ್ರದೇಶಗಳಿಗೆ ಕಳುಹಿಸಲಾಗುತ್ತಿದೆ. ಹಾಗೆಯೇ ಹಲವು ದಶಲಕ್ಷದಷ್ಟು 'ಹಾಲಾಜೋನ್' ಗುಳಿಗೆಗಳನ್ನು ಹಂಚಲಾಗಿದ್ದು ಕುಡಿವ ನೀರಿನ ಸುರಕ್ಷತೆಗೆ ಇದನ್ನು ಬಳಸಲಾಗಿದೆ. ಹೀಗಾಗಿಯೇ ಕುಡಿವ ನೀರಿನಿಂದ ಉದ್ಭವಿಸುವ ಯಾವುದೇ ರೋಗದ ಒಂದು ಪ್ರಕರಣವೂ ದಾಖಲಾಗಿಲ್ಲ. ಅಲ್ಲದೇ ಮೂರು ಲಕ್ಷಕ್ಕೂ ಮೀರಿ ದೋತಿ, ಸೀರೆ, ಲುಂಗಿ ಹಂಚಲಾಗಿದೆ. ಅದರಂತೆಯೇ ಸರ್ಕಾರದ 'ಆಡಳಿತ ಯಂತ್ರ', ಜನತೆ, ಪಂಚಾಯತ್‌ಗಳು, ಹಗಲು ರಾತ್ರಿ ಪರಿಹಾರದ ಕಾರ್ಯದಲ್ಲಿ ಸಮರೋಪಾದಿಯಲ್ಲಿ ತೊಡಗಿವೆ. ಜನರನ್ನು ಸಂರಕ್ಷಿಸಿ ಸುರಕ್ಷಿತ ತಾಣಗಳಿಗೆ ಕರೆದೊಯ್ಯುತ್ತಿವೆ. ನೀರಿನ ಪ್ರಮಾಣ ತಗ್ಗಿರುವಲ್ಲಿ ಮನೆ ನಿರ್ಮಾಣ ಇತ್ಯಾದಿ ಕಾರ್ಯ ನಡೆದಿವೆ. ಅಂದರೆ ವಿದ್ಯುತ್, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ನಗರಾಭಿವೃದ್ಧಿ, ಸಾರ್ವಜನಿಕ ನಿರ್ಮಾಣದಂತಹ ಇಲಾಖೆಗಳು ಅದರಲ್ಲಿ ಇಂಜನಿಯರ್‌ಗಳು, ವೈದ್ಯರು, ತಂತ್ರಜ್ಞರು, ನಿರ್ಮಾಣ ಕಾರ್ಮಿಕರು ದಿನವಿಡೀ ಶ್ರಮಿಸುತ್ತಿದ್ದಾರೆ.

ಬಹಳ ಮುಖ್ಯವಾಗಿ ಈ ಪರಿಹಾರಕಾರ್ಯಕ್ಕೆ ಸಮರೋಪಾಧಿಯಲ್ಲಿ ತೊಡಗಲು ಮುಂಚೂಣಿಯ ಪಾತ್ರ ವಹಿಸಿರುವುದು ಎಡರಂಗ. ಎಲ್ಲಾ ಅಂಗಪಕ್ಷಗಳು, ಸಾಮೂಹಿಕ ಸಂಘಟನೆಗಳು ಅವುಗಳ ಕಾರ್ಯಕರ್ತರು ತಂಡಗಳಾಗಿ ಕಾರ್ಯಕ್ಕಿಳಿದಿದ್ದಾರೆ. ಸ್ವತ: ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ, ಹಣಕಾಸು ಸಚಿವ ಪ್ರೊ.ಅಶಿಂದಾಸ್ ಗುಪ್ತಾ ಮತ್ತಿತರರು ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಸ್ಥಳದಲ್ಲಿ ಅಂದಾಜು ಮಾಡುತ್ತಾ, ಪರಿಹಾರದ ಕಾರ್ಯಗಳನ್ನು ನಿರ್ದೇಶಿಸಿದ್ದಾರೆ. 24 ಪರಗಣ, ಮಿಡ್ನಾಪುರ ಪೂರ್ವ, ಸಿಲಿಗುರಿ, ಡಾರ್ಜಿಲಿಂಗ್ ಮುಂತಾದೆಡೆ ಭೇಟಿ ನೀಡಲಾಗಿದೆ. ಹಾನಿಯ ಅಂದಾಜು ನಡೆದಿದೆ. ಎಡರಂಗ ಸರ್ಕಾರ ತನ್ನ ಸೀಮಿತ ಸಂಪನ್ಮೂಲಗಳಿದ್ದರೂ ಶಕ್ತಿಮೀರಿ ಇಷ್ಟೆಲ್ಲಾ ಕಾರ್ಯಗಳನ್ನು ನಡೆಸಿದೆ. ಸರ್ಕಾರದ ಬೊಕ್ಕಸವಲ್ಲದೇ ಪ್ರಮುಖವಾಗಿ ಜನತೆಯ ನೆರವನ್ನೂ ಕೋರಿದೆ. ಅದರಂತೆ ಮೇ 28 ರಂದು ರಾಜ್ಯದಾದ್ಯಂತ ನಿಧಿ, ಆಹಾರ ವಸ್ತುಗಳು, ಬಟ್ಟೆ ಇತ್ಯಾದಿ ಸಾಮಗ್ರಿಗಳ ಸಂಗ್ರಹಕ್ಕೆ ಎಡರಂಗ ಕರೆ ನೀಡಿದ್ದು, ಅಂದು ಬೀದಿ ಬೀದಿಗಳಿದು ಕಾರ್ಯಕರ್ತರು ಸಂಗ್ರಹಿಸಿದರು ಜನತೆಯೂ ಉದಾರವಾಗಿ ಸಹಾಯ ನೀಡುತ್ತಾ ಮಾನವೀಯತೆ ಮೆರೆದಿದ್ದಾರೆ. ಸ್ವತಃ ಎಡರಂಗ ಸಂಚಾಲಕ ಸಿಪಿಐ(ಎಂ) ಬಿಮನ್ ಬಸು ಕಲ್ಕತ್ತಾದಲ್ಲಿ ನೇತೃತ್ವ ವಹಿಸಿದ್ದರು. ಸಿಪಿಐ(ಎಂ) ಹಾಗೂ ಎಡ ಪಕ್ಷಗಳ ಎಲ್ಲಾ ಘಟಕಗಳು ಕ್ರಿಯಾಶೀಲವಾಗಿ ತೊಡಗಿವೆ. ಇಂತಹ ಬೃಹತ್ ಜನಸಮುದಾಯದ ನೆರವಿನ ಕಾರ್ಯ ನಡೆದೇ ಇದೆ.

ಉರಿವ ಮನೆಯಲ್ಲಿ...

ಇಷ್ಟೆಲ್ಲಾ ಪ್ರಯತ್ನಗಳಿದ್ದರೂ ಸಂಭವಿಸಿರುವ ಹಾನಿಗೆ ಹೋಲಿಸಿದರೆ ಅದು ಸಾಲದು. ಅದಕ್ಕಾಗಿ ಕೇಂದ್ರ ಸರ್ಕಾರದ ನೆರವು ಅತೀ ಅವಶ್ಯಕ. ನೈಸರ್ಗಿಕ ವಿಕೋಪಗಳ ಹಾನಿಗೆಂದೇ ಕೇಂದ್ರ ನೆರವು ನೀಡಲು ನಿಧಿಯಲ್ಲೂ ಇದೆ. 'ಐಲಾ' ಚಂಡಮಾರುತ ತಂದಿರುವ ಹಾನಿಯನ್ನು 'ರಾಷ್ಟ್ರೀಯ ವಿಪತ್ತು' ಎಂದು ಪರಿಗಣಿಸಬೇಕು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕನಿಷ್ಟ 1000 ಕೋಟಿ ರೂಪಾಯಿಗಳನ್ನಾದರೂ ತಕ್ಷಣ ಬಿಡುಗಡೆ ಮಾಡಬೇಕೆಂದು ಆಗ್ರಹಿಸಲಾಗಿದೆ. ಇದು 12ನೇ ಹಣಕಾಸು ಆಯೋಗದ ಸೂಚನೆಗೆ ಅನುಗುಣವಾಗಿದೆ. ಆದರೆ ಕೇಂದ್ರ ಸರ್ಕಾರ ಇದರತ್ತ ಅಷ್ಟಾಗಿ ಗಮನ ನೀಡುತ್ತಿಲ್ಲ. ಅಧಿಕಾರದ ಅನುಭವಿಸುವಿಕೆಯಲ್ಲಿ ಮಗ್ನವಾಗಿದೆ.

ಮಾತ್ರವಲ್ಲ ಇಂತಹ ಹಣವನ್ನು ಬಿಡುಗಡೆ ಮಾಡಲು ಕೇಂದ್ರದ ರೈಲ್ವೆ ಸಚಿವೆ, ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ತೀವ್ರ ಅಡ್ಡಿಯುಂಟು ಮಾಡುತ್ತಿದ್ದಾರೆ. ಹಣವನ್ನು ರಾಜ್ಯ ಸರ್ಕಾರದ ಮೂಲಕ ನೀಡಬಾರದೆಂದೂ, ನೇರವಾಗಿ ಜಿಲ್ಲಾಧಿಕಾರಿಗಳಿಗೆ ನೀಡಬೇಕೆಂದು ಫರ್ಮಾನು ಹೊರಡಿಸುತ್ತಿದ್ದಾರೆ. ಒಂದು ಚುನಾಯಿತ ಜನಪ್ರತಿನಿಧಿ ಸರ್ಕಾರ ರಾಜ್ಯದಲ್ಲಿ ಇದ್ದು ಅದನ್ನು ನಿರ್ಲಕ್ಷಿಸಿ ಜಿಲ್ಲಾಡಳಿತದೊಂದಿಗೆ ಕೇಂದ್ರ ವ್ಯವಹರಿಸುವುದು ಒಕ್ಕೂಟದ ವ್ಯವಸ್ಥೆಗೆ ಮಾರಕವಾದುದು. ಹಿಂದಿನ ಕಾಂಗ್ರೆಸ್ ಪಕ್ಷದ ದಿವಂಗತ ಪ್ರಧಾನಿಯೊಬ್ಬರ ಹೇಳಿಕೆಯಂತೆ ಪಿ.ಎಂ. ನಿಂದ ಡಿ.ಎಂ.ಗೆ ಎನ್ನುವ ನೀತಿಯನ್ನೇ ಧ್ವನಿಸುತ್ತದೆ. ಮುಖ್ಯವಾಗಿ ಇಡೀ ರಾಜ್ಯದ ಜನತೆ ತೀವ್ರ ಸಂಕಷ್ಟದಲ್ಲಿ ಇರುವಾಗ ಕೇಂದ್ರ ನೆರವು ನೀಡದೇ ರಾಜ್ಯದ ಮೇಲೆ ಪೂರ್ಣ ಹೊರೆಸಿ, ಜನರಿಗೆ ದ್ರೋಹವೆಸಗುವ ರಾಜಕಾರಣವೇ ಮಮತಾ ಬ್ಯಾನರ್ಜಿಯವರ ಕ್ರಮಗಳಲ್ಲಿದೆ.

"ಇದು ಭಾರೀ ಪ್ರಕೋಪ. ಇಂತಹ ಸ್ಥಿತಿಯಲ್ಲಿ ಪಕ್ಷಬೇಧ ಮರೆತು ಎಲ್ಲಾ ಪಕ್ಷಗಳೂ, ಸಂಘಟನೆಗಳು ಜನತೆಯ ನೆರವಿಗೆ ಧುಮುಕಬೇಕು" ಎಂದು ಮುಖ್ಯಮಂತ್ರಿಗಳು ಹಾಗೂ ಎಡರಂಗ ಮನವಿ ಮಾಡಿದೆ. ಆದರೆ ತೃಣಮೂಲ ಕಾಂಗ್ರೆಸ್ ಘಟಕಗಳು. ಅದರ ನೇತೃತ್ವದ ಪಂಚಾಯತ್‌ಗಳ ಯಾವುದೇ ಪರಿಹಾರ ಕಾರ್ಯಕ್ಕೆ ಇಳಿದಿಲ್ಲ ಮಾತ್ರವಲ್ಲ ಪರಿಹಾರ ಕಾರ್ಯಕ್ಕೆ ಅಡ್ಡಿಯನ್ನೇ ಉಂಟು ಮಾಡುತ್ತಿವೆ. ಇದು ದಕ್ಷಿಣ 24 ಪರಗಣ, ಮಿಡ್ನಾಪುರಗಳಲ್ಲಂತೂ ಎದ್ದುಕಾಣುತ್ತಿದೆ. ಅದೇ ತೃಣಮೂಲದ ಜನದ್ರೋಹಕ್ಕೆ ಒಂದು ಜ್ವಲಂತ ಉದಾಹರಣೆ. ತೃಣಮೂಲ ಕಾಂಗ್ರೆಸ್ ಹಾಗೂ ಕೇಂದ್ರ ಸರ್ಕಾರದ ಎಡರಂಗ ವಿರೋಧಿ, ಜನದ್ರೋಹಿತನಗಳನ್ನು ಕೆಲವು ಪತ್ರಿಕೆ, ಟಿ.ವಿ. ಮಾಧ್ಯಮಗಳು ವಿಜೃಂಭಿಸಿ ಪ್ರಸಾರಿಸುತ್ತಿವೆ. ಬಂಗಾಳದಲ್ಲಿ ಪರಿಹಾರ ಕಾರ್ಯ ಕಿಂಚಿತ್ತೂ ಕೈಗೊಳ್ಳದೇ ಏನೂ ಆಗದವರಂತೆ ಮುಖ್ಯಮಂತ್ರಿ ಇದ್ದಾರೆ ಎಂದು ಕನ್ನಡ ಈ.ಟಿ.ವಿ ಚಾನೆಲ್ ಪ್ರಸಾರಿಸಿತು. ಅದು ಸೃಷ್ಟಿಸಿದ ಒಂದು ಕಥೆಯಲ್ಲಿ ಸಿಪಿಐ(ಎಂ)ನ ಶಾಸಕರಿಗೆ ಜನರು ಏಟು ಕೊಟ್ಟು ಹೊರದಬ್ಬಿದರು ಎಂದೂ ಹೇಳತೊಡಗಿತು. ಉರಿವ ಬೆಂಕಿಯಲ್ಲಿ ಗಳ ಇರಿಯುವುದು, ಆಳಿಗೊಂದು ಕಲ್ಲು ತೂರಿ ಸಂಕಷ್ಟದಲ್ಲಿರುವವರು ಯಾತನೆ ಅನುಭವಿಸುವುದನ್ನು ಕಂಡು ಖುಷಿ ಅನುಭವಿಸು... ಅಮಾನವೀಯತೆಗೆ, ರಾಜಕೀಯ ದ್ವೇಷಕ್ಕೆ ಮಿತಿಯುಂಟೇ?.

ಕೇಂದ್ರದ ಬಜೆಟ್ ಮಂಡನೆ ಸಿದ್ಧತೆಗಳು ನಡೆದಿವೆ. ದುಡಿಯುವ ವರ್ಗದ ದನಿ ಸಿಐಟಿಯು ಬಜೆಟ್ ಹೇಗಿರಬೇಕು, ಬಜೆಟ್‌ನಲ್ಲಿ ಏನಾಗಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚನೆ ಸಲ್ಲಿಸಿ ಒತ್ತಾಯಿಸಿದೆ.

ಕೇಂದ್ರ ಬಜೆಟ್ ಎಂತಿರಬೇಕು?

...ಲಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳು ...ವ್ರಗೊಳ್ಳುತ್ತಾ ನಡೆದಿದೆ. ಕೈಗಾರಿಕೆಗಳ ಮುಚ್ಚುವಿಕೆ, ...ದ್ಯೋಗಕಡಿತ, ಲೇ ಆಫ್ (ಉತ್ಪಾದನೆ ಸ್ಥಗಿತ) ...ತ್ಯಾದಿಗಳು ದಿನೇ ದಿನೇ ಹೆಚ್ಚುತ್ತಾ ನಡೆದಿದೆ. ಒಂದು ...ಾಜಿನಂತೆ ಸೆಪ್ಟೆಂಬರ್ 2008 ರಿಂದೀಚೆಗೆ ...ಶದಲ್ಲಿ 15 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಉದ್ಯೋಗ ...ದುಕೊಂಡಿದ್ದಾರೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ...ಂದ್ರ ಯುಪಿಎ ಸರ್ಕಾರವು ತನ್ನ ಬಜೆಟ್ ...ಯಾರಿಯಲ್ಲಿ ತೊಡಗಿದೆ.

2009 ರ ಲೋಕಸಭಾ ಚುನಾವಣಾ ...ಲಿತಾಂಶದ ನಂತರ ಸರ್ಕಾರದ ನೀತಿ ನಿರ್ಧಾರಗಳ ...ೇಲೆ ಬಂಡವಾಳಿಗರ, ಉದ್ಯಮಪತಿಗಳ ಹಿಡಿತ ...ತ್ತಷ್ಟು ಹೆಚ್ಚಾಗಿದೆ. ಬಂಡವಾಳಗಾರರು ಈಗಾಗಲೇ ...ಮಗೇನು ಬೇಕು ಎಂಬುದರ ಕುರಿತು ಸರ್ಕಾರಕ್ಕೆ ...ಗ್ರಹ ಮಾಡತೊಡಗಿದ್ದಾರೆ. ...ಂಡವಾಳಶಾಹಿ ಪಕ್ಷಗಳಿಗೆ ಮತ್ತು ...ರ್ಕಾರಗಳು ಉದ್ದಿಮೆ, ಕೈಗಾರಿಕೆ ಎಂದು ...ಾತನಾಡುವಾಗ ಮುಖ್ಯವಾಗಿ ಅವರ ...ಮನದಲ್ಲಿರುವುದು ಬಂಡವಾಳಿಗರ ...ಮೆದಾರರು ಆತಂಕಗಳು, ಅವರ ...ಗಳು,

ಈ ಉದ್ದಿಮೆ, ಕಾರ್ಖಾನೆಗಳಲ್ಲಿ ...ುಡಿಯುವ ಸಂಪತ್ತು ಉತ್ಪಾದಿಸುವ ...ಾರ್ಮಿಕರ, ದುಡಿಯುವ ವರ್ಗದ, ...ಂಕಷ್ಟಗಳು ಅವರ ಪಾಲಿಗೆ ನಗಣ್ಯ. ...ರಿಹಾರ, ಪ್ಯಾಕೇಜು, ರಿಯಾಯಿತಿ, ...ನಾಯಿತಿಗಳೆಲ್ಲಾ ಮಾಲೀಕರ ...ಾಯಿಗೆ. ಹಸಿದು ಕಂಗೆಟ್ಟ, ಉದ್ಯೋಗ ...ಳೆದುಕೊಂಡು ಬೀದಿಪಾಲಾದ ಕಾರ್ಮಿಕರಿಗೆ ಏನು ...ರಿಹಾರವೆಂಬ ಬಗ್ಗೆ ಏನೊಂದು ಕೇಳಿಬರದ ಸದ್ದು.

ಆದರೆ ಕಾರ್ಮಿಕ ವರ್ಗದ ದನಿಯಾದ ಸಿಐಟಿಯು ಸಂಘಟನೆಯು ಮುಂಬರುವ ಬಜೆಟ್ ಹೇಗಿರಬೇಕು. ಕಾರ್ಮಿಕರ ಮತ್ತು ಒಟ್ಟು ದೇಶದ ಜನ ಸಾಮಾನ್ಯರ ದೃಷ್ಟಿಯಿಂದ ಬಜೆಟ್ ಏನೆಲ್ಲಾ ಒಳಗೊಂಡಿರಬೇಕೆಂಬ ಬಗ್ಗೆ ಕೇಂದ್ರದ ಹಣಕಾಸು ಸಚಿವರೊಂದಿಗೆ ಬಜೆಟ್ ಪೂರ್ವ ಚರ್ಚೆ ನಡೆಸಿ,



ತನ್ನ ಬೇಡಿಕೆಗಳನ್ನು ಸಲ್ಲಿಸಿದೆ.

ಸಲ್ಲಿಸಲಾದ ಬೇಡಿಕೆಗಳ ಸಾರ ಇಂತಿದೆ. ದೇಶದ ಶ್ರೀಮಂತ ವಿಭಾಗಗಳಿಗೆ ದೊರಕುತ್ತಿರುವ ವಿನಾಯತಿಗಳಿಂದಾಗಿ ಸಮಾಜದಲ್ಲಿ ಆರ್ಥಿಕ ಅಸಮಾನತೆ ತೀವ್ರಗೊಳ್ಳುತ್ತಿದೆ. ದೇಶದ 48 ಜನ ಡಾಲರ್ ದಶಕೋಟ್ಯಾಧಿಪತಿಗಳು (ಮಿಲಿಯನ್ ಡಾಲರ್ ಅಧಿಪತಿಗಳು) ದೇಶದ 4ನೇ ಒಂದರಷ್ಟು ಆದಾಯವನ್ನು ಗಳಿಸುತ್ತಿದ್ದಾರೆ. ಆದರೆ ಅದೇ ಸಮಯದಲ್ಲಿ ದೇಶದ ಶೇ.77 ರಷ್ಟು ಜನತೆ ದಿನಕ್ಕೆ ಕೇವಲ ಇಪ್ಪತ್ತು ರೂಪಾಯಿ ಆದಾಯದಲ್ಲಿ ಜೀವನ ಸವೆಸುತ್ತಿದ್ದಾರೆ. ರೈತರು ಹಾಗೂ ಕೆಲಸ ಕಳೆದುಕೊಂಡ ಎಷ್ಟೋ ಜನ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಜಗತ್ತಿನ ಎರಡನೇ ಅತಿ ವೇಗದ ಬೆಳವಣಿಗೆಯ ಆರ್ಥಿಕತೆ ಎಂದು ಹೇಳಲಾಗಿರುವ ಭಾರತದ ಆರ್ಥಿಕ ಬೆಳವಣಿಗೆಯ ಸಾಮಾನ್ಯ ಜನರಿಗೆ ತಲುಪಿಲ್ಲ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಕ್ರಮಗಳು ಅಗತ್ಯವಾಗಿದೆ.

- ಆಹಾರಧಾನ್ಯ ಮತ್ತು ಇತರ ಅವಶ್ಯಕ ವಸ್ತುಗಳ ಬೆಲೆ ಏರಿಕೆ ತಡೆಗೆ ಕ್ರಮವಹಿಸಬೇಕು. ರೇಷನ್ ಕಾರ್ಡುಗಳ ಮೂಲಕ ಅಕ್ಕಿ, ಗೋಧಿ, ಸಕ್ಕರೆ, ಎಣ್ಣೆ ಇತ್ಯಾದಿ ಆಹಾರಧಾನ್ಯ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸಬೇಕು.
- ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಿ ತೆರಿಗೆ ಪದ್ಧತಿಯನ್ನು ತರ್ಕಬದ್ಧಗೊಳಿಸಬೇಕು.
- ಸರ್ಕಾರವು ತನ್ನ ಆದಾಯದ ಕನಿಷ್ಟ ಶೇ.25 ರಷ್ಟು ಭಾಗವನ್ನಾದರೂ ಶಿಕ್ಷಣ, ಆರೋಗ್ಯ, ಮನೆ ನಿರ್ಮಾಣ ಮುಂತಾದ ಸಾಮಾಜಿಕ ಕ್ಷೇತ್ರದಲ್ಲಿ ವೆಚ್ಚ ಮಾಡಬೇಕು.
- ಸುಪ್ರಿಂಕೋರ್ಟ್ ನಿರ್ದೇಶನದಂತೆ ಅಂಗನವಾಡಿಗಳನ್ನು (ಐಸಿಡಿಎಸ್) ಯೋಜನೆ ವ್ಯಾಪಕಗೊಳಿಸಿ ಎಲ್ಲ ಅರ್ಹ ತಾಯಿ, ಮಕ್ಕಳಿಗೂ ಸೌಲಭ್ಯ ಸಿಗುವಂತಾಗಬೇಕು. ಈ ಉದ್ದೇಶಕ್ಕಾಗಿ ಕನಿಷ್ಟ 12,000 ಕೋಟಿ ರೂ.ಗಳನ್ನು ಮೀಸಲಿಡಬೇಕು. ಈ ಮೊತ್ತದಲ್ಲಿ 2,500 ಕೋಟಿಗಳನ್ನು ಅಂಗನವಾಡಿ ನೌಕರರ ಸ್ಥಿತಿಗತಿಯ ಸುಧಾರಣೆಗಾಗಿಯೇ ಮೀಸಲಿಡಬೇಕು.
- ಕೃಷಿ ಉತ್ಪನ್ನಗಳ ಖರೀದಿಗಾಗಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣವನ್ನು ತೊಡಗಿಸಬೇಕು. ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆಯನ್ನು ಖಾತ್ರಿಪಡಿಸಬೇಕು ರೈತರಿಂದ ಧಾನ್ಯ ಸಂಗ್ರಹ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿಸಬೇಕು.
- ವಿಶ್ವ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸಾರ್ವಜನಿಕ ಕೈಗಾರಿಕೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆಗಳಲ್ಲಿನ ನೇಮಕಾತಿಗಳ ಮೇಲೆ ವಿಧಿಸಲಾಗಿರುವ ನಿರ್ಬಂಧಗಳನ್ನು ರದ್ದು ಮಾಡಿ ಆ ಸ್ಥಾನಗಳಿಗೆ ಉದ್ಯೋಗಿಗಳನ್ನು ಭರ್ತಿ ಮಾಡಿಕೊಳ್ಳಬೇಕು.
- ಬಿಕ್ಕಟ್ಟಿನಲ್ಲಿರುವ ಸಾಂಪ್ರದಾಯಿಕ ಕೈಗಾರಿಕೆಗಳಾದ ಜವಳಿ, ಸೆಣಬು, ತೋಟ ಕಾರ್ಮಿಕರು, ನಾರು, ಬೀಡಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಪರಿಹಾರ ಕೊಡುಗೆ ದೊರೆಯಬೇಕು.
- ಸಾರ್ವಜನಿಕ ವಲಯದ ರಸಗೊಬ್ಬರ, ಕೇಬಲ್ ತಯಾರಿಕಾ ಕಾರ್ಖಾನೆ, ಎಚ್‌ಎಂಟಿ ಮುಂತಾದ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಕ್ರಮ ಕೈಗೊಳ್ಳಬೇಕು.
- ಕಾರ್ಮಿಕ ಭವಿಷ್ಯನಿಧಿ(ಪಿಎಫ್) ಪಿಂಚಣಿ ಹಣ ಖಾಸಗಿಯವರ ಕೈಗೆ ಹೋಗಬಾರದು. ಪಿಎಫ್ ನಿಧಿಗೆ ದೊರೆಯುವ ಬಡ್ಡಿಯನ್ನು ಕನಿಷ್ಠ ಶೇ.9.5ಕ್ಕೆ ಕಮ್ಮಿ ಇಲ್ಲದಂತೆ ಹೆಚ್ಚಿಸಬೇಕು. ಎಲ್ಲ ವೇತನದಾರರಿಗೂ ಭವಿಷ್ಯ ನಿಧಿ ಸಿಗುವಂತೆ ಇಪಿಎಫ್ ಸೌಲಭ್ಯವನ್ನು ವಿಸ್ತೃತಗೊಳಿಸಬೇಕು.
- ಆದಾಯ ತೆರಿಗೆಯ ವಿನಾಯಿತಿಗೆ ಮಿತಿಯನ್ನು ವರ್ಷಕ್ಕೆ 2 ಲಕ್ಷ ರೂ.ಗಳಿಗೆ ಏರಿಸಬೇಕು.

ಇವೆಲ್ಲಾ ಸಾಧ್ಯವಾಗಬೇಕಾದರೆ ಸರ್ಕಾರಕ್ಕೆ ಸಂಪನ್ಮೂಲಬೇಕು. ಸಂಪನ್ಮೂಲ ಸಂಗ್ರಹದ ಹೆಸರಿನಲ್ಲಿ ಮತ್ತೆ ಜನಸಾಮಾನ್ಯರನ್ನೇ ಹಿಂಡಬಾರದು. ಈ ನಿಟ್ಟಿನಲ್ಲಿ ಸಿಐಟಿಯು ಸಂಪನ್ಮೂಲ ಕ್ರೋಢೀಕರಣಕ್ಕೆ ನಿರ್ದಿಷ್ಟಸೂಚನೆಗಳನ್ನೂ ನೀಡುತ್ತಿದೆ(ಬಾಕ್ಸ್ ನೋಡಿ).

ಸಂಪನ್ಮೂಲ ಕ್ರೋಢಿಕರಣ

- ಬಜೆಟ್ ಕೊರತೆ ತುಂಬಿಕೊಳ್ಳುವ ಕಾರಣಕ್ಕಾಗಿ ಸಾರ್ವಜನಿಕ ವಲಯದ ಉದ್ದಿಮೆಗಳ ಬಂಡವಾಳವನ್ನು ಹಿಂತೆಗೆಯುವುದನ್ನು ಮಾಡಬಾರದು. ನವರತ್ನ ಉದ್ದಿಮೆಗಳು ಸೇರಿದಂತೆ ಕೇಂದ್ರದ ಸಾರ್ವಜನಿಕ ಉದ್ದಿಮೆಗಳಲ್ಲಿ ಸಂಗ್ರಹಗೊಂಡಿರುವ 4 ಲಕ್ಷ ಕೋಟಿ ರೂ.ಗಳಿಗೂ ಅಧಿಕವಾಗಿರುವ ಮಿಗುತಾಯ ನಿಧಿವನ್ನು ಬಳಸಿ ಸಾರ್ವಜನಿಕ ಉದಿದ್ದಮೆಗಳನ್ನು ವಿಸ್ತರಿಸಬೇಕು.
- ದೇಶದ ಒಳಗೂ ಹೊರಗೂ ಬಚ್ಚಿಡಲಾಗಿರುವ ಕಪ್ಪು ಹಣವನ್ನು ಪತ್ತೆ ಹಚ್ಚಲು ಬಿಗಿಯಾದ ಕ್ರಮ ವಹಿಸಬೇಕು.
- ಸಾರ್ವಜನಿಕ ಬ್ಯಾಂಕ್‌ಗಳು ಮತ್ತು ವಿಮಾ ಸಂಸ್ಥೆಗಳನ್ನು ಬಲಪಡಿಸಬೇಕು. ಈ ಸಂಸ್ಥೆಗಳ ಬಂಡವಾಳದಲ್ಲಿ ಸರ್ಕಾರದ ಪಾಲನ್ನು ಕಡಿತ ಮಾಡಬಾರದು ಮತ್ತು ಹಣಕಾಸು ರಂಗದ ಮೇಲೆ ಸರ್ಕಾರದ ಸಮರ್ಪಕ ನಿಯಂತ್ರಣವನ್ನು ಖಾತ್ರಿಪಡಿಸಬೇಕು.
- ಶ್ರೀಮಂತರು, ಉಳ್ಳವರಿಗೆ ತೆರಿಗೆ ವಿಧಿಸುವ ಮೂಲಕ ತೆರಿಗೆ ಜಾಲವನ್ನು ವಿಸ್ತರಿಸಬೇಕು ಮತ್ತು ತೆರಿಗೆ ಸಂಗ್ರಹವನ್ನು ಹೆಚ್ಚಿಸಬೇಕು.
- ದೊಡ್ಡ ಬಂಡವಾಳಿಗರ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪನಿಗಳು, ವಿಶೇಷ ಆರ್ಥಿಕ ವಲಯ(ಎಸ್‌ಸಿಜೆಡ್) ಗಳಿಗೆ ನೀಡುವ ವಿನಾಯಿತಿಗಳು ಮತ್ತು ಪ್ರೋತ್ಸಾಹಕಗಳಿಗೆ ತಡೆ ಹಾಕಬೇಕು.
- ಜೂಜುಕೋರ ಷೇರು ಬಂಡವಾಳಿಗರು ತಮ್ಮ ಲಾಭಗಳಿಕೆ ಮೇಲಿನ ತೆರಿಗೆ ತಪ್ಪಿಸುವುದನ್ನು ನಿವಾರಿಸಲು ಸೂಕ್ತ ಕಾನೂನು ತಿದ್ದುಪಡಿ ಮಾಡಬೇಕು.
- ಲಾಭದ ಉದ್ದೇಶದಿಂದ ನಡೆಸಲಾಗುತ್ತಿರುವ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಮತ್ತಿತರ ಸೇವಾ ವಲಯದ ಸಂಸ್ಥೆಗಳಿಗೆ ಸೇವಾ ತೆರಿಗೆ ವಿಧಿಸಬೇಕು.
- ದೊಡ್ಡ ಪ್ರಮಾಣದ ಆದಾಯದ ವಿಭಾಗದಲ್ಲಿ ಬರುವ ವ್ಯಕ್ತಿಗಳಿಗೂ ಹಾಗೂ ಬಂಡವಾಳಗಾರ ಸಂಸ್ಥೆಗೂ ವಿಧಿಸಲಾಗುವ ತೆರಿಗೆಯನ್ನು ಹೆಚ್ಚಿಸಬೇಕು.
- ಜನಸಂಖ್ಯೆಯ ಸಣ್ಣ ವಿಭಾಗವು ಭಾರಿ ಸಂಪತ್ತನ್ನು ತಮ್ಮಲ್ಲಿ ಪೇರಿಸಿಕೊಳ್ಳುವುದನ್ನು ನಿವಾರಿಸುವ ದೃಷ್ಟಿಯಿಂದ ಅಂತಹ ಸಂಪತ್ತಿಗೆ ಸಂಪತ್ತು ತೆರಿಗೆಯನ್ನು ವಿಧಿಸುವುದನ್ನು ಜಾರಿಗೆ ತರಬೇಕು.
- ಭಾರಿ ಪ್ರಮಾಣವನ್ನು ತಲುಪಿರುವ ತೆರಿಗೆ ಬಾಕಿ ವಸೂಲಿಗೆ ಗುರಿ ನಿಗದಿಪಡಿಸಿ ಕಾರ್ಯೋನ್ಮುಖವಾಗಬೇಕು. ದೊಡ್ಡ ಬಂಡವಾಳಗಾರರ ಬ್ಯಾಂಕ್ ಸಾಲದ ವಸೂಲಾತಿಗೆ ಸಹ ಇದೇ ಮುತುವರ್ಜಿ ವಹಿಸಬೇಕು.
- ದೀರ್ಘಾವಧಿಯ ಬಂಡವಾಳದ ಮೇಲಿನ ಲಾಭಕ್ಕೆ ತೆರಿಗೆಯನ್ನು ಜಾರಿಗೊಳಿಸಬೇಕು.
- ಆಮದು ಮಾಡಿಕೊಳ್ಳಲಾಗುವ ಹಾಗೂ ದೇಶೀಯವಾದ ಶ್ರೀಮಂತರ ಭೋಗ ವಸ್ತುಗಳ ಮೇಲೆ ತೆರಿಗೆ ಹೆಚ್ಚಿಸಬೇಕು.
- ವೈಭವೋಪೇತವಾದ ಮತ್ತು ದುಂದುಗಾರಿಕೆಯ ಸಾಮಾಜಿಕ ಕಾರ್ಯಕ್ರಮಗಳು ಮತ್ತು ಕೊಳ್ಳುಬಾಕತದಿಂದ ಕೂಡಿದ ಶ್ರೀಮಂತ ವಿಭಾಗಗಳ ಖರೀದಿ ಮೇಲೆ ತೆರಿಗೆಯನ್ನು ವಿಧಿಸಬೇಕು.
- ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು ಹಾಗೂ ಹೊರಗುತ್ತಿಗೆ ವಲಯವನ್ನು ತೆರಿಗೆ ಜಾಲದ ವ್ಯಾಪ್ತಿಗೆ ತಂದು ತೆರಿಗೆ ವಿಧಿಸಬೇಕು.

ಜಗದಗಲ

ಶರತ್‌ಚಂದ್ರ

ಆಸ್ಟ್ರೇಲಿಯಾದಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ದಾಳಿ ಬರಿಯ ಜನಾಂಗೀಯ ದ್ವೇಷವೇ ?

ಆಸ್ಟ್ರೇಲಿಯಾದಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ವ್ಯಾಪಕ ಹಿಂಸಾತ್ಮಕ ದಾಳಿ ಸಾಭಾವಿಕವಾಗಿಯೇ ರಾಷ್ಟ್ರೀಯ ಆಕ್ರೋಶಕ್ಕೆ ಎಡೆಕೊಟ್ಟಿದೆ. ಕಳೆದ ಒಂದು ವರ್ಷದಲ್ಲಿ 70ಕ್ಕೂ ಹೆಚ್ಚು ಹಿಂಸಾತ್ಮಕ ದಾಳಿ ನಡೆದಿದೆ, ಕಳೆದ ಕೆಲವು ದಿನಗಳಿಂದ ದಿನಾ ಒಂದು ಹಿಂಸಾತ್ಮಕ ದಾಳಿ ನಡೆಯುತ್ತಿದೆ. ಇದು ಗಂಭೀರ ವಿಷಯ ಎಂಬುದಕ್ಕೆ ಸಂಶಯವಿಲ್ಲ. ಆಸ್ಟ್ರೇಲಿಯಾ ಶಿಕ್ಷಣಕ್ಕೆ ವಿದೇಶೀ ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಶೇಷ ಪ್ರಯತ್ನ ಮಾಡಿದ್ದರಿಂದ ಭಾರತೀಯ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ಆಸ್ಟ್ರೇಲಿಯಾಕ್ಕೆ ಅಧ್ಯಯನಕ್ಕೆ ಹೋಗಿದ್ದರು. ಒಂದು ಲಕ್ಷಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಅಲ್ಲಿ ಶಿಕ್ಷಣ ಪಡೆಯುತ್ತಿದ್ದು , ಆ ದೇಶದ ಒಟ್ಟು ವಿದ್ಯಾರ್ಥಿಗಳ ಶೇ. 18 ಭಾಗ ಇದ್ದಾರೆ. ಆಸ್ಟ್ರೇಲಿಯಾದ ಒಟ್ಟು ಉತ್ಪನ್ನಕ್ಕೆ (ಜಿ,ಡಿ,ಪಿ,) ಒಂದು ಲಕ್ಷ ಕೋಟಿ ರೂ. ನಷ್ಟು ಕೊಡುಗೆ ನೀಡುತ್ತಿದ್ದಾರೆ.

ದೊಡ್ಡ ಪ್ರಮಾಣದ ವಲಸೆ ಜನಾಂಗೀಯ ದ್ವೇಷ ಮತ್ತು ಹಿಂಸಾತ್ಮಕ ದಾಳಿ ಘರ್ಷಣೆಗಳಿಗೆ ದಾರಿ ಮಾಡಿ ಕೊಡುವುದು ಹೊಸದೇನಲ್ಲ. ನಮ್ಮ ದೇಶದಲ್ಲೇ ಸ್ಥಳೀಯರು ಹೊರಗಿನವರು ಎಂಬ ಹೆಸರಿನಲ್ಲಿ ಇಂತಹ ಬೆಳವಣಿಗೆ ಕಂಡಿದ್ದೇವೆ. ಶಿವಸೇನಾ ಮುಂತಾದ ಸಂಘಟನೆಗಳು ಇದನ್ನೇ ಬಂಡವಾಳ ಮಾಡಿಕೊಂಡಿವೆ. ಆದರೆ ಬರಿಯ ಜನಾಂಗೀಯ ದ್ವೇಷ ಭುಗಿಲೆದ್ದದ್ದರ ಫಲ ಎಂಬುದರಿಂದ



ಆಸ್ಟ್ರೇಲಿಯಾದ ಈ ಭೀಕರ ಘಟನೆಗಳನ್ನು ಪೂರ್ತಿ ವಿವರಿಸಲು ಸಾಧ್ಯವಿಲ್ಲ. ಇದನ್ನು ಜಗತ್ತನ್ನು ಕಾಡುತ್ತಿರುವ ಆರ್ಥಿಕ ಕುಸಿತ ಮತ್ತು ತೀವ್ರ ಬಿಕ್ಕಟ್ಟಿನ ಹಿನ್ನಲೆಯಲ್ಲಿ ನೋಡಬೇಕು.

ಜನವರಿ 2008 ರಿಂದ ಜನವರಿ 2009 ರ ಅವಧಿಯಲ್ಲಿ ಆಸ್ಟ್ರೇಲಿಯಾದ ಜಿಡಿಪಿ ಏರಿಕೆ ದರ ಶೇ. 4.2 ರಿಂದ 0.3 ಕ್ಕೆ ಕುಸಿದಿದೆ. ಕಳೆದ ಮೂರು ತಿಂಗಳುಗಳಲ್ಲಿ ಕಂಪನಿಗಳ ಲಾಭ ಶೇ.. 7.2 ರಷ್ಟು ಕಡಿಮೆ ಆಗಿದೆ. ವಾಣಿಜ್ಯದಲ್ಲಿ ಹೂಡಿಕೆ ಶೇ. 9 ರಷ್ಟು ಕುಸಿದಿದೆ. ಆಸ್ಟ್ರೇಲಿಯಾದಲ್ಲಿ ಆರ್ಥಿಕ ಹಿಂಜರಿತ ಆರಂಭವಾಗಿದೆ ಎಂದು ಪ್ರಧಾನಿ ಘೋಷಿಸಿದ್ದಾರೆ. ಅಲ್ಲಿನ ಸರ್ಕಾರ 9.9 ಶತಕೋಟಿ ಡಾಲರುಗಳಷ್ಟು ಹಣ ಕಡಿಮೆ ಆದಾಯದ ಕುಟುಂಬಗಳ ನೆರವಿಗೆ ತೆಗೆದಿಟ್ಟಿದ್ದರೂ, ದೊಡ್ಡ ಪ್ರಮಾಣದಲ್ಲಿ ಬಡ ಕುಟುಂಬಗಳ ಜೀವನದಲ್ಲಿ ಏರುಪೇರು ತಡೆಯಲು ಆಗಿಲ್ಲ.

ಜನರಲ್ ಮೋಟಾರ್ಸ್ ದಿವಾಳಿ ಘೋಷಿಸಿರುವುದು, 'ಜಗತ್ತಿನ ಉತ್ಪಾದನೆಯಲ್ಲಿ ಮೊದಲ ಇಳಿಕೆ' ಬರಲಿದೆ ಎಂದು ವಿಶ್ವ ಬ್ಯಾಂಕಿನ ಅಧ್ಯಯನ ಕುಸಿತದ ತೀವ್ರತೆಯ ಬಗ್ಗೆ ಹೇಳುತ್ತದೆ. ಈ ಕುಸಿತವನ್ನು ಬೇರೆ ಬೇರೆ ದೇಶಗಳ ಸರ್ಕಾರಗಳು ಯಾವ ರೀತಿಯಲ್ಲಿ ಎದುರಿಸುವ ಕ್ರಮ ಕೈಗೊಳ್ಳುತ್ತವೆ ಎಂಬುದರ ಮೇಲೆ ಇಂತಹ ಸಾಮಾಜಿಕ ಘರ್ಷಣೆಗಳು ನಡೆಯುತ್ತವೆಯೇ ಅಥವಾ ಎಷ್ಟು ತೀವ್ರವಾಗಿರುತ್ತವೆ ಎಂಬುದು ಅವಲಂಬಿಸಿರುತ್ತವೆ.




1930 ರ ಮಹಾ ಕುಸಿತ ತೀವ್ರ ಜನಾಂಗೀಯ ದ್ವೇಷ ಮತ್ತು ಹಿಂಸಾತ್ಮಕ ದಾಳಿ ಘರ್ಷಣೆಗಳಿಗೆ ದಾರಿ ಮಾಡಿತ್ತು. ಮಾತ್ರವಲ್ಲ ಫ್ಯಾಸಿಸಂ ಪ್ರಬಲವಾಗಿ ಇಡೀ ಜಗತ್ತನ್ನು ಅತ್ಯಂತ ಭೀಕರ ಜಾಗತಿಕ ಸಮರಕ್ಕೆ ತಳ್ಳಿ ಆಳುವುದರಲ್ಲಿ ಹತ್ತಿರ ಹತ್ತಿರ ಯಶಸ್ವಿಯಾಗಿತ್ತು. ಈ ಭೀಕರ ದುಸ್ವಪ್ನವನ್ನು ಇನ್ನೂ ಮನುಕುಲ ಮರೆತಿಲ್ಲ. ಈಗಲೂ ಆ ರೀತಿಯ ಎಲ್ಲಾ ಅಪಾಯಗಳಿವೆ. ಆಸ್ಟ್ರೇಲಿಯಾದ ಘಟನೆಗಳು ಇಂತಹ ಅಪಾಯದ ಎಚ್ಚರಿಕೆ ಗಂಟೆ. ಈಗ ಬರುತ್ತಿರುವ ಕುಸಿತದಿಂದ ಇಂತಹ ಅಪಾಯ ತಪ್ಪಿಸಲು ಸಾಮಾನ್ಯ ಜನರ ಜೀವನ ಭಂಗವಾಗದಂತೆ ರಕ್ಷಣಾ ಕ್ರಮ ಕೈಗೊಳ್ಳುವುದು ತುರ್ತಿನ ಅಗತ್ಯ. ○

ಜನರಲ್ ಮೋಟಾರ್ಸ್ ದಿವಾಳಿ

'ಜನರಲ್ ಮೋಟಾರ್ಸ್ ಗೆ ಯಾವುದು ಒಳ್ಳೆಯದೋ ಅದು ಅಮೆರಿಕಾಕ್ಕೂ ಒಳ್ಳೆಯದು' ಎಂಬ ಆಧುನಿಕ ನಾಣ್ನುಡಿ ಪ್ರಚಲಿತವಿತ್ತು. ಜನರಲ್ ಮೋಟಾರ್ಸ್ ಅಮೆರಿಕದ ಮಾತ್ರವಲ್ಲ ಜಗತ್ತಿನ ಅತ್ಯಂತ ದೊಡ್ಡ ಕೈಗಾರಿಕಾ ಕಂಪನಿ. ಅಮೆರಿಕಾದ ಅತೀ ದೊಡ್ಡ ಉದ್ಯೋಗದ ಜನಕ ಕೂಡಾ. ಅದರ ಉತ್ಕರ್ಷದ ಕಾಲದಲ್ಲಿ 20-30 ಲಕ್ಷ ಉದ್ಯೋಗ ನೇರವಾಗಿ ಅಥವಾ ಪರೋಕ್ಷವಾಗಿ ಸೃಷ್ಟಿಸಿತ್ತು. ಇಂತಹ ಕಂಪನಿ ತಾನು ದಿವಾಳಿಯೆಂದು ಘೋಷಿಸುವುದು ಆರ್ಥಿಕ ಭೂಕಂಪಕ್ಕಿಂತ ಕಡಿಮೆ ಏನಲ್ಲ. ದೀವಾಳಿಯಲ್ಲೂ ಜನರಲ್ ಮೋಟಾರ್ಸ್ ತನ್ನ ರೆಕಾರ್ಡು ಕಾಪಾಡಿಕೊಂಡಿದೆ. ಅದು ದಿವಾಳಿ ಘೋಷಿಸಿದ ಕೈಗಾರಿಕಾ ಕಂಪನಿಗಳಲ್ಲಿ ಅತ್ಯಂತ ದೊಡ್ಡ ಕಂಪನಿಯಂತೆ!

ಜನರಲ್ ಮೋಟಾರ್ಸ್ ದಿವಾಳಿಯಾಗುವುದನ್ನು ತಪ್ಪಿಸಲು ಶತ ಪ್ರಯತ್ನ ನಡೆಸಿತು. ಅದರ ಈಗಿನ ಸಾಲ 173 ಶತಕೋಟಿ ಡಾಲರುಗಳು. ಅದರ ಒಟ್ಟು ಆಸ್ತಿಯ ಬೆಲೆ 82 ಶತಕೋಟಿ ಡಾಲರುಗಳು. ಬಹಳ ಸಮಯದಿಂದ ಈ ಕಂಪನಿ ಹಣಕಾಸಿನ ಕಷ್ಟದಲ್ಲಿ ಇತ್ತು. ಅದರ ಮುಖ್ಯ ಉತ್ಪನ್ನ ಕಾರುಗಳು ಮತ್ತು ವ್ಯಾಗನ್ನುಗಳು. ಪ್ರತೀ ಮನೆಗೆ ಎರಡು ಕಾರು ಇರುವ, ಎರಡು ವರ್ಷಕ್ಕೊಮ್ಮೆ ಕಾರು ಬದಲಾಯಿಸುವ ಮತ್ತು ಇಡೀ ದೇಶವನ್ನು ಕಾರಲ್ಲೇ ಸುತ್ತುವ ಅಮೆರಿಕದಲ್ಲಿ ಜನರಲ್ ಮೋಟಾರ್ಸ್ ಈ ಹಿಂದೆ ಸುಗ್ಗಿಯೋ ಸುಗ್ಗಿ.

ಆದರೆ ತೊಂಬತ್ತರ ದಶಕದಿಂದ ಕಂಪನಿಯ ಕಷ್ಟದ ದಿನಗಳು ಆರಂಭವಾಗಿದ್ದವು. ತಂತ್ರಜ್ಞಾನದಲ್ಲಿ ಮುಂದಿದ್ದರೂ, ಜನರಲ್ ಮೋಟಾರ್ಸ್ ನ ಕಾರುಗಳು ಜಗತ್ತಿನಲ್ಲೇ ಅತ್ಯಂತ ದುಬಾರಿ, ಅದಕ್ಷ ಮತ್ತು ಹೆಚ್ಚು ತೈಲ ಕುಡಿಯುವವು ಆಗಿದ್ದವು. ಜಪಾನಿನ ಟೊಯೊಟಾ, ಹೊಂಡಾ, ಸುಜುಕಿ, ಮಿತ್ಸುಬಿಷಿ; ಮತ್ತು ಕೊರಿಯಾದ ಹ್ಯುಂಡೈ, ದಯತ್ಸು ಮುಂತಾದ ಕಂಪನಿಗಳ ಕಾರುಗಳು ಜನರಲ್ ಮೋಟಾರ್ಸ್ ನ ಕಾರುಗಳಿಗಿಂತ ಅಗ್ಗದವು. ತೈಲ



ಬಳಕೆಯಲ್ಲೂ ಮಿತವ್ಯಯದವು. ಉತ್ತಮ ಗುಣಮಟ್ಟದವೂ ಆಗಿದ್ದವು. ತೊಂಬತ್ತರ ದಶಕದಿಂದ ದೊಡ್ಡ ಪ್ರಮಾಣದಲ್ಲಿ ಈ ಕಾರುಗಳ ಆಮದು ಆರಂಭವಾಗಿ ಜನರಲ್ ಮೋಟಾರ್ಸ್‌ನ ಕಾರುಗಳಿಗೆ ಬೇಡಿಕೆ ಕಡಿಮೆ ಆಗಿತ್ತು. ಯುರೋಪಿನ (ಫ್ರಾನ್ಸ್, ಇಟಲಿ, ಜರ್ಮನಿಯ) ಕಾರುಗಳು ಸಹ ತೀವ್ರ ಪೈಪೋಟಿ ಕೊಡುತ್ತಿದ್ದವು. ಇತ್ತೀಚಿಗೆ ತೈಲ ಬೆಲೆ ಗಗನಕ್ಕೇರಿದ್ದರಿಂದ ಮತ್ತು ಆರ್ಥಿಕ ಹಿಂಜರಿತದಿಂದ ಸಹ ಕಾರುಗಳ ಮಾರಾಟಕ್ಕೆ ತೀವ್ರ ಹೊಡೆತ ಬಿದ್ದಿತ್ತು.

ತೀವ್ರ ಆರ್ಥಿಕ ಹಿಂಜರಿತ ಆರಂಭವಾದ ನಂತರ ಜನರಲ್ ಮೋಟಾರ್ಸ್ 'ಆಕ್ಸಿಜನ್' ನಲ್ಲಿ ಇತ್ತು. ಸರ್ಕಾರದ ಕಡಿಮೆ ಬಡ್ಡಿಯ ಸಾಲ 20 ಶತಕೋಟಿ ಡಾಲರು ಸಾಲದ ರೂಪದಲ್ಲಿ 'ಬೇಲ್ ಔಟ್' ನಿಂದ ಬದುಕಿ ಉಳಿದಿತ್ತು. ಅದರ ಸಾಲ ತೀರಿಸಲು ಶೇರುಗಳ ಮಾರಾಟಕ್ಕೆ ಆರಂಭಿಸಿತ್ತು. ಆದರೆ ಅದರ ಶೇರುಗಳ ಕಡಿಮೆ ಬೆಲೆಯಿಂದ (ಪ್ರತೀ ಶೇರಿಗೆ ಡಾಲರು 1,28) ಅದಕ್ಕೂ ತೊಡಕು ಆಗಿತ್ತು. ಕಳೆದ ಒಂದು ವರ್ಷದಿಂದ ಬಹಳಷ್ಟು ಕಾರ್ಮಿಕರು ಅಲ್ಲಿ ಉದ್ಯೋಗ ಕಳೆದು ಕೊಂಡಿದ್ದು ಈಗ ಕೇವಲ 60 ಸಾವಿರ ಕಾರ್ಮಿಕರನ್ನು ಹೊಂದಿದೆ. ಈ ಭಾರೀ ಪ್ರಮಾಣದ ಸಾಲ ತೀರಿಸಲು ಸರ್ಕಾರಕ್ಕೆ ಮಾತ್ರ ಸಾಧ್ಯ. ಸಾಲ ತೀರಿಸಲು ಸರ್ಕಾರ ತೊಡಗಿಸುವ ಅಮೆರಿಕ ಸರ್ಕಾರದ 30 ಶತಕೋಟಿ ಡಾಲರು ಮತ್ತು ಕೆನಡಾದ ಸರ್ಕಾರ 9.5 ಶತಕೋಟಿ ಡಾಲರು ಹಣಕ್ಕೆ ಪ್ರತಿಯಾಗಿ ಆ ಪ್ರಮಾಣದ ಶೇರುಗಳನ್ನು ಪಡೆಯಲಿದೆ. ಅಮೆರಿಕ ಸರ್ಕಾರ ಸುಮಾರು ಶೇ. 60 ಮತ್ತು ಕೆನಡಾ ಸರ್ಕಾರ ಶೇ. 15 ರಷ್ಟು ಶೇರು ಪಡೆಯಲಿದ್ದು, ಜನರಲ್ ಮೋಟಾರ್ಸ್ ಸರ್ಕಾರಿ ಕಂಪನಿ ಆಗಲಿದೆ. ಈಗಿನ ಕಂಪನಿ ಶೇರುದಾರರ ಶೇರುಗಳನ್ನು ಕಳೆದುಕೊಳ್ಳಲಿದ್ದಾರೆ.

ಆದರೆ ಇದೂ ಕಂಪನಿಯನ್ನು ಉಳಿಸುತ್ತದೆ ಎಂದು ಹೇಳುವುದು ಕಷ್ಟ. ಕಂಪನಿ ಹಲವು ಬ್ರಾಂಡಿನ ಕಾರುಗಳನ್ನು ನಿಲ್ಲಿಸಬೇಕಾಗುತ್ತದೆ. ಕಾರಿನ ಬೆಲೆ ಕಡಿಮೆ ಮಾಡಬೇಕು. ತೈಲ ಮಿತವ್ಯಯ ಸಾಧಿಸಬೇಕು. ಹಲವು ಕಾರ್ಖಾನೆಗಳನ್ನು ಮುಚ್ಚಲಿದೆ. ಸುಮಾರು 21 ಸಾವಿರ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳಲಿದ್ದಾರೆ.

ಜನರಲ್ ಮೋಟಾರ್ಸ್ ಅಮೆರಿಕದ ಆರ್ಥಿಕದ ಪ್ರತೀಕ. ಜನರಲ್ ಮೋಟಾರ್ಸ್ ಸರ್ಕಾರಿ ಕಂಪನಿ ಆದದ್ದು ನೋಡಿದರೆ, ಇಂತಹ ಸಾಧ್ಯತೆ ಇತರ ಕಂಪನಿಗಳಿಗೂ ಇದೆ. ಈಗಾಗಲೇ ಬ್ರಿಟನ್ ಮತ್ತು ಅಮೆರಿಕಾದಲ್ಲಿ ಹಲವು ಕಂಪನಿಗಳಲ್ಲಿ ಬ್ಯಾಂಕುಗಳಲ್ಲಿ ಸರ್ಕಾರದ ಶೇರು ಪಾಲು ಗಣನೀಯವಾಗಿ ಏರಿದೆ. ಖಾಸಗೀ ದೈತ್ಯ ಕಂಪನಿಗಳ ತವರು ಮನೆಯಾಗಿದ್ದ ಅಮೆರಿಕದಲ್ಲಿ ಇದು ನಡೆಯುತ್ತಿರುವಾಗ, ನಮ್ಮ ದೇಶದ ಬ್ಯಾಂಕು, ವಿಮೆ ಮತ್ತು ಇತರ ಕ್ಷೇತ್ರಗಳನ್ನು ವಿದೇಶ ಬಂಡವಾಳಕ್ಕೆ ತೆರೆಯಬೇಕೆಂದು ಹೇಳುವುದು ಎಂತಹ ಮೂರ್ಖತನದ ಮಾತು ಬೇರೆ ಹೇಳಬೇಕೆ ?

ಲ್ಯಾಟಿನ್ ಅಮೆರಿಕಾದ ಕೊನೆಯ ಗೋಲು

ಎಲ್ ಸಾಲ್ವಡೋರ್ ಎಡ ಅಭ್ಯರ್ಥಿಯನ್ನು ಅಧ್ಯಕ್ಷನಾಗಿ ಆರಿಸುವ ಮೂಲಕ ಇಡೀ ಲ್ಯಾಟಿನ್ ಅಮೆರಿಕ ಎಡದತ್ತ ವಾಲಿದೆ. ಇದು ಅಮೆರಿಕನ್ ಸಾಮ್ರಾಜ್ಯಶಾಹಿ ಬೆಂಬಲಿತ ಬಲಪಂಥೀಯತೆ ವಿರುದ್ಧ ಕೊನೆ ಗೋಲು. ಅದು ಸಂಪೂರ್ಣ ಸೋಲು ಕಂಡಿದೆ. 20 ವರ್ಷಗಳಿಂದ ಆಳ್ವಿಕೆ ನಡೆಸಿದ್ದ ಆಳುವ ಪಕ್ಷ ಅಧಿಕಾರ ಕಳೆದುಕೊಂಡಿದೆ. ಹಿಂದೆ ದೀರ್ಘ ಕಾಲ ಸಶಸ್ತ್ರ ಗೆರಿಲ್ಲಾ ಹೋರಾಟ ನಡೆಸಿದ ಎಫ್.ಎಮ್.ಎಲ್.ಎನ್. ಸಂಘಟನೆಗೆ ಸೇರಿದ್ದ ಮಾರಿಕೊ ಫ್ಯುನ್ಸ್ ಅಧ್ಯಕ್ಷರಾಗಿ ಉತ್ತಮ ಬಹುಮತದಿಂದ ಆಯ್ಕೆ ಆಗಿದ್ದಾರೆ. ಆರ್ಥಿಕವಾಗಿ ತೀವ್ರ ದುಸ್ಥಿತಿಯಲ್ಲಿ ಇರುವ ಎಲ್ ಸಾಲ್ವಡೋರ್ ನಲ್ಲಿ ಅಧ್ಯಕ್ಷ ಮಾರಿಕೊ ಫ್ಯುನ್ಸ್ ತೀವ್ರ ಸವಾಲು ಎದುರಿಸಲಿದ್ದಾರೆ. ಆದರೆ ಭಾರೀ ಜನಬೆಂಬಲ ಅವರ ಬೆನ್ನಿಗಿದೆ. ಭಾರೀ ನಿರೀಕ್ಷೆಗಳು ಸಹ.

ಭಯೋತ್ಪಾದನೆಯ ಅರ್ಥ...

2 ರಿಂದ

ರ ಇಂಧನ ಮತ್ತು ಮಿಲಿಟರಿ-ಕೈಗಾರಿಕಾ ಕೂಟದ
ರ ನೀತಿಯ ಭಾಗವಾಗಿದೆ. ಇದರ ಉದ್ದೇಶ
ತ್ತಿನ ಯಾವುದೇ ಭಾಗದಲ್ಲಿರುವ ತೈಲದ ಮೇಲೆ
ೀರಿಕಕ್ಕೆ ನಿರಾತಂಕವಾದ ಹಿಡಿತವನ್ನು
ಸುವುದು. ಇರಾಕ್ ಮೇಲಿನ ದಾಳಿ ಮತ್ತು
ಮು ಏಷ್ಯಾವನ್ನು ಪುನರ್ರಚಿಸುವ ಅಮೇರಿಕದ
ಹಾತ್ಮಕ ನೀತಿಗಳು ಸಂಪೂರ್ಣವಾಗಿ ತೈಲ
ಪನ್ಮೂಲಗಳ ಮೇಲಿನ ಹಿಡಿತಕ್ಕಾಗಿ
ಿತವಾಗಿವೆ. ಅಮೇರಿಕವು ಪ್ರತಿ ದಿನ ಸುಮಾರು
ಮಿಲಿಯನ್ ಬ್ಯಾರಲ್‌ಗಳಿಗೂ ಹೆಚ್ಚು ಕಚ್ಚಾ
ವನ್ನು ಬಳಸುತ್ತಿದೆ. ಇರಾಕನ್ನು
ಪಡಿಸಿಕೊಳ್ಳುವುದರಿಂದ ಅಮೇರಿಕದ ತೈಲ
ಿಕೆಯ ಅರ್ಧದಷ್ಟನ್ನು ಕಡಿಮೆ ಬೆಲೆಗಳಲ್ಲಿ
ರಕಿಸಿಕೊಳ್ಳಬಹುದಾಗಿದೆ. ಇರಾಕ್ ಮೇಲೆ
ದ್ಧ, ಇರಾನ್ ಮೇಲೆ ಗುರಿ, ತೈಲ ಶ್ರೀಮಂತ
ವೆನಿಜುವೆಲಾದ ಅಧ್ಯಕ್ಷ ಹ್ಯೂಗೋ ಚಾವೇಜ್
ದ್ವೇಷ ಇವೆಲ್ಲವೂ ತೈಲ ಸಂಪನ್ಮೂಲ
ೆ.

ಹೀಗಾಗಿಯೇ ಗ್ಯಾಸ್ ಮತ್ತು ತೈಲ
ರಾಷ್ಟ್ರೀಯ ಕಂಪನಿಗಳ ಸಿಇಓ (CEO)ಗಳು
ತ್ತ ಅಧಿಕಾರಿಗಳು ಸರ್ಕಾರದ ವಿದೇಶಾಂಗ ಮತ್ತು
ರ ನೀತಿಗಳ ನಿರೂಪಕರಾಗಿದ್ದಾರೆ. ಇದಕ್ಕೆ ಸ್ವತಃ
ಚೆನಿಯೇ ಉದಾಹರಣೆ. ಈತ ಅಮೇರಿಕದ
ಾಧ್ಯಕ್ಷನಾಗುವ ಮೊದಲು ದಲ್ಲಾಸ್‌ನಲ್ಲಿರುವ
ಲಿಬರ್ಟನ್ ಕಂಪನಿಯ ಅಧ್ಯಕ್ಷ ಮತ್ತು
EO)ಆಗಿದ್ದ. ಇರಾಕ್‌ನ್ನು ಅಕ್ರಮವಾಗಿ
ಪಡಿಸಿಕೊಂಡ ಮೇಲೆ ಅಲ್ಲಿನ ತೈಲಬಾವಿಗಳ
ಲೆ ಸಾಕಷ್ಟು ಹಿಡಿತವನ್ನು ಈ ಕಂಪನಿ ಸಾಧಿಸಿದೆ.
ಪರೇಷನ್ ಇರಾಕಿ ಫ್ರೀಡಂ' ಹೆಸರಲ್ಲಿ ಈ
ಪನಿಗೆ 1.7 ಬಿಲಿಯನ್ ಡಾಲರ್‌ಗಳಿಗೂ ಹೆಚ್ಚಿನ
ಟ್ರಾಕ್ಟನ್ನು ನೀಡಲಾಯಿತು. ಜೊತೆಗೆ ಬಿಡ್ಡಿಂಗ್
ದ ಮಿಲಿಯಾಂತರ ಡಾಲರ್‌ಗಳ ಕಾಂಟ್ರಾಕ್ಟ್‌ನ್ನೂ
ಡಲಾಯಿತು. ಅದೇ ರೀತಿ ಅಮೇರಿಕ
ಮಣಗಳನ್ನು ನಡೆಸಿರುವ ಪ್ರದೇಶ ಗಳಾದ
ೊ, ಬೊಸ್ನಿಯಾ, ಅಲ್ಬೇನಿಯಾ ಮುಂತಾದ
ಲ್ಲಿ ಅಮೇರಿಕದ ಸೈನಿಕ ಇಂಜಿನಿಯರಿಂಗ್
ಾಕ್ಟ್‌ಗಳ ಹೆಸರಲ್ಲಿ ಸಹಸ್ರಾರು ಕೋಟಿ
ಲರ್‌ಗಳನ್ನು ಇದು ದೋಚಿ ಕೊಂಡಿದೆ.

ಅದೇ ರೀತಿ ಯುದ್ಧ-ಶಸ್ತ್ರಾಸ್ತ್ರ ತಯಾರಿಸುವ
ಲಿಟರಿ ಕೈಗಾರಿಕೆಗಳು ತೈಲ ಕಂಪನಿಗಳ ಹಾಗೇ
ತ್ತೊಂದು ಬೃಹತ್ ಲಾಬಿ. ಅಮೇರಿಕದ ರಕ್ಷಣಾ
ರಿಕೆ ಜಗತ್ತಿನಲ್ಲೇ ಅತಿ ದೊಡ್ಡದು. ಜಗತ್ತಿನ ಅತಿ ದೊಡ್ಡ 5 ದೇಶಗಳ ಮಿಲಿಟರಿ ವೆಚ್ಚಕ್ಕಿಂತ ಸುಮಾರು ಶೇ. 70 ರಷ್ಟು ಹೆಚ್ಚು ಹಣವನ್ನು ಮಿಲಿಟರಿಗಾಗಿ ಅಮೇರಿಕ ಖರ್ಚುಮಾಡುತ್ತದೆ. ಜಗತ್ತಿನ 2 ನೇ ಅತಿ ದೊಡ್ಡ ಮಿಲಿಟರಿ ಹೊಂದಿರುವ ರಷ್ಯಾ ಅಮೇರಿಕದ ಮಿಲಿಟರಿ ವೆಚ್ಚದ 6 ರಲ್ಲಿ 1 ಭಾಗ ಮಾತ್ರ ಖರ್ಚು ಮಾಡುತ್ತದೆ. ಅಮೇರಿಕದ 500 ಜಿಲ್ಲೆಗಳಲ್ಲಿ (Congressional districts) ಪ್ರತಿ ಜಿಲ್ಲೆಯಲ್ಲಿಯೂ ಒಂದು ಶಸ್ತ್ರಾಸ್ತ್ರ ತಯಾರಿಕಾ ಕೈಗಾರಿಕೆ ಇದೆ. 90 ರ ದಶಕದಲ್ಲಿ ಮತ್ತು ಸೆ.11ರ ನಂತರ ಅಮೇರಿಕ ತನ್ನ ಮಿಲಿಟರಿ ವ್ಯಾಪ್ತಿಯನ್ನು ವಿಸ್ತರಿಸಿತು. ಜಗತ್ತಿನಾದ್ಯಂತ ಸುಮಾರು 132 ದೇಶಗಳಲ್ಲಿ ಇದು ಮಿಲಿಟರಿ ನೆಲೆಗಳನ್ನು ಸ್ಥಾಪಿಸಿದೆ. ಜರ್ಮನಿ, ಇಟಲಿ, ಇಂಗ್ಲೆಂಡ್ ಮತ್ತು ಜಪಾನ್‌ಗಳಲ್ಲಿರುವ ಸೈನಿಕರ ಸಂಖ್ಯೆಯನ್ನು ಹೊರತುಪಡಿಸಿ ಈ ಮಿಲಿಟರಿ ನೆಲೆಗಳಲ್ಲಿ 2.5 ಲಕ್ಷಕ್ಕೂ ಹೆಚ್ಚು ಸೈನಿಕರನ್ನು ಅದು ಹೊಂದಿದೆ. (www.globesecurity.org/military/ops/globaldeploy ments.html). ಇಂತಹ ಜಾಗತಿಕ ಮಿಲಿಟರಿ ಜಾಲ ವಿಶ್ವದಲ್ಲೇ ಯಾರಿಗೂ ಇಲ್ಲ! ವಿವಿಧ ದೇಶಗಳಲ್ಲಿರುವ 702 ಮಿಲಿಟರಿ ನೆಲೆಗಳಲ್ಲದೆ ಸುಮಾರು 10,000 ಪರಮಾಣು ಬಾಂಬ್‌ಗಳು ಅಮೇರಿಕದ ನಿಯಂತ್ರಣದಲ್ಲಿವೆ. ಇದರಲ್ಲಿ ಸುಮಾರು 2000 ಬಾಂಬ್‌ಗಳು ಕ್ಷಣಾರ್ಧದಲ್ಲಿ ಕ್ಷಿಪಣಿಗಳ ಮೂಲಕ ಜಿಗಿಯಲು ಸಿದ್ಧವಾಗಿವೆ. ಜಗತ್ತನ್ನು 100 ಬಾರಿ ಕೊಲ್ಲುವಷ್ಟು ಸಾಮರ್ಥ್ಯವಿದೆ. ಯುದ್ಧವೇ ಉದ್ಯಮವಾಗುವುದು ಹೀಗೆ. ಹೀಗಾಗಿ ಜಗತ್ತಿನೆಲ್ಲೆಡೆ ಯುದ್ಧ ನಡೆಯುತ್ತಿರುವಂತೆ ನೋಡಿಕೊಳ್ಳಬೇಕಾದ ಅನಿವಾರ್ಯತೆ ಅಮೇರಿಕಕ್ಕಿದೆ. ಬಹುರಾಷ್ಟ್ರೀಯ ಕಂಪನಿಗಳ ಕೂಟದ ಲಾಭಕೋರತನ ಯುದ್ಧ ಮತ್ತು ಭಯೋತ್ಪಾದನೆಯನ್ನು ಕಾಪಾಡುತ್ತಿದೆ.

★ ★ ★

ಅಮೆರಿಕಾದ ಯುದ್ಧ ಸಿದ್ಧಾಂತಕ್ಕೆ ಅನುಗುಣವಾಗಿ ವಿದೇಶಾಂಗ ನೀತಿ

ಅಮೇರಿಕದ ನೀತಿ ನಿರೂಪಣೆ ಮಾಡುವುದರಲ್ಲಿ ಪ್ರಧಾನ ಪಾತ್ರವಹಿಸಿರುವ ನವ-ಸಂಪ್ರದಾಯ ವಾದಿಗಳು ವಾದಿಸುವ ಪ್ರಕಾರ ಅಂತರಾಷ್ಟ್ರೀಯ ಕಾನೂನು ಮತ್ತು ಜಾಗತಿಕ ವ್ಯವಸ್ಥೆಯನ್ನು ಮೀರಿರುವ ಏಕೈಕ ದೇಶ ಅಮೇರಿಕ. ಹೀಗಾಗಿ ತನ್ನ ಪರವಾಗಿಲ್ಲದಿದ್ದರೆ ವಿಶ್ವಸಂಸ್ಥೆಯ ತೀರ್ಮಾನಗಳಿಗೆ ಯಾವ ಬದ್ಧತೆಯನ್ನು ಅದು ಹೊಂದಿರುವುದಿಲ್ಲ.

★ ★ ★

ಇಸ್ಲಾಂ, ಜಿಹಾದ್ ಮತ್ತು ಮೂಲಭೂತವಾದ

ಅಮೆರಿಕದ ಲೇಖಕ ಪ್ಯಾಟ್ರಿಕ್ ಜೆ ಬುಖಾನಿನ್, 'ಕಮ್ಯುನಿಸಂ ಸತ್ತ ನಂತರ ಕೆಲವು ಅಮೇರಿಕನ್ನರಿಗೆ, ನಮ್ಮ ಶಕ್ತಿ ಮತ್ತು ಸಾಮರ್ಥ್ಯವನ್ನು ಪರೀಕ್ಷಿಸಲು ಒಬ್ಬ ಹೊಸ ಶತ್ರು ಬೇಕಾಗಿದೆ. ಇಸ್ಲಾಂ ಇದಕ್ಕಾಗಿ ಆದ್ಯತೆಯ ಶತ್ರುವಾಗಿದೆ. ಆದರೆ ಇಸ್ಲಾಂನ್ನು ಅಮೇರಿಕದ ಶತ್ರು ಎಂದು ಘೋಷಿಸುವುದರ ಅರ್ಥ ಎರಡನೇ ಶೀತಲ ಸಮರವನ್ನು ಘೋಷಿಸುವುದೇ ಆಗಿದೆ. ಇಂತಹ ಸಂದರ್ಭದಲ್ಲಿ ಈ ಸಮರ ಮೊದಲನೆಯದರ ಹಾಗೆ ಯಶಸ್ವಿನಲ್ಲಿ ಮುಗಿಯುವ ಅವಕಾಶಗಳು ಕಡಿಮೆ' ಎಂದು ಹೇಳಿದ್ದಾರೆ.

ಇದಕ್ಕಾಗಿ 'ಇಸ್ಲಾಮ್-ಜಾಗತಿಕ ಭಯೋತ್ಪಾದಕ' ಎಂಬ ಮನೋಭಾವವನ್ನು ಸೃಷ್ಟಿಸಲು ಪ್ರಯತ್ನಿಸಲಾಗಿದೆ. ಇಸ್ಲಾಂ ಮತ್ತು ನಾಗರಿಕತೆ (ಪಶ್ಚಿಮದ ಆಧುನಿಕತೆ) ಪರಸ್ಪರ ಶತ್ರುಗಳು, ಇಸ್ಲಾಂ ಮತ್ತು ಭಯೋತ್ಪಾದನೆ ಒಂದೇ ನಾಣ್ಯದ ಎರಡು ಮುಖಗಳು, ಇಸ್ಲಾಂ ಒಂದು ಧರ್ಮವಾಗಿಯೇ ಭಯೋತ್ಪಾದಕ ಧರ್ಮವಾಗಿದೆ ಎಂಬ ಅಭಿಪ್ರಾಯಗಳನ್ನು ರೂಪಿಸಲು ಪ್ರಯತ್ನಿಸಲಾಗಿದೆ. ಸ್ಯಾಮ್ಯುಯೆಲ್ ಪಿ ಹಂಟಿಂಗ್‌ಟನ್‌ರವರು 'ನಾಗರಿಕತೆಗಳ ಸಮರ' ಎನ್ನುವ ಹೆಸರಿನಲ್ಲಿ ಇಸ್ಲಾಂ ಮತ್ತು ಪಶ್ಚಿಮದ (ಅಮೇರಿಕ ಮತ್ತು ಮಿತ್ರ ದೇಶಗಳು) ನಡುವಿನ ಸಮರ ಎಂದು ಜರಿದಿದ್ದಾರೆ. ಆದರೆ ಸೌದಿ ಅರೇಬಿಯಾ, ಪಾಕಿಸ್ತಾನ ಇಸ್ಲಾಂ ರಾಷ್ಟ್ರಗಳಾಗಿದ್ದರೂ ಪಶ್ಚಿಮದೊಂದಿಗೆ ಬಿಕ್ಕಟ್ಟು ಯಾಕಿಲ್ಲ ಎಂಬುದನ್ನು ವ್ಯಾಪಾರಿ ಅನುಕೂಲದ ಹಿನ್ನೆಲೆಯಲ್ಲಿ ತೇಲಿಸಿ ಬಿಟ್ಟಿದ್ದಾರೆ.

★ ★ ★

ಸಂಘ ಪರಿವಾರ, ಹಿಂದೂ ಕೋಮುವಾದ ಮತ್ತು ಭಯೋತ್ಪಾದನೆ

ಉತ್ತಮ ಬದುಕಿನ ಹಕ್ಕಿಗಾಗಿ ಹೋರಾಡಬೇಕಾದ ಯುವಜನರ ಅತೃಪ್ತಿ ತಮ್ಮ ವಿರುದ್ಧ ತಿರುಗಿ ಬೀಳದಂತೆ ತಡೆಯಲು ಭಾರತದ ಆಳುವ ವರ್ಗಗಳ ಪ್ರತಿಗಾಮಿ ಮತ್ತು ಅಕ್ರಮಣಕಾರಿ ವಿಭಾಗವೊಂದು ಸಂಘಪರಿವಾರದ ಮೂಲಕ ಯುವಜನತೆಗೆ ಜನಾಂಗೀಯ ವಿಷವನ್ನು ಉಣಿಸುತ್ತಿದೆ. ಭಾರತದ ಜನತೆಯ ಎಲ್ಲ ಸಮಸ್ಯೆಗಳಿಗೂ ಮುಸ್ಲಿಮರೇ ಕಾರಣ ಎಂಬಂತೆ ಸಂಘಪರಿವಾರ ಹಲವಾರು ಮಿಥ್ಯೆಗಳನ್ನು ಸೃಷ್ಟಿಸಿದೆ. ಆಳುವ ಭೂಮಾಲಕ- ಬಂಡವಾಳಶಾಹಿ ವರ್ಗಗಳ ಏಜೆಂಟಾಗಿ, ಸಾಮ್ರಾಜ್ಯಶಾಹಿಗಳ ಹಿತಚಿಂತಕನಾಗಿ ಮಾತನಾಡುತ್ತಿದೆ. ಜನಾಂಗೀಯ ವಿಷ ಹರಡಲು ಸಂಘಪರಿವಾರ ನೂರಾರು ಭಿನ್ನ-ವಿಭಿನ್ನ ಸಂಘಟನೆಗಳ ಹೆಸರಿನಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಗುಜರಾತ್‌ನಲ್ಲಿ ಗರ್ಭಿಣಿ ಹೊಟ್ಟೆ ಬಗೆದು ಕೂಸನ್ನು ಶೂಲಕ್ಕೆ ಸಿಕ್ಕಿಸಿ ಬೀದಿಯಲ್ಲಿ ಕೇಕೆ ಹಾಕುವಾಗ, ಒರಿಸ್ಸಾದಲ್ಲಿ ಕುಷ್ಠ ರೋಗಿಗಳ ಸೇವೆಯಲ್ಲಿ ತೊಡಗಿದ್ದ ಗ್ರಹಾಂ ಸ್ಟೇನ್ಸ್ ಮತ್ತು ಅವರ ಇಬ್ಬರು ಮಕ್ಕಳನ್ನು ಜೀವಂತವಾಗಿ ಸುಟ್ಟು ಸಂತೋಷ ಪಡುವಾಗ, ಹರಿಯಾಣದ ಜಜ್ಜಾರ್‌ನಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದರೆಂದು ಐದು ಜನ ದಲಿತರನ್ನು ಕಲ್ಲಿನಿಂದ ಜಜ್ಜಿ ಕೊಂದಾಗ ಸಂಘಪರಿವಾರದ 'ಹಿಂದುತ್ವ' ಅಥವಾ 'ಹಿಂದು ರಾಷ್ಟ್ರ'ದ ಜನಾಂಗೀಯ ಭಾವೋನ್ಮಾದ ಕುಣಿಯುತ್ತಿತ್ತು. ಹಿಂದುತ್ವದ ವಿಷ ಯಾರ ಪರ ಕೆಲಸ ಮಾಡುತ್ತಿದೆ ಎಂಬುದು ಅರ್ಥವಾಗದೇ ಇರಲು ಸಾಧ್ಯವಿಲ್ಲ.

ಆರ್‌ಎಸ್‌ಎಸ್‌ನ 'ಹಿಂದೂ ರಾಷ್ಟ್ರ'ದ ಸಿದ್ಧಾಂತ ಭಾರತ ಉಪಖಂಡದಲ್ಲಿ ಕೋಮುವಾದ ಮತ್ತು ಭಯೋತ್ಪಾದನೆಯನ್ನು ಪೋಷಿಸುತ್ತಿರುವ ಪ್ರಮುಖ ಸಿದ್ಧಾಂತ ವಾಗಿದೆ. ಆರ್‌ಎಸ್‌ಎಸ್‌ನ ಅತ್ಯುನ್ನತ ನಾಯಕರಾಗಿದ್ದ ಗೋಲ್ವಾಲ್ಕರ್ 1938ರಲ್ಲಿ ಬರೆದ-1939ರಲ್ಲಿ ಮೊದಲಿಗೆ ಮತ್ತು 1947ರಲ್ಲಿ ಸ್ವಾತಂತ್ರ್ಯ ಬಂದನಂತರ ಮುದ್ರಿಸಿದ-'ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿರ್ವಚನೆ' (We or Our Nation hood defined) ಎಂಬ ಪುಸ್ತಕದಲ್ಲಿ 'ಹಿಂದೂ ರಾಷ್ಟ್ರ' ಹೇಗಿರುತ್ತದೆಂಬ ಕಠೋರವಾದ ವಿಷಯಗಳನ್ನು ಪ್ರತಿಪಾದಿಸಿದ್ದಾರೆ.

'ನಾವು ಪುನರುಚ್ಚರಿಸುವುದು ಏನೆಂದರೆ ಹಿಂದೂಗಳ ಭೂಮಿಯಾದ ಹಿಂದೂಸ್ಥಾನದಲ್ಲಿ ಜೀವಿಸಿರುವುದು ಮತ್ತು ಜೀವಿಸಬೇಕಾದ್ದು ಆಧುನಿಕ ಜಗತ್ತಿನ ವೈಜ್ಞಾನಿಕ ರಾಷ್ಟ್ರ ಪರಿಕಲ್ಪನೆಯ ಎಲ್ಲಾ ಐದು ಅಗತ್ಯ ಅಂಶಗಳನ್ನು ಒಳಗೊಂಡ ಹಿಂದೂ ರಾಷ್ಟ್ರ. ಹಿಂದೂ ರಾಷ್ಟ್ರವನ್ನು ಈಗಿನ ಜಡತ್ವದಿಂದ ಉದ್ಧರಿಸಿ, ಪುನಶ್ಚೇತನಗೊಳಿಸಿ ಮತ್ತೆ ಕಟ್ಟುವ ಗುರಿಯುಳ್ಳ ಆಂದೋಲನಗಳಷ್ಟೇ ನಿಜವಾಗಿ 'ರಾಷ್ಟ್ರೀಯ'. ತನ್ನ ಹೃದಯದ ನಂತರ ಹಿಂದೂ ಜನಾಂಗ ಮತ್ತು ರಾಷ್ಟ್ರವನ್ನು ವೈಭವೀಕರಿಸುವ ಹೆಬ್ಬಯಕೆ ಹೊಂದಿಳುವಾತ, ಆ ಗುರಿಸಾಧನೆಗೆ ಪ್ರಯತ್ನಿಸುವಾತನೇ ನಿಜವಾದ ರಾಷ್ಟ್ರೀಯವಾದಿ ದೇಶಪ್ರೇಮಿ. ಉಳಿದವರು ಶತ್ರುಗಳು, ಅಥವಾ ಮೆದು ಮಾತಿನಲ್ಲಿ ಹೇಳಬೇಕಾದರೆ ಮೂರ್ಖರು' (ಪುಟ 43 ಮತ್ತು 44).

★ ★ ★

ಹಿಂದೂ ಕೋಮುವಾದದಿಂದ ಹೆಚ್ಚುತ್ತಿರುವ ಮುಸ್ಲಿಂ ಭಯೋತ್ಪಾದನೆ

ಭಾರತದಲ್ಲಿ ಹೆಚ್ಚುತ್ತಿರುವ ಇಸ್ಲಾಮಿಕ್ ಭಯೋತ್ಪಾದನೆಗೆ ಹಿಂದೂ ಕೋಮುವಾದ ಮೂಲ ಕಾರಣವಾಗಿದೆ. 1969ರಲ್ಲಿ ನಡೆದ ಅಹಮದಾಬಾದ್ ಕೋಮುಗಲಭೆ, 1970ರಲ್ಲಿ ನಡೆದ ಭಿವಂಡಿ ಗಲಭೆ, 1971ರಲ್ಲಿ ನಡೆದ ತಲಚೇರಿ ಗಲಭೆ, 1981ರಲ್ಲಿ ನಡೆದ ಜೆಮ್‌ಷೆಡ್‌ಪುರ ಗಲಭೆ, 1982ರಲ್ಲಿ ನಡೆದ ಕನ್ಯಾಕುಮಾರಿ ಗಲಭೆ ಹೀಗೆ, ಭಾರತದಲ್ಲಿ ಸ್ವಾತಂತ್ರ್ಯಾನಂತರ ನಡೆದಿರುವ ಕೋಮುಗಲಭೆಗಳಿಗೆ ಲೆಕ್ಕವಿಲ್ಲ. ಇಂತಹ ಬಹುತೇಕ ಗಲಭೆಗಳಲ್ಲಿ, ಆರೆಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳ ಕೈವಾಡವಿರುವುದು ಅವುಗಳನ್ನು ತನಿಖೆ ಮಾಡಿರುವ ವರದಿಗಳಲ್ಲಿ ಪ್ರಕಟವಾಗಿದೆ. 80?ರ ದಶಕದ ಕೊನೆಯಲ್ಲಿ ಹೆಚ್ಚು ವ್ಯವಸ್ಥಿತವಾಗಿ ಸಂಘಟಿಸಲಾದ ಅದ್ವಾನಿಯವರ ರಥಯಾತ್ರೆ ಸಂದರ್ಭದಲ್ಲಿ ಸಂಭವಿಸಿದ ಅಸಂಖ್ಯಾತ ಕೋಮು ಗಲಭೆಗಳು, ಆಸ್ತಿ-ಪ್ರಾಣ ಹಾನಿ, 1992ರಲ್ಲಿ ನಡೆದ ಬಾಬ್ರಿ ಮಸೀದಿ ಧ್ವಂಸ ಪ್ರಕರಣ, ಗುಜರಾತ್‌ನಲ್ಲಿ ನಡೆದ ಸುಮಾರು 2000ಕ್ಕೂ ಹೆಚ್ಚು ಮುಸ್ಲಿಮರ ಹತ್ಯಾಕಾಂಡ ಭಾರತದ ಮುಸ್ಲಿಮರಲ್ಲಿ ಆಳವಾದ ಬಿರುಕನ್ನು ಸೃಷ್ಟಿಸಿದೆ. ಅವರಲ್ಲಿ ದಿನೇ ದಿನೇ ಆತಂಕವನ್ನು ಹೆಚ್ಚಿಸುತ್ತಿದೆ. ಇದಕ್ಕೆ ಪೂರಕವೆನ್ನುವಂತೆ ಇಂತಹ ಯಾವುದೇ ಪ್ರಕರಣದಲ್ಲೂ ಅಪರಾಧ ಮಾಡಿದವರಿಗೆ ಇದುವರೆಗೂ ಶಿಕ್ಷೆಯಾಗಲಿಲ್ಲ. ಆದರೆ ಬಾಬ್ರಿ ಮಸೀದಿ ಧ್ವಂಸದ ನಂತರ ನಡೆದ ಮುಂಬೈ ಸರಣಿ ಸ್ಫೋಟದ ಸಾಕಷ್ಟು ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಇಂತಹ ಪಕ್ಷಪಾತ ಧೋರಣೆ ಮುಸ್ಲಿಮರಲ್ಲಿ ವ್ಯವಸ್ಥೆಯ ಬಗ್ಗೆ ಅಪನಂಬಿಕೆ ಹೆಚ್ಚಿಸಿದೆ.

ರಾಷ್ಟ್ರಪತಿಗಳ ಭಾಷಣ....

ಟ 8 ರಿಂದ

ರಿ ಮಾಡುವ (ಒಬಾಮಾ ಮಾದರಿಯಲ್ಲಿ!)
ುಗಳ ಒಂದು ದೊಡ್ಡ ಪಟ್ಟಿಯನ್ನು ಮುಂದಿಟ್ಟಿದ್ದಾರೆ.
ಹಿಳಾ ಮೀಸಲಾತಿ ಮಸೂದೆಯ ಜಾರಿ ಇವುಗಳಲ್ಲಿ
ದಲನೆಯದು. ಒಂದು ದಶಕದ ವಿಳಂಬದ ನಂತರ
ಗಲಾದರೂ ಈ ಮಸೂದೆ ಬೆಳಕು ಕಾಣುತ್ತದೆ
ಆಶಿಸೋಣ.

ಭಾರತದ ವಿದೇಶಾಂಗ ನೀತಿಯ ಬಗ್ಗೆ
ದಿಸಂತೆ ಪ್ರಸ್ತಾಪಗಳಿವೆ. ವಿಶ್ವದ ಎಲ್ಲಾ
ಶಗಳೊಂದಿಗೆ, ವಿಶೇಷವಾಗಿ ನೆರೆದೇಶಗಳೊಂದಿಗೆ ಗೆಳೆತನದ ಸಂಬಂಧಗಳನ್ನು ಬೆಳೆಸಲಾಗುವುದು ಎನ್ನಲಾಗಿದೆ. ಆದರೆ ಎಲ್ಲೂ ಅಲಿಪ್ತ ಆಂದೋಲನದ ಪ್ರಸ್ತಾಪ ಇಲ್ಲದಿರುವುದು ಒಂದು ಗಮನಾರ್ಹ ಸಂಗತಿ. ಒಂದು ಗಂಟೆಯ ಭಾಷಣದಲ್ಲಿ 'ಅಲಿಪ್ತ' ಎಂಬ ಪರವೇ ಇರಲಿಲ್ಲ. ಇದು ಅಮೇರಿಕಾದೊಂದಿಗೆ, ಅಮೇರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಸಾಮರಿಕ ಸಂಬಂಧಗಳನ್ನು ಇನ್ನಷ್ಟು ಬೆಳೆಸುವ ಯುಪಿಎ ಸರ್ಕಾರ ಆಶಯಕ್ಕೆ ಅನುಗುಣವಾಗಿದೆ.

ಭಾರತದ ಆಳುವ ವರ್ಗಗಳಲ್ಲಿ ಪ್ರಶಂಸನೀಯ ಆಶಯಗಳ ಘೋಷಣೆಗಳಲ್ಲಿ ಎಂದೂ ಕೊರತೆಯಿದ್ದರಲಿಲ್ಲ. ಆದರೆ ಅವುಗಳ ನಿಜವಾದ ವರ್ಗ ಸ್ವಭಾವ ಪ್ರಕಟವಾಗುವುದು ಇಂತಹ ಆಶಯಗಳ ಈಡೇರಿಕೆಗಳ ಸಂದರ್ಭದಲ್ಲಿಯೇ ಇಂದಿರಾಗಾಂಧಿಯವರ ಪ್ರಸಿದ್ಧ 'ಗರೀಬಿ ಹಟಾವೋ' ನೆನಪಿದೆಯೇ? ಕೆಲವು ವರ್ಷಗಳ ನಂತರ ತಮ್ಮ ಜೀವನ ಮಟ್ಟದಲ್ಲಿ ಇಳಿಕೆ ಕಂಡ ಜನ 'ಗರೀಬಿ ಲೌಟಾವೊ' (ಬಡತನ ಹಿಂದಿರುಗಿಸಿ) ಎಂಬ ಘೋಷಣೆ ಎತ್ತಿದರು.

ಆದ್ದರಿಂದ ಮುಂದಿನ ಅವಧಿ ಭಾರತದ ಜನತೆಗೆ ತಮ್ಮನ್ನು ರಕ್ಷಿಸಿಕೊಳ್ಳಲು ಮತ್ತು ತಮ್ಮ ಬದುಕಿನ ಮಟ್ಟಗಳನ್ನು ಉತ್ತಮಪಡಿಸಿಕೊಳ್ಳಲು ನಿರಂತರ ಬಲಿಷ್ಠ ಹೋರಾಟಗಳಿಂದ ಮಾತ್ರ ಸಾಧ್ಯವಿರುವಂತಹ ಅವಧಿ. ಭವಿಷ್ಯದಲ್ಲಿ ಇಂತಹ ಹೋರಾಟಗಳಿಗೆ ಸಿದ್ಧರಾಗಬೇಕಾದ ಅಗತ್ಯವಿದೆ.



■ ನಕುಲ

ಸೋತ 'ಕಲಾಕಾರ್'

ಸಿನಿಮಾ ಖಯ್ಯಾಲಿ ಹತ್ತಿಸಿಕೊಂಡ ಯುವಕನೊಬ್ಬ ಹೀರೋ ಆಗುವ ಕನಸು ಹೊತ್ತು ಗಾಂಧಿನಗರವೆಂಬ ಸಿನಿಮಾ ಮಾಯಾನಗರಿಯಲ್ಲಿ ಬಿದ್ದು ಅನುಭವಿಸುವ ಪಾಡುಗಳನ್ನು ಚಿತ್ರವಾಗಿಸಿದ್ದಾರೆ ಹರೀಶ್ ರಾಜ್. ಟಿ.ವಿ. ಸೀರಿಯಲ್‌ಗಳಲ್ಲಿ ನಟಿಸುತ್ತಿದ್ದ ಹರೀಶ್ 'ತಾಯಿ ಸಾಹೇಬ' ಮತ್ತು 'ದ್ವೀಪ' ಚಿತ್ರಗಳಲ್ಲಿನ ಸಣ್ಣ ಪಾತ್ರಗಳ ಮೂಲಕ ಗಮನ ಸೆಳೆದವರು. ಆದರೆ ಗಾಂಧಿನಗರದ ಬೇಡಿಕೆಯ ಹೀರೋ ಆಗಲಾರದೆ, ಈಗ ಅವರೇ ನಾಯಕರಾಗಿ, ನಿರ್ದೇಶಕರಾಗಿ ತಮ್ಮ ಮನದ ಅಭಿಲಾಷೆಯನ್ನೇ ಚಿತ್ರಕಥೆಯಾಗಿಸಿ ನಿರ್ಮಿಸಿರುವ ಚಿತ್ರವೇ 'ಕಲಾಕಾರ್'.

ಇದು ಸಿನಿಮಾ ಹುಚ್ಚಿರುವ ಹಲವರ ಕಥೆ. ಸಾಮಾನ್ಯವಾಗಿ ಮಧ್ಯಮ ವರ್ಗದ ಯುವಜನತೆಯ ಕೈಗೆಟುಕದ ಕನಸಾಗಿರುತ್ತದೆ ಇದು (ಗಣೇಶ್, ವಿಜಯ್‌ರವರಂತೆ ಎಲ್ಲೊ ಒಬ್ಬಬ್ಬರಿಗೆ ಅದೃಷ್ಟ ಖುಲಾಯಿಸಬಹುದು). ಆದರೆ ಇಲ್ಲಿನ ನಾಯಕ ಶ್ರೀಮಂತ ಮನೆತನದವನು. ಅಪ್ಪನ ಕಡು ವಿರೋಧದ ನಡುವೆ ಸಿನಿಮಾ ಸೇರಲು ಮಾಡುವ ಪ್ರಯತ್ನ ಒಂದೆರೆಡಲ್ಲ ಮತ್ತು ಎಲ್ಲರಂತೆ ಮೋಸ ಹೋಗುವುದು ತಪ್ಪಲ್ಲ. ಇಂತಹ ಖಯ್ಯಾಲಿಯ ಮಂದಿಗೆ ಟೋಪಿ ಹಾಕುವ ಮಂದಿಯೂ ಸಿನಿಮಾ ರಂಗದಲ್ಲಿದ್ದಾರೆ ಎಂಬ ಸತ್ಯವನ್ನು ಚಿತ್ರ ತೆರೆದಿಡುತ್ತದೆ. ಟೋಪಿ ಹಾಕಿಸಿಕೊಂಡು ಸಾಲ ಮಾಡಿಕೊಂಡ ನಾಯಕ ಮನೆಯ ಅಮೂಲ್ಯ ಪತ್ರಗಳನ್ನೇ ಅಡವಿಡಲು ಹೋಗಿ ತಂದೆ ಕೈಗೆ ಸಿಕ್ಕಿಬಿದ್ದು, ಮನೆಯಿಂದ ಹೊರದಬ್ಬಿಸಿಕೊಳ್ಳುತ್ತಾನೆ.

ಹೀರೋ ಆಗಲು ಸಾಧ್ಯವಾಗದಿದ್ದರೂ ಸಿನಿಮಾ ಒಂದರ ಕ್ಲಾಪ್ ಬಾಯ್ ಆಗುವ ಯೋಗವಂತೂ ಕೂಡಿಬರುತ್ತದೆ ನಾಯಕನಿಗೆ. ಆ ಸಿನಿಮಾದ ನಿರ್ದೇಶಕ ದ್ವಾರಕೀಶ್! ಇಲ್ಲಿಂದ ಕಥೆಗೆ ಸ್ವಲ್ಪ ಟ್ವಿಸ್ಟ್! ಜೊತೆಗೆ ಕನ್ನಡ ಚಿತ್ರೋದ್ಯಮದ ಕಹಿಸತ್ಯದ ಕಟು ವಾಸ್ತವಗಳು ತೆರೆದುಕೊಳ್ಳುತ್ತವೆ. ಸಿನಿಮಾದ ಹೀರೋ(ಧರ್ಮ)ಗೆ ಭಾರಿ ಜಂಭ. ನಿರ್ದೇಶಕರನ್ನೂ ಸೇರಿ ಎಲ್ಲರ ಬಗ್ಗೆಯೂ ಉಡಾಫೆ. ಸಣ್ಣ ಕಾರಣವೊಂದನ್ನು ನೆಪ ಮಾಡಿ ಸಿನಿಮಾಗೆ ಕೈಕೊಟ್ಟಾಗ, ಹೀರೋ ಆಗುವ ಕನಸು ಹೊತ್ತು ಕ್ಲಾಪ್ ಬಾಯ್ ಆಗಿದ್ದ ಈ ಹುಡುಗನನ್ನೇ ಹೀರೋ ಮಾಡುವುದಾಗಿ ಪಣ ತೊಡುತ್ತಾನೆ ನಿರ್ದೇಶಕ.

ಇಲ್ಲಿ ದ್ವಾರಕೀಶ್‌ರ ವೃತ್ತಿಜೀವನದ ಏಳುಬೀಳುಗಳೂ ಅಪ್ರಯತ್ನಪೂರ್ವಕವಾಗಿ ಪ್ರೇಕ್ಷಕನ ಮನದಲ್ಲಿ ಸುಳಿಯುತ್ತವೆ. ಒಬ್ಬ ನಾಯಕನೊಂದಿಗೆ ಹಲವಾರು ಯಶಸ್ವಿ ಚಿತ್ರಗಳನ್ನು ಕೊಟ್ಟು, ಸಣ್ಣ ವೈಮನಸ್ಯದಿಂದ ಯಾರು ಯಾರನ್ನೋ ಹೀರೋ ಮಾಡಲು ಹೋಗಿ ಕೈ ಸುಟ್ಟಿಕೊಂಡಿದ್ದು ಸುಳ್ಳಲ್ಲ. ಹಾಗೆಯೇ ಅವರು ಈ ಚಿತ್ರದಲ್ಲಿ ಹೀರೋಗಳ ನಡವಳಿಕೆಗಳನ್ನು ಖಂಡಿಸುವ ಸಂದರ್ಭದಲ್ಲಿ ನಾಯಕ ವಿಷ್ಣುವರ್ಧನ್ ನೆನಪಾದರೆ ಅದು ಪ್ರೇಕ್ಷಕರ ತಪ್ಪಲ್ಲ!

ನಾಯಕ ಕೊನೆಗೂ ನಾಯಕನಾಗುತ್ತಾನೆ. ಆದರೆ ಬಣ್ಣದ ಮಂದಿಯ ಕಾಲೆಳೆಯುವಿಕೆಯಿಂದ



ಶೂಟಿಂಗ್ ಅರ್ಧಕ್ಕೆ ನಿಲ್ಲುತ್ತದೆ. ಕೊನೆಗೆ ನಾಯಕನ ಅಪ್ಪನೇ ಮಗನಿಗೆ ಗೊತ್ತಿಲ್ಲದಂತೆ ಚಿತ್ರಕ್ಕೆ ಫೈನಾನ್ಸ್ ಮಾಡುತ್ತಾನೆ. ನಾಯಕಿ(ಸುಮನ್ ರಂಗನಾಥ್)ಯೂ ಬೆಂಬಲಕ್ಕೆ ನಿಲ್ಲುತ್ತಾಳೆ. ಚಿತ್ರ ಬಿಡುಗಡೆಗೆ ಮುಂಚೆಯೇ ಸಾಕಷ್ಟು ನಿರೀಕ್ಷೆ ಹುಟ್ಟಿಸುತ್ತದೆ, ಸಾಕಷ್ಟು ಲಾಭಕ್ಕೆ ಮಾರಾಟವೂ ಆಗುತ್ತದೆ.

ನಾಯಕಿ ಈ ಹುಡುಗನನ್ನು ಇಷ್ಟಪಡುತ್ತಾಳೆ. ನಾಯಕ ತನ್ನ ಸ್ನೇಹಿತೆ(ರಾಧಿಕಾ ಗಾಂಧಿ)ಯನ್ನ ಮೆಚ್ಚಿದ್ದರೂ ಅನಿವಾರ್ಯ ಕಾರಣಗಳಿಂದ ಆಕೆಯಿಂದ ದೂರದ ಸರಿದಿರುತ್ತಾನೆ. ಆ ಸ್ನೇಹಿ ಈತನ ಮತ್ತು ನಾಯಕಿಯ ಒಡನಾಟವನ್ನು ಕಂಡು ದುಃಖಿತಳಾಗಿ ಬೇರೊಬ್ಬನ ಕೈಹಿಡಿದು ವಿದೇಶ ಹಾರಲು ಅಣಿಯಾಗುತ್ತಾಳೆ. ಇದನ್ನು ತಿಳಿದ ನಾಯ ಏನೂ ಮಾಡಲು ತೋಚದೆ ಚಡಪಡಿಸುತ್ತಾನೆ ಇದನ್ನು ತಿಳಿದ ನಾಯಕಿ ತನ್ನ ಬಯಕೆಯನ್ನು ಮನದಲ್ಲೇ ಬಚ್ಚಿಟ್ಟು ನಾಯಕ-ಆಕೆಯ ಸ್ನೇಹಿ ಒಂದಾಗಲು ನೆರವಾಗುವುದರೊಂದಿಗೆ ಚಿತ್ರ ಮುಗಿಯುತ್ತದೆ. ಇಲ್ಲಿ ಹಿಂದಿ ಚಿತ್ರ 'ರಂಗೀಲಾ'ದ ಛಾಯೆ ಆವರಿಸಿದೆ. ಪಾತ್ರಗಳು ಅದಲು ಬದಲಷ್ಟೇ

'ಕಲಾಕಾರ್' ಚಿತ್ರ ಹೀನಾಯ ಸೋಲಿನ ಮುಖ ಮಾಡಿದೆ. ಚಿತ್ರಮಂದಿರದಲ್ಲಿ ಬೆರಳೆಣಿಕೆಯ ಮಂದಿ ಇದಕ್ಕೆ ಉದಾಹರಣೆ ಆಕರ್ಷಣೀಯ, ರಂಜನೀಯ ಗೊಳಿಬಹುದಾದಂತಹ ಕಥೆಯಿದ್ದರೂ ನಿರ್ದೇಶಕರಾಗಿ ಹರೀಶ್ ಸೋತಿದ್ದಾರೆ ಹೆಚ್ಚುಕಮ್ಮಿ ಇದೇ ಕಥೆಯನ್ನು ಹೋಲುವ 'ರಂಗೀಲಾ' ನಿರ್ದೇಶಕ ವರ್ಮಾರ ಉತ್ತಮ ನಿರೂಪಣೆಯಿಂದ ಬಹುದೊಡ್ಡ ಯಶಸ್ಸು ಗಳಿಸಿತ್ತು. ಹರೀಶ್ ತಮ್ಮನ್ನು ತಾವೇ ನಾಯಕನಾಗಿ ಪ್ರಮೋಟ್ ಮಾಡಿಕೊಳ್ಳುವ ಸಂದರ್ಭದಲ್ಲಿ, ಅದ ತಕ್ಕದಾದ 'ಸ್ಟೈಲಿಷ್' ನಿರೂಪಣೆ ಇದ್ದಿದ್ದ ಫಲಿತಾಂಶ ಬೇರೆಯಾಗುತ್ತಿತ್ತೇನೋ ಅಭಿನಯದಲ್ಲೂ ಹೆಚ್ಚೇನೂ ಇಲ್ಲ. ಸ್ತ್ರೀ ವೇಷದ ಹರೀಶ್ ಗಮನ ಸೆಳೆದರೂ,ಅಲ್ಲಿನ ಹಾಸ್ಯ ದೃಶ್ಯಗಳು ಸದಭಿರುಚಿಯವಲ್ಲ. ರಾಧಿಕಾ ಗಾಂಧಿಯಂತೂ ಒಂದು ಗೊಂಬೆಯಂತೆ ಬಂದು ಹೋಗುತ್ತಾಳೆ ಇದ್ದುದ್ದರಲ್ಲಿ ಸುಮನ್ ರಂಗನಾಥ್ ಗಮನ ಸೆಳೆಯುತ್ತಾರೆ.

ಕವಿತೆ

ಬಂದೂಕಿನ ಗುಂಡುಗಳ ಮೇಲೆ ನಮ್ಮ ಹೆಸರಿದೆ

ಬೆಂಕಿಯ ನಗೆ ಹೊತ್ತ ಗಾಳಿ
ಹಗಲುಗಳೆದೆಯ ಸೀಳಿ
ಕೇಕೆ ಹಾಕಿ ನಗುವಾಗ
ನಗುವವರಾದರೂ ಯಾರೂ ಹೇಳಿ?

ಮುಚ್ಚದ ಕಣ್ಣರೆಪ್ಪೆಗಳಡಿ
ನಾಳೆಗಳಿಲ್ಲ
ಚರ್ಮದಂಗಿ ತೊಟ್ಟ
ಕಂದಮ್ಮಗಳು
ಕೋಲೂರಿ ಕುಂತವರು
ಹಾಗೇ ಒಣಗಿ ಹೋದ
ದೇಹಗಳ ಚಿತ್ರವಿದೆ!!

ಸ್ವಾತ್* ಕಣಿವೆಯ ಗುಂಟ
ಸಾಗಿ ಬಂದರೆ ಸಾಕು
ಎಂದೋ ಉಂಡ ನೆನಪು
ಅಲ್ಲಲ್ಲಿ ಸತ್ತು ಒಣಗಿ ಬಿದ್ದ
ಚಂದಿರನ ತುಣುಕುಗಳಿವೆ !!

ಉಗ್ರ - ಸೇನರ ಕಾಳಗದಲ್ಲಿ
ಸಿಕ್ಕ ಮಗುವೊಂದು
ರೊಟ್ಟಿ ಹೊತ್ತು ಬರುವ
ಟ್ರಕ್ಕಿಗಾಗಿ ಕಾದು ಕುಳಿತಿದೆ
ತನಗೊಂದು... ತಂಗಿಗೊಂದು
ಅವ್ವನಿಗೊಂದು...ಸಿಕ್ಕರೆ
ಎಂದು ಕನಸು ಕಾಣುತ್ತಾ !!

ಎಸೆವ ರೊಟ್ಟಿಗಳಲಿ
ಯಾರ ಹೆಸರಿದೆಯೋ
ಬಲ್ಲವರಾರು?
ಬಂದೂಕಿನ ಗುಂಡುಗಳ ಮೇಲಂತೂ
ನಮ್ಮ ಹೆಸರುಗಳಿವೆ.

ತಪ್ಪಿಸಿಕೊಂಡು ಓಡಬೇಕಿದೆ
ರೊಟ್ಟಿ ಚೂರುಗಳಿಗಾಗಿ !!

ಬತ್ತಿದ ಮೊಲೆಗಳ ಚೀಪುವ
ಕಂದ
ಟ್ರಕ್ಕಿನ ಹಿಂದ್ಹಿಂದೆ ಓಡಿ
ಅವ್ವ ತರುವ ರೊಟ್ಟಿಯ
ಕನಸು ಕಾಣುತ್ತಿದ್ದಾನೆ !!

ಅವ್ವನ ಹಿಂದ್ಹಿಂದೆ
ಓಡಿಬರುವ ನಾಯಿಗಳು
ಕನಸು
ನುಚ್ಚುನೂರಾಗಿಸಿವೆ
ದೂರ ಸರಿಯುತಿದೆ ಬಾನು
ಕನಸುಗಳ ಮೂಟೆ ಹೊತ್ತು
ದುಃಖ ತುಂಬಿದ ಮೊಗಕೆ
ಯಾರು ನೀನು...?
ಎಂದೂ ಕೇಳದ ನಿರ್ದಯಿ
ಮೃಗ-ಜಗವ ಕಂಡು

ಅಲ್ಲೆಲ್ಲೋ ಬೋರಾಡಿ ಬೋರಾಡಿ
ಅತ್ತ ಸುದ್ದಿಯಿದೆ !!

ಹೇಳಿ ಮತ್ತೆ
ಹಗಲು-ರಾತ್ರಿಗಳು
ಹೀಗೆ
ತುಂಡು ತುಂಡಾಗಿ
ಕತ್ತರಿಸಿ ಬಿದ್ದಿರುವಾಗ
ನಾನು
ನಗುವುದಾದರೂ ಹೇಗೆ?

● ಬಿ. ಶ್ರೀನಿವಾಸ

* ಸ್ವಾತ್: ತಾಲಿಬಾನ್ ನಿರಾಶ್ರಿತರ ಕಣಿವೆ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH